

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 24 ಗುರುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 188 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಚನ್ನಪಟ್ಟಣ ರಾಜಕೀಯ ಚದುರಂಗದಾಟದ ಒಂದು ಅಂಕಣಕ್ಕೆ ತೆರೆ

ಅಂತೂ ಯೋಗೇಶ್ವರ್ 'ಕೈ'ವಶ; ಇಂದು ನಾಮಪತ್ರ ಸಲ್ಲಿಕೆ

● ಬಿಜೆಪಿ–ಜೆಡಿಎಸ್ ತಕರಾರಿಗೆ ತಕ್ಕ ಶಾಸ್ತಿ! ● ಹೊಂಚು ಹಾಕಿದ್ದ ಕಾಂಗ್ರೆಸ್ ಬಾಯಿಗೆ ಬಿತ್ತು ಗೋಲಿ!!



ಬುಧವಾರ ಕೆಪಿಸಿಸಿ ಕಚೇರಿಯಲ್ಲಿ ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್ ಸೇರ್ಪಡೆಗೊಂಡರು. ಈ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ರಾಮಲಿಂಗರೆಡ್ಡಿ, ಜಮೀರ್ ಅಹಮದ್, ಚೆಲುವರಾಯಸ್ವಾಮಿ ಇನ್ನಿತರರನ್ನು ಕಾಣಬಹುದು.

ಬೆಂಗಳೂರು, ಅ. 23– ಚನ್ನಪಟ್ಟಣ ಉಪಚುನಾವಣೆ ಹೊಸ್ತಿಲಲ್ಲಿ ಸಿ.ಪಿ. ಯೋಗೇಶ್ವರ್ ಬಿಜೆಪಿ ತೊರೆದು, ನಿರೀಕ್ಷೆಯಂತೆ ಕಾಂಗ್ರೆಸ್ ಸೇರ್ಪಡೆಗೊಂಡಿದ್ದಾರೆ.

ಈ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಜೆಪಿ ಬಿಟ್ಟುಕೊಟ್ಟಿತ್ತು. ಕೇಂದ್ರ ಸಚಿವ ಕುಮಾರಸ್ವಾಮಿಯವರು ಕೂಡ ಕ್ಷೇತ್ರವನ್ನು ತಮ್ಮ ಪಕ್ಷಕ್ಕೇ ಉಳಿಸಿಕೊಳ್ಳಬೇಕು ಎಂಬ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದರು. ಸಿ.ಪಿ. ಯೋಗೇಶ್ವರ್ ಅವರು ತಮಗೆ ಬಿಜೆಪಿ ಟಿಕೆಟ್ ದೊರೆಯದಿದ್ದರೆ ಪಕ್ಷೇತರರಾಗಿ ಸ್ಪರ್ಧಿಸುವುದಾಗಿ ಬಹಿರಂಗ ಹೇಳಿಕೆ ನೀಡುವ ಮೂಲಕ ತಮ್ಮ ಸ್ಪರ್ಧೆ ಖಚಿತ ಎಂಬ ಸಂದೇಶ ನೀಡಿದಾಗ, ಕುಮಾರಸ್ವಾಮಿಯವರು ಬಿಜೆಪಿ ವರಿಷ್ಠರ ಸಲಹೆಯಂತೆ ತಮ್ಮ ಪಕ್ಷದ ಚಿಹ್ನೆಯಲ್ಲೇ ಯೋಗೇಶ್ವರ್ ಸ್ಪರ್ಧಿಸುವಂತೆ ಆಹ್ವಾನವನ್ನೂ ನೀಡಿದ್ದರು. ಬಿಜೆಪಿಯ ಕೆಲವು ರಾಜ್ಯ ನಾಯಕರು ಕೂಡ ಚನ್ನಪಟ್ಟಣದಲ್ಲಿ ಯೋಗೇಶ್ವರ್ ಸ್ಪರ್ಧೆಗಿಳಿಯಬೇಕು ಎಂದು ಬಹಿರಂಗ ಹೇಳಿಕೆಗಳನ್ನು ನೀಡಿದ್ದರು. ನಿನ್ನೆಯಷ್ಟೇ ಕುಮಾರಸ್ವಾಮಿ, ಬಿಜೆಪಿಯವರೇ ಅಭ್ಯರ್ಥಿಯನ್ನು ಘೋಷಿಸಲಿ ಎಂದು ಬಿಜೆಪಿ ನಾಯಕರಿಗೆ ಸಂದೇಶ ರವಾನಿಸುವ ಮೂಲಕ ಒಂದು ಹಂತದಲ್ಲಿ ಕ್ಷೇತ್ರವನ್ನು ಬಿಟ್ಟುಕೊಟ್ಟಿದ್ದರು. ಆದರೆ, ಬೆಳಗಾಗುವಷ್ಟರಲ್ಲಿ ಚನ್ನಪಟ್ಟಣ ಚದುರಂಗದಾಟದಲ್ಲಿ ಆದದ್ದೇ ಬೇರೆ. ಇಂದು ಮುಂಜಾನೆಯೇ ದೆಹಲಿಯಲ್ಲಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಯೋಗೇಶ್ವರ್ ತಮ್ಮ ರಾಜೀನಾಮೆ ಪತ್ರವನ್ನು ವಾಟ್ಸಾಪ್ ಮೂಲಕ ರವಾನಿಸಿ, ಬಿಜೆಪಿ ತೊರೆದದ್ದಲ್ಲದೇ ಬೆಳಗ್ಗೆ 8 ಗಂಟೆ ಸುಮಾರಿಗೆ ಡಿ.ಕೆ. ಶಿವಕುಮಾರ್ ಮತ್ತು ಡಿ.ಕೆ. ಸುರೇಶ್ ಜೊತೆಗೂಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಅವರಿಂದ ಆಶೀರ್ವಾದ ಪಡೆದರು. ■ 6ನೇ ಪುಟಕ್ಕೆ

ಚನ್ನಪಟ್ಟಣಕ್ಕೆ ಯೋಗೇಶ್ವರ್, ಸಂಡೂರಿಗೆ ಅನ್ನಪೂರ್ಣ ಕಾಂಗ್ರೆಸ್ ಅಭ್ಯರ್ಥಿಗಳು

ನವದೆಹಲಿ, ಅ. 23– ಚನ್ನಪಟ್ಟಣ ಮತ್ತು ಸಂಡೂರು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಎಐಸಿಸಿ ಪ್ರಕಟಿಸಿದ್ದು, ಶಿಗ್ಗಾಂವಿ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಕಗ್ಗಂಟಾಗಿದೆ. ಬಿಜೆಪಿ ತೊರೆದು ಇಂದು ಕಾಂಗ್ರೆಸ್ ಸೇರ್ಪಡೆಯಾದ ಸಿ.ಪಿ. ಯೋಗೇಶ್ವರ್ ಚನ್ನಪಟ್ಟಣ ಕ್ಷೇತ್ರದ ಅಭ್ಯರ್ಥಿಯಾದರೆ, ಸಂಡೂರು ಕ್ಷೇತ್ರದ ಶಾಸಕರಾಗಿದ್ದು, ಲೋಕಸಭಾ ಚುನಾವಣೆಯಲ್ಲಿ ಜಯಗಳಿಸಿ, ಸ್ಥಾನ ತೆರವು ಮಾಡಿದ ತುಕರಾಂ ಪತ್ನಿ ಅನ್ನಪೂರ್ಣ ಅವರನ್ನು ಸಂಡೂರು ಅಭ್ಯರ್ಥಿಯಾಗಿ ಘೋಷಿಸಲಾಗಿದೆ.

ಇಂದಿನಿಂದ ಹಾಸನಾಂಬೆಯ ದರ್ಶನ

ದಿನದ 24 ಗಂಟೆ ಸುರಕ್ಷಿತ ಪವಿತ್ರ ದರ್ಶನಕ್ಕೆ ಅವಕಾಶ



ಹಾಸನಾಂಬೆಯ ದರ್ಶನಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳುತ್ತಿರುವ ಸಿಬ್ಬಂದಿ.

ಹಾಸನ, ಅ.23– ವರ್ಷಕ್ಕೊಮ್ಮೆ ಮಾತ್ರ ಕೆಲವೇ ದಿನಗಳ ಕಾಲ ಭಕ್ತರಿಗೆ ದರ್ಶನ ಕರುಣಿಸುವ ಹಾಸನಾಂಬೆ ದರ್ಶನ ಮತ್ತು ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಇಂದಿನಿಂದ ಆರಂಭವಾಗಲಿದ್ದು, ದೇವಿಯ ಕಣ್ತುಂಬಿಕೊಳ್ಳಲು ಭಕ್ತಗಣ ಕಾತರದಿಂದ ಕಾದಿದೆ.

ನಾಳೆ (ಗುರುವಾರ) ಮಧ್ಯಾಹ್ನ 12 ಗಂಟೆಗೆ ಆದಿಚುಂಚನಗಿರಿ ಮಹಾ ಸಂಸ್ಥಾನದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಸಿದ್ದಗಂಗಾ ಮಠದ ಶ್ರೀ ಸಿದ್ದಗಂಗಾ ಸ್ವಾಮೀಜಿ ಸಾನ್ನಿಧ್ಯದಲ್ಲಿ ಹಾಸನಾಂಬ ಗರ್ಭಗುಡಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ದೇವಸ್ಥಾನದ ಮುಂಭಾಗ ನಂಜರಾಜೇ ಅರಸ್ ಅವರು ಬಾಳೆಕಂದು ಕಡಿಯುತ್ತಾರೆ. ಬಳಿಕ ಶಾಸ್ತ್ರೋಕ್ತವಾಗಿ ಬಾಗಿಲು ತೆರೆಯಲಾಗುವುದು.

ಮೊದಲ ದಿನ ಸಾರ್ವಜನಿಕರಿಗೆ ದೇವರ ದರ್ಶನಕ್ಕೆ ಅವಕಾಶ ಇಲ್ಲದಿದ್ದರೂ, ಆರಂಭದ ದಿನದ ಕ್ಷಣಗಳನ್ನು ಲಕ್ಷಾಂತರ ಮಂದಿ ನೋಡಲು ಕಾದಿರುವ ಕಾರಣ ಸಾಮಾಜಿಕ ಜಾಲತಾಣಗಳು ಹಾಗೂ ಎಲ್ಇಡಿ ಪರದೆಗಳಲ್ಲಿ ನೇರ ಪ್ರಸಾರದ ವ್ಯವಸ್ಥೆ ಮಾಡಲಾಗಿದೆ. ಕಳೆದ ವರ್ಷ ಗರ್ಭಗುಡಿ ಬಾಗಿಲು ಮುಚ್ಚುವಾಗ ಹೊತ್ತಿಸಿಟ್ಟಿದ್ದ ದೇವಿ ಮುಂದಿನ ಜ್ಯೋತಿಗಳು ವರ್ಷ ಕಳೆದರೂ ಆರದೇ ಉರಿಯುತ್ತಿರುತ್ತವೆ. ದೇವಿಗೆ ಮುಡಿಸಿದ ಹೂ ಹಾಗೆಯೇ ಇರುತ್ತದೆ, ನೈವೇದ್ಯ ಬಿಸಿಯಾಗಿಯೇ ಇರುತ್ತದೆ ಎನ್ನುವ ಗತ ಕಾಲದ ನಂಬಿಕೆ ಈಗಲೂ ಇರುವುದರಿಂದ ಹಾಸನಾಂಬೆ ದರ್ಶನೋತ್ಸವ ಎಲ್ಲೆಡೆ ಪ್ರಖ್ಯಾತಿ ಪಡೆದಿದೆ.

ಕಳೆದ ವರ್ಷ ಸುಮಾರು 14 ಲಕ್ಷ ಭಕ್ತರು ಹಾಸನಂಬೆ ದರ್ಶನ ಪಡೆದಿದ್ದರು. ಆ ಸಂಖ್ಯೆ ಈ ಬಾರಿ ಮತ್ತಷ್ಟು ಹೆಚ್ಚಾಗಿ 20 ಲಕ್ಷದ ಗಡಿ ದಾಟಬಹುದು ಎಂದು ಅಂದಾಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತದಿಂದ ಎಲ್ಲಾ ರೀತಿಯ ತಯಾರಿ ಮಾಡಿಕೊಂಡಿದ್ದು ಅಂತಿಮ ಹಂತದ ಸಿದ್ಧತಾ ಕಾರ್ಯಗಳು ಪೂರ್ಣಗೊಂಡಿವೆ. ಜಿಲ್ಲಾಧಿಕಾರಿ ಸಿ.ಸತ್ಯಭಾಮಾ, ಉಪವಿಭಾಗಾಧಿಕಾರಿ ಮಾರುತಿ, ದರ್ಶನೋತ್ಸವದ ಮುನ್ನಾ ದಿನವಾದ ಬುಧವಾರ ದೇವಸ್ಥಾನ ಆವರಣದಲ್ಲಿ ನಿಯೋಜಿತ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಸಭೆ ನಡೆಸಿದರು.

ಅ.25 ರಂದು ಶುಕ್ರವಾರ ಬೆಳಗಿನ ಜಾವ 4 ಗಂಟೆಯಿಂದ ರಾತ್ರಿ 11 ಗಂಟೆವರೆಗೆ ಸಾರ್ವಜನಿಕರಿಗೆ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಅ.26 ರಿಂದ ನ.1ರವರೆಗೆ ಪ್ರತಿದಿನ ಮಧ್ಯಾಹ್ನ 2 ರಿಂದ 3 ಗಂಟೆಯವರೆಗೆ ನೈವೇದ್ಯದ ಸಮಯ ಹೊರತುಪಡಿಸಿ ದಿನದ 24 ಗಂಟೆಯೂ ಭಕ್ತಾದಿಗಳಿಗೆ ದೇವರ ದರ್ಶನ ವ್ಯವಸ್ಥೆ ಮಾಡಲಾಗಿದೆ. ನ.2 ರಂದು ಶನಿವಾರ ಬೆಳಗ್ಗೆ 4 ರಿಂದ ಸಂಜೆ 7 ಗಂಟೆ ಹಾಗೂ ರಾತ್ರಿ 11 ರಿಂದ ಮರುದಿನ ಬೆಳಗ್ಗೆ 6 ಗಂಟೆಯವರೆಗೆ ಅವಕಾಶವಿರುತ್ತದೆ. ಆ ನಂತರ ಗರ್ಭಗುಡಿ ಬಾಗಿಲು ಮುಚ್ಚುವ ■ 6ನೇ ಪುಟಕ್ಕೆ

ಯೋಗೇಶ್ವರ್‌ರಲ್ಲಿ ಕಾಂಗ್ರೆಸ್ ರಕ್ತ ಹರೀತಿದೆ!: ಡಿಕೆಶಿ

ಬೆಂಗಳೂರು, ಅ.23–(ಕೆಎಂಶಿ) ಮಾಜಿ ಸಚಿವ ಸಿ.ಪಿ. ಯೋಗೇಶ್ವರ್ ಅವರಲ್ಲಿ ಕಾಂಗ್ರೆಸ್ ರಕ್ತ ಹರಿಯುತ್ತಿದೆ. ಈ ಕಾರಣಕ್ಕೆ ಯಾವುದೇ ಷರತ್ತುಗಳನ್ನು ವಿಧಿಸದೆ ಅವರು ಮತ್ತೊಮ್ಮೆ ಮರಳಿ ಕಾಂಗ್ರೆಸ್ ಪಕ್ಷ ಸೇರ್ಪಡೆಯಾಗಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು. ಕೆಪಿಸಿಸಿ ಕಚೇರಿಯಲ್ಲಿ ನಡೆದ ಸಿ.ಪಿ.ಯೋಗೇಶ್ವರ್ ಅವರ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಿಂದಲೇ ಅವರ ರಾಜಕಾರಣ ಪ್ರಾರಂಭವಾಗಿತ್ತು. ಮತ್ತೊಮ್ಮೆ ಇದೇ ■ 6ನೇ ಪುಟಕ್ಕೆ

ಮುಡಾ ನಿವೇಶನ ಹಂಚಿಕೆ ಅಕ್ರಮ ಪತ್ತೆಗೆ ಇಡಿಯಿಂದ ವಿಶೇಷ ಸಾಫ್ಟ್‌ವೇರ್ ಬಳಕೆ

5 ರಿಂದ 6 ಸಾವಿರ ನಿವೇಶನಗಳ ಡಿಜಿಟಲೈಸ್ಡ್ ರೆಕಾರ್ಡ್‌ಗಳು, 8000 ದಾಖಲಾತಿ ಪುಟಗಳ ಆಧರಿಸಿ ತನಿಖೆ

ಮೈಸೂರು, ಅ. 23(ಆರ್‌ಕೆ)– ಇಡೀ ದೇಶದಲ್ಲೇ ಸದ್ದು ಮಾಡಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನ ಹಂಚಿಕೆ ಹಗರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ (ಇಡಿ)ದ ಅಧಿಕಾರಿಗಳು, ಫಲಾನುಭವಿಗಳನ್ನು ಪತ್ತೆ ಮಾಡಲು ನೂತನ ತಂತ್ರಜ್ಞಾನದ ಸಾಫ್ಟ್‌ವೇರ್ ಬಳಸುತ್ತಿದ್ದಾರೆಂಬ ವಿಷಯ ಬೆಳಕಿಗೆ ಬಂದಿದೆ.

ಮೈಸೂರಿನ ಮುಡಾ ಕಚೇರಿ ಮೇಲೆ ದಾಳಿ ನಡೆಸಿದ ಇಡಿ ಅಧಿಕಾರಿಗಳು, ಎರಡು ದಿನಗಳ ಕಾಲ ಪರಿಶೀಲನೆ ನಡೆಸಿ ನಿವೇಶನ ಹಂಚಿಕೆ ಸಂಬಂಧ 8000 ಪುಟಗಳ ದಾಖಲಾತಿ ಜಪ್ತಿ ಮಾಡಿ ತನಿಖೆ ನಡೆಸುತ್ತಿದ್ದಾರೆ. ದಾಳಿ ವೇಳೆ ದಾಖಲಾತಿಗಳ ಭೌತಿಕ ಪ್ರತಿಗಳನ್ನು ಸ್ಕ್ಯಾನ್ ಮಾಡಿ ಸಾಫ್ಟ್‌ವೇರ್‌ನಲ್ಲಿ ಅಳವಡಿಸಿ ಫಲಾನುಭವಿಗಳನ್ನು ಪತ್ತೆ ಮಾಡಲು ಪ್ರಕ್ರಿಯೆ ಆರಂಭಿಸಿದ್ದಾರೆನ್ನಲಾಗುತ್ತಿದೆ.

ಪ್ರಸ್ತುತ ಮತ್ತು 2020ರಿಂದೀಚೆಗೆ ಅಸ್ತಿತ್ವದಲ್ಲಿದ್ದ ಆಡಳಿತ ಮಂಡಳಿ ಸದಸ್ಯರು, ಅಧಿಕಾರಿಗಳು, ಸಿಬ್ಬಂದಿ, ಅವರ ಸಂಬಂಧಿಕರು, ಆಪ್ತರು, ಬೇನಾಮಿ ಹೆಸರಿನಲ್ಲಿ ಶೇ. 50:50ರಡಿ, ಪ್ರೋತ್ಸಾಹದಾಯಕ ಹಾಗೂ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಿಸಿಕೊಂಡು ಉಪನೋಂದಣಾಧಿಕಾರಿ ಕಚೇರಿಯಲ್ಲಿ ಕ್ರಯಪತ್ರ ನೋಂದಣಿಯಾಗಿರುವುದನ್ನು ಇಡಿ ಅಧಿಕಾರಿಗಳು ಹೊಸ ಸಾಫ್ಟ್‌ವೇರ್ ಮೂಲಕ ಪತ್ತೆ ಹಚ್ಚಲು ಪ್ರಯತ್ನಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಮುಡಾ ಕಚೇರಿ

ಮೊಬೈಲ್ ನಂಬರ್, ಆಧಾರ್ ಸಂಖ್ಯೆಗಳನ್ನು ಸಂಗ್ರಹಿಸಿರುವ ಅಧಿಕಾರಿಗಳು, ಸಾಫ್ಟ್‌ವೇರ್‌ನಲ್ಲಿ ಅಳವಡಿಸಿ ನಿವೇಶನ ಪಡೆದಿರುವವರ ವಂಶವೃಕ್ಷ, 2020ರಿಂದ ಅವರ ಸಂಪರ್ಕದಲ್ಲಿದ್ದವರು, ಅವರ ಹೆಸರಲ್ಲಿ ನಡೆದಿರುವ ಸ್ಥಿರಾಸ್ತಿ ನೋಂದಣಿ ಪ್ರಕ್ರಿಯೆ, ನಿವೇಶನಗಳ ಖರೀದಿ, ಮಾರಾಟ, ಹಣಕಾಸು ವರ್ಗಾವಣೆ ಮಾಹಿತಿಗಳನ್ನು ತಂತ್ರಾಂಶದ ಮೂಲಕ ಇಡಿ ಅಧಿಕಾರಿಗಳು ಹೊರತೆಗೆಯುತ್ತಿದ್ದಾರೆ. ಈ ಪ್ರಕ್ರಿಯೆಗಾಗಿ ಮುಡಾ ಹಾಲಿ ಮತ್ತು ಮಾಜಿ ಅಧ್ಯಕ್ಷರು, ಆಯುಕ್ತರು, ಕಾರ್ಯದರ್ಶಿಗಳು, ವಿಶೇಷ ಭೂಸ್ವಾಧೀನಾಧಿಕಾರಿಗಳು, ನಗರ ಯೋಜಕ ಸದಸ್ಯರು, ವಿಶೇಷ ತಹಸೀಲ್ದಾರ್‌ಗಳು, ವಲಯಾಧಿಕಾರಿಗಳು, ಇಂಜಿನಿಯರ್‌ಗಳು, ಮುಖ್ಯ ಲೆಕ್ಕಾಧಿಕಾರಿಗಳು, ಸೈಟ್ ಸೆಕ್ಷನ್ ಅಧಿಕಾರಿಗಳು, ಎಲ್ಲಾ ಪ್ರಮುಖ ಅಧಿಕಾರಿಗಳ ಆಪ್ತ ಸಹಾಯಕರು, ಎಲ್ಲಾ ವಿಭಾಗಗಳ ಮ್ಯಾನೇಜರ್‌ಗಳು, ಅಧ್ಯಕ್ಷರು ಮತ್ತು ಆಯುಕ್ತರ ವಾಹನ ಚಾಲಕರುಗಳ ಮೊಬೈಲ್ ದೂರವಾಣಿ ನಂಬರ್‌ಗಳನ್ನೂ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಸಂಗ್ರಹಿಸಿ ತಂತ್ರಾಂಶದಲ್ಲಿ ಅಳವಡಿಸಿದ್ದಾರೆ. ಅಧ್ಯಕ್ಷರು, ಆಯುಕ್ತರುಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಶೇ. 50:50ರ ಅನುಪಾತದಡಿ ಸೈಟ್ ಡೀಲಿಂಗ್‌ನಲ್ಲಿ ತೊಡಗಿದ್ದ ಮಧ್ಯವರ್ತಿಗಳು, ಸಿಂಡಿಕೇಟ್ ಸದಸ್ಯರುಗಳ ಫೋನ್ ನಂಬರ್‌ಗಳನ್ನೂ ಕಲೆ ಹಾಕಿರುವ ಇಡಿ ಅಧಿಕಾರಿಗಳು, ಕಳೆದ 2020ರಿಂದ 2023ರ ಜೂನ್ ಮಾಹೆವರೆಗೆ ಯಾರ ಜೊತೆ ದೂರವಾಣಿ ಸಂಪರ್ಕದಲ್ಲಿದ್ದರು ಎಂಬುದರ ಮಾಹಿತಿಯನ್ನೂ ಸಂಗ್ರಹಿಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆ.

ಸುಲಭ ಶೋಧ: ಮನಿ ಲಾಂಡರಿಂಗ್ ತಡೆ ಕಾಯ್ದೆಯಡಿ ಇಸಿಐಆರ್ ದಾಖಲಿಸಿ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು ■ 6ನೇ ಪುಟಕ್ಕೆ

ವಯನಾಡ್ ಉಪ ಚುನಾವಣೆಗೆ ಪ್ರಿಯಾಂಕಾ ಗಾಂಧಿ ನಾಮಪತ್ರ ಸಲ್ಲಿಕೆ



ವಯನಾಡು ಲೋಕಸಭಾ ಕ್ಷೇತ್ರ ಉಪ ಚುನಾವಣೆಗೆ ಪ್ರಿಯಾಂಕ ಗಾಂಧಿ ನಾಮಪತ್ರ ಸಲ್ಲಿಸಿದರು.

ವಯನಾಡ್, ಅ.23– ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ರಾಜೀನಾಮೆಯಿಂದ ತೆರವಾಗಿದ್ದ ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ನಾಮಪತ್ರ ಸಲ್ಲಿಸಿದ್ದಾರೆ. ಈ ಮೂಲಕ ಮೊದಲ ಬಾರಿಗೆ ಪ್ರಿಯಾಂಕಾ ಗಾಂಧಿ ಚುನಾವಣಾ ಕಣಕ್ಕಿಳಿಯಲಿದ್ದಾರೆ.

ನಾಮಪತ್ರ ಸಲ್ಲಿಕೆ ವೇಳೆ ಪ್ರಿಯಾಂಕಾ ಗಾಂಧಿ ಅವರೊಂದಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಪಕ್ಷದ ಹಿರಿಯ ನಾಯಕರು ಉಪಸ್ಥಿತರಿದ್ದರು. ನಾಮಪತ್ರ ಸಲ್ಲಿಕೆ ಬಳಿಕ ಸಹೋದರ ರಾಹುಲ್‌ಗಾಂಧಿ ■ 6ನೇ ಪುಟಕ್ಕೆ

ಸೊಸೆ ಹೆಸರಲ್ಲಿ ಪಬ್ ತೆರೆಯಲು ಸಿಎಂ ಸಿದ್ದರಾಮಯ್ಯರಿಗೆ 350 ಕೋಟಿ ಎಲ್ಲಿಂದ ಬಂತು!



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಬುಧವಾರ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಗಂಭೀರ ಪ್ರಶ್ನೆ

- ಸಚಿವ ಭೈರತಿ ಸುರೇಶ್ ತನಿಖೆ ಮಾಡಿದ್ರೆ ಸತ್ಯಾಂಶ ಬಟಾ ಬಯಲು
- ಸಿಎಂ ಸಿದ್ದರಾಮಯ್ಯ ಮಾತು ನಂಬಲು ರಾಜ್ಯದ ಜನರೇನು ದಡ್ಡರಲ್ಲ
- ಮುಖ್ಯಮಂತ್ರಿಗೆ ಅಂಟಿರುವ ಭ್ರಷ್ಟತೆ ಬಣ್ಣ ತೊಳೆಯಲು ಎಂದಿಗೂ ಸಾಧ್ಯವಿಲ್ಲ
- ಜೈಲಿಗೆ ಹೋಗಿ ಬಂದ ನಾಗೇಂದ್ರನಿಗೆ ಮೈಸೂರು ಪೇಟ ಹಾಕಿ ಸನ್ಮಾನ!

ಮೈಸೂರು, ಅ.23(ಬಿಎಲ್‌ಯು)– ನನಗೆ ಸ್ವಂತ ಮನೆ ಇಲ್ಲ ಎಂದು ಹೇಳುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಸೊಸೆ ಹೆಸರಲ್ಲಿ ಬೆಂಗಳೂರಿನಲ್ಲಿ 350 ಕೋಟಿ ರೂಪಾಯಿ ಮೌಲ್ಯದ ಪಬ್ ತೆರೆದಿದ್ದಾರೆ. ಅಷ್ಟೊಂದು ಹಣ ಎಲ್ಲಿಂದ ಬಂತು ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಪ್ರಶ್ನಿಸಿದ್ದಾರೆ.

ಜಲದರ್ಶಿನಿ ಅತಿಥಿ ಗೃಹದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಂತ ಮನೆ ಇಲ್ಲ. ನಾನು ಸಾಲಗಾರ ಎಂದೇಳುವ ಸಿದ್ದರಾಮಯ್ಯರಿಗೆ ಇಷ್ಟೊಂದು ಆಸ್ತಿ ಮಾಡಲು ಹಣ ಎಲ್ಲಿಂದ ಬಂತು ಎಂದು ಪ್ರಶ್ನಿಸಿದರು.

ಭೈರತಿ ಸುರೇಶ್ ತನಿಖೆ ಮಾಡಿದರೆ ಸತ್ಯ ಬಯಲು: ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಈ ಪಬ್ ಜನಕರಾಗಿದ್ದು, ಈತನನ್ನು ತನಿಖೆಗೊಳಪಡಿಸಿದರೆ ಪಬ್‌ಗೆ ಹೂಡಿರುವ ಬಂಡವಾಳದ ಹಣ ಸೇರಿದಂತೆ ಮುಡಾ ಹಗರಣದ ಸತ್ಯಾಂಶಗಳು ಬಯಲಿಗೆ ಬರುತ್ತವೆ ಎಂದು ಹೇಳಿದರು.

ನನಗೆ ಸ್ವಂತ ಮನೆ ಇಲ್ಲ, ಸಾಲ ಇದೆ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಇವರು ಹೇಳಿದ ಮಾತನೆಲ್ಲಾ ನಂಬಲು ರಾಜ್ಯದ ಜನರೇನು ದಡ್ಡರಲ್ಲ, ಮೈಸೂರಿನ ಜನರೇನು ಮಂಗರಲ್ಲ ಎಂದು ವಿಶ್ವನಾಥ್ ಟಾಂಗ್ ಕೊಟ್ಟರು. ■ 6ನೇ ಪುಟಕ್ಕೆ

ಸಿ.ಪಿ.ಯೋಗೇಶ್ವರ್ ಕರೆತಂದು ಕಾಂಗ್ರೆಸ್ ಸೋತಿದೆ!

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಸ್ಪರ್ಧಿಸುತ್ತಿ ರುವ ಸಿ.ಪಿ.ಯೋಗೇಶ್ವರ್‌ನನ್ನು ಸೈನಿಕ ಎಂದು ಕರೆಯಬೇಡಿ, ಆತ ಸೈನಿಕ ಕುಲಕ್ಕೆ ಅಪವಾದ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ವಾಗ್ದಾಳಿ ನಡೆ ಸಿದರು. ಯೋಗೇಶ್ವರ್‌ನನ್ನು ಕಾಂಗ್ರೆಸ್‌ಗೆ ಕರೆ ತಂದಿದ್ದಾರೆ. ಈ ಮೋಸಗಾರ ಕಾಂಗ್ರೆಸ್‌ಗೆ ಅನಿವಾರ್ಯವಾದನೇ ಎಂದು ಪ್ರಶ್ನಿಸಿದ ವಿಶ್ವನಾಥ್, ನಾನು ಹುಣಸೂರು ಚುನಾವಣೆಯಲ್ಲಿ ಸ್ಪರ್ಧೆ ಮಾಡಿದಾಗ ಯಡಿಯೂರಪ್ಪ ಚುನಾ ವಣಾ ಖರ್ಚಿಗೆ ಇವನ ಕೈಗೆ ಹಣ, ಸಾಮಗ್ರಿ ನೀಡಿದ್ದರು. ಈತ ಹುಣಸೂರು ಕಡೆಗೆ ತಲೆ ಹಾಕದೆ ಹಣ ಸೇರಿದಂತೆ ಎಲ್ಲವನ್ನು ಹೊತ್ತೊಯ್ದ. ಇಂತಹ ಮೋಸಗಾರನನ್ನು ಕಾಂಗ್ರೆಸ್ ಈಗ ಕರೆ ತಂದು ಸೋತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಫ್ರಾಡ್... ಫ್ರಾಡ್...: ಮುಡಾ ಫ್ರಾಡ್, ವಾಲ್ಮೀಕಿ ಫ್ರಾಡ್ ಜೊತೆಗೆ ಈಗ ಯೋಗೇಶ್ವರ್ ಫ್ರಾಡ್ ಸೇರಿಕೊಂಡಿದ್ದಾನೆ. ಕುಮಾರಸ್ವಾಮಿ ಸೋಲಿಸಲು ಕಾಂಗ್ರೆಸ್‌ಗೆ ಯೋಗೇಶ್ವರ್ ಕರೆದು ಕೊಂಡಿದೆ. ಆದರೆ ಈತ ಕಾಂಗ್ರೆಸ್‌ಗೆ ಅನಿವಾರ್ಯವಾಗಿದ್ದನೆ ಎಂದು ಪ್ರಶ್ನಿಸಿದರು. ಸಿ.ಪಿ.ಯೋಗೇಶ್ವರ್ ಮಗಳೇ ಅಪ್ಪನಿಗೆ ಅವಾಜ್ ಹಾಕುತ್ತಿದ್ದಾಳೆ. ತಂದೆ ಮಾನ–ಮರ್ಯಾದೆ ಕಳೆಯಲು ಮುಂದಾಗಿದ್ದಾಳೆ. ಇಂತಹ ವ್ಯಕ್ತಿಯನ್ನು ಕಾಂಗ್ರೆಸ್ ಕರೆತಂದಿದೆ ಎಂದು ಟೀಕಿಸಿದರು.

ಬೆಂಗಳೂರಲ್ಲಿ ಜಲಪ್ರಳಯ: ಬೆಂಗಳೂರು ಸೇರಿದಂತೆ ಇತರೆಡೆ ಭಾರಿ ಮಳೆಯ ಕಾರಣ ಜಲ ಪ್ರಳಯವಾಗಿದೆ. ಜನರು ದೋಣಿಯಲ್ಲಿ ಸಾಗಬೇಕಾದ ಪರಿಸ್ಥಿತಿ ಇದೆ. ಇಂತಹ ಪರಿಸ್ಥಿತಿಯಲ್ಲಿ ಜನರ ಸಂಕಷ್ಟಕ್ಕೆ ಮಿಡಿಯುವ ಬದಲು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವರೆಲ್ಲಾ ಉಪ ಚುನಾವಣೆಯ ರಾಜಕಾರಣದಲ್ಲಿ ತಲೀನರಾಗಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು. ಮಳೆ ಅನಾಹುತದಲ್ಲಿ ನೊಂದವರಿಗೆ ಪರಿಹಾರ ನೀಡಲು ಈಗ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಒಬ್ಬ ಮುಖ್ಯಮಂತ್ರಿ ಆಡುವ ಮಾತೇ ಇದು ಎಂದು ವಿಶ್ವನಾಥ್ ಪ್ರಶ್ನಿಸಿದರು.

ಸಿದ್ದರಾಮಯ್ಯ, ಕಾಂಗ್ರೆಸ್ ನಿರ್ನಾಮ ಮಾಡಿಯೇ ಹೋಗುತ್ತಾರೆ...!

ನನ್ನ ನಂತರ ಜಲ ಪ್ರಳಯವಾಗುತ್ತದೆ ಎಂಬ 16ನೇ ಲೂಯಿ ಮನಸ್ಥಿತಿ ಸಿದ್ದರಾಮಯ್ಯ ಅವರಲ್ಲಿದೆ. ತನ್ನ ನಂತರ ಕಾಂಗ್ರೆಸ್ ಮುಗಿಯಬೇಕು, ಯಾರೂ ಇರಬಾರದು ಎಂಬ ಮನಃಸ್ಥಿತಿಯ ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷವನ್ನು ನಿರ್ನಾಮ ಮಾಡಿಯೇ ಹೋಗುತ್ತಾರೆ ಎಂದು ಭವಿಷ್ಯ ನುಡಿದರು.


ಕಾಂಗ್ರೆಸ್ ಪಕ್ಷದ ತತ್ವ, ಸಿದ್ಧಾಂತವನ್ನು ಸಿದ್ದರಾಮಯ್ಯ ಹಾಳು ಮಾಡುತ್ತಿದ್ದು, ಇವರನ್ನು ಕಾಂಗ್ರೆಸ್ ಪಕ್ಷಕ್ಕೆ ಕರೆತಂದು ನಾವು ಈಗ ಪಶ್ಚಾತ್ತಾಪಪಡುತ್ತಿದ್ದೇವೆ. ಸಿದ್ದರಾಮಯ್ಯ ರಾಜಕೀಯ ಮೆಟ್ಟಿಲಾಗಿ ಬಳಸಿಕೊಂಡ ಅಹಿಂದ ವರ್ಗಕ್ಕೆ ಏನು ಮಾಡಿಲ್ಲ, ಕುರುಬ ಸಮುದಾಯಕ್ಕೆ ಕೂಡ ಇವರಿಂದ ಯಾವುದೇ ಪ್ರಯೋಜನವಾಗಿಲ್ಲ. ಇದನ್ನು ಜನರು ಅರಿತುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಸಿದ್ದರಾಮಯ್ಯ ಕುರುಬ ಸಮಾಜ ಒಡೆದರು, ಕಾಗಿನೆಲೆ ಮಠ ಒಡೆದರು, ರಾಜಕಾರಣವನ್ನು ಒಡೆದರು. ಈ ಮೂಲಕ ಒಡೆದು ಆಳುವ ಕುತಂತ್ರ ನೀತಿಯನ್ನು ಅನುಸರಿಸುತ್ತಿದ್ದಾರೆ ಎಂದು ವಿಶ್ವನಾಥ್ ಆಪಾದಿಸಿದರು.

ಮೈಸೂರು ಮಿತ್ರ ಗುರುವಾರ 24 ಅಕ್ಟೋಬರ್ 2024

ನಾಟಕ ಪುಸ್ತಕ 'ಸತ್ಯವನ್ನೇ ಹೇಳುತ್ತೇನೆ' ಲೋಕಾರ್ಪಣೆ

ಅ.28, 29, 30ರಂದು ನಾಟಕ ಪ್ರದರ್ಶನ





ಅಡ್ಡಂಡ ಕಾರ್ಯಪ್ಪ

ಮೈಸೂರು,ಅ.23–ಕೊಡಗು ರಂಗಭೂಮಿ ಟ್ರಸ್ಟ್ ವತಿಯಿಂದ ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅವರು ರಚಿಸಿರುವ 'ಸತ್ಯವನ್ನೇ ಹೇಳುತ್ತೇನೆ' ಚರಿತ್ರೆಯ ಉತ್ಖನನ ನಾಟಕ ಪುಸ್ತಕದ ಲೋಕಾರ್ಪಣೆ ಸಮಾರಂಭವನ್ನು ಅಕ್ಟೋಬರ್ 25ರಂದು ಸಂಜೆ 5.30ಕ್ಕೆ ಕಲಾ ಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಚಿತ್ರನಟರೂ ಆದ ರಂಗಕರ್ಮಿ ಪ್ರಕಾಶ್ ಬೆಳವಾಡಿ, ಆದಿತ್ಯ ಅಧಿಕಾರಿ ಆಸ್ಪತ್ರೆಯ ಡಾ.ಚಂದ್ರಶೇಖರ್ ಉಪಸ್ಥಿತರಿರುವರು. ಅಡ್ಡಂಡ ಕಾರ್ಯಪ್ಪ ರಚಿಸಿ, ನಿರ್ದೇಶಿಸಿರುವ 'ಸತ್ಯವನ್ನೇ ಹೇಳುತ್ತೇನೆ' ನಾಟಕವು ಅ.28, 29 ಮತ್ತು 30ರಂದು ಸಂಜೆ 6.30ಕ್ಕೆ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ.

ಅಚ್ಯುತರಿಗೆ ಈಜಿನಲ್ಲಿ 2 ಕಂಚಿನ ಪದಕ



ಮೈಸೂರು, ಅ. 23– ಸ್ವಿಮ್ಮಿಂಗ್ ಫೆಡರೇಷನ್ ಆಫ್ ಇಂಡಿಯಾ, ಕರ್ನಾಟಕ ಒಲಂಪಿಕ್ ಅಸೋಸಿಯೇಷನ್ ಮತ್ತು ಸ್ಪೋರ್ಟ್ಸ್ ಅಥಾರಿಟಿ ಆಫ್ ಕರ್ನಾಟಕದ ಅಂಗಸಂಸ್ಥೆಯಾದ ಕರ್ನಾಟಕ ಸ್ವಿಮ್ಮಿಂಗ್ ಅಸೋಸಿಯೇಷನ್ ವತಿಯಿಂದ ಬೆಂಗಳೂರಿನ ವಿಜಯನಗರ ಈಜುಕೊಳದಲ್ಲಿ ನಡೆದ 25ನೇ ಕರ್ನಾಟಕ ರಾಜ್ಯ ಮಟ್ಟದ ಈಜು ಸ್ಪರ್ಧೆ–2024ರಲ್ಲಿ ಮೈಸೂರಿನ ಶ್ರೀ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಸದಸ್ಯರು ಹಾಗೂ ವೃತ್ತಿಯಲ್ಲಿ ಸನ್ನದು ಲೆಕ್ಕಿಗರಾದ ಎಸ್.ಅಚ್ಯುತ ಅವರು 50 ಮೀ. ಬಟರ್ ಫ್ಲೈ ಮತ್ತು 200 ಮೀ. ಮಿಡ್ಲೇ ಸ್ಪರ್ಧೆಯಲ್ಲಿ ಕ್ರಮವಾಗಿ ಎರಡು ಕಂಚಿನ ಪದಕಗಳನ್ನು ಪಡೆದುಕೊಂಡಿದ್ದಾರೆ.

ಕೆ.ಆರ್.ಬ್ಯಾಂಕ್ ನೂತನ ನಿರ್ದೇಶಕರಿಗೆ ಸನ್ಮಾನ



ಮೈಸೂರಿನ ಕೆ.ಆರ್. ಬ್ಯಾಂಕ್‌ನ ನೂತನ ನಿರ್ದೇಶಕ ನಂ.ಸಿದ್ದಪ್ಪ, ಮಾಜಿ ಅಧ್ಯಕ್ಷ ಪ್ರತಿಧ್ವನಿ ಪ್ರಸಾದ್, ಹಿರಿಯ ನಿರ್ದೇಶಕರಾದ ಜಿ.ಎಂ.ಪಂಚಾಕ್ಷರಿ, ಬಸವರಾಜು ಬಸಪ್ಪ, ಶಿವಪ್ರಕಾಶ್, ಹೆಚ್.ವಿ.ಭಾಸ್ಕರ್, ಹೆಚ್.ಎನ್.ಸರ್ವಮಂಗಳ, ನಾಗಜ್ಯೋತಿ ಪ್ರತಿಧ್ವನಿ ಪ್ರಸಾದ್, ನವೀನ್‌ಕುಮಾರ್, ಅರುಣ್ ಸಿದ್ದಪ್ಪ ಅವರನ್ನು ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷರೂ ಆದ ಕೆ.ಆರ್.ಕ್ಷೇತ್ರದ ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್‌ಕುಮಾರ್ ಅಭಿನಂದಿಸಿದರು. ಆಲನಹಳ್ಳಿ ಪುಟ್ಟಸ್ವಾಮಿ ಇತರರಿದ್ದರು.

ಸರಗಳ್ಳನ ಬಂಧನ; ಒಟ್ಟು 2.80 ಲಕ್ಷ ಮೌಲ್ಯದ 40 ಗ್ರಾಂ ತೂಕದ 2 ಚಿನ್ನದ ಸರ ವಶಕ್ಕೆ

ಕುವೆಂಪುನಗರ ಪೊಲೀಸರ ಯಶಸ್ವಿ ಕಾರ್ಯಾಚರಣೆ; ಸಿಕ್ಕಿಬಿದ್ದ ಖದೀಮ


ಮೈಸೂರು,ಅ.23(ಪಿಎಂ)– ಮಹಿಳೆಯೊಬ್ಬರ ಸರ ಕಸಿದು ಸ್ಕೂಟರ್‌ನಲ್ಲಿ ಪರಾರಿಯಾಗಿದ್ದ ಸರಗಳ್ಳನನ್ನು ಬಂಧಿಸುವಲ್ಲಿ ಕುವೆಂಪುನಗರ ಪೊಲೀಸರು ಯಶಸ್ವಿಯಾಗಿದ್ದು, ಬಂಧಿತನಿಂದ 2.80 ಲಕ್ಷ ರೂ. ಮೌಲ್ಯದ ಒಟ್ಟು 40 ಗ್ರಾಂ ತೂಕದ ಎರಡು ಚಿನ್ನದ ಸರಗಳು ಹಾಗೂ ಕೃತ್ಯಕ್ಕೆ ಬಳಸಿದ್ದ ಸ್ಕೂಟರ್ ಅನ್ನು ವಶಪಡಿಸಿಕೊಳ್ಳಲಾಗಿದೆ.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಪಟ್ಟಣದ ವಿನಯ್ ಕುಮಾರ್ (27) ಬಂಧಿತ ಆರೋಪಿ. ಅ.18ರಂದು ಸಂಜೆ 4.30ರ ಸಮಯದಲ್ಲಿ ನಗರದ ಮಧುವನ ಬಡಾವಣೆಯ ಕ್ರಾಸ್ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಕಮಲ ಎಂಬ ಮಹಿಳೆಯ 2 ಲಕ್ಷ ರೂ. ಮೌಲ್ಯದ 30 ಗ್ರಾಂ ತೂಕದ ಚಿನ್ನದ ಸರ ಕಸಿದು ಪರಾರಿಯಾಗಿದ್ದ. ಈ ಸಂಬಂಧ ಕಮಲ ಅವರು ಕುವೆಂಪುನಗರ ಠಾಣೆಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಕುವೆಂಪುನಗರ ಪೊಲೀಸರು, ಕೃತ್ಯದ ಸ್ಥಳದಲ್ಲಿ ಲಭ್ಯವಾದ ಸಿಸಿಟಿವಿ ಕ್ಯಾಮರಾದ ದೃಶ್ಯಾವಳಿಗಳನ್ನು ಪರಿಶೀಲಿಸಿ, ಆರೋಪಿ ಚಹರೆ ಹಾಗೂ ಆತನ ಹೋಂಡಾ ಆಕ್ಟಿವಾ ಸ್ಕೂಟರ್‌ನ ವಿವರ ವನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದ್ದರು. ಅಂತೆಯೇ ವಿನಯ್‌ಕುಮಾರ್‌ನನ್ನು ಪತ್ತೆಮಾಡಿ ಕೃತ್ಯಕ್ಕೆ ಬಳಸಿದ್ದ 70 ಸಾವಿರ ರೂ. ಮೌಲ್ಯದ ಹೋಂಡಾ ಆಕ್ಟಿವಾ ಸ್ಕೂಟರ್ ಮತ್ತು ಕಳವು ಮಾಡಿದ್ದ 2.80 ಲಕ್ಷ ರೂ. ಮೌಲ್ಯದ ಒಟ್ಟು 40 ಗ್ರಾಂ ತೂಕದ ಎರಡು ಚಿನ್ನದ ಸರಗಳನ್ನು ವಶಪಡಿಸಿಕೊಂಡಿದ್ದಾರೆ.


ಉಪ ಪೊಲೀಸ್ ಆಯುಕ್ತರಾದ ಎಸ್. ಜಾಹ್ನವಿ, ಕೃಷ್ಣರಾಜ ವಿಭಾಗದ ಎಸಿಪಿ ಹೆಚ್.ಬಿ.ರಮೇಶ್ ಕುಮಾರ್ ಉಸ್ತುವಾರಿಯಲ್ಲಿ ಕುವೆಂಪುನಗರ ಪೊಲೀಸ್ ಠಾಣೆ ಪಿಐ ಎಲ್.ಅರುಣ್, ಪಿಎಸ್ಐ ಗೋಪಾಲ್, ಅಪರಾಧ ವಿಭಾಗದ ಸಿಬ್ಬಂದಿಯಾದ ವಿ.ಆನಂದ್, ಕೆ.ಟಿ.ಮಂಜುನಾಥ, ಮಹೇಶ್ವರ್, ಹೆಚ್.ವಿ.ಮಂಜು, ನಾಗೇಶ, ಯಶವಂತ, ಹಜರತ್ ಹಾಗೂ ಸುರೇಶ್ ಆರೋಪಿ ಪತ್ತೆ ಮಾಡುವಲ್ಲಿ ದೂರು ದಾಖಲಾದ 24 ಗಂಟೆಯೊಳಗೆ ಯಶಸ್ವಿಯಾಗಿದ್ದಾರೆ. ಈ ಪತ್ತೆ ಕಾರ್ಯವನ್ನು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಮತ್ತು ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜ್ ಅವರು ಪ್ರಶಂಸಿಸಿದ್ದಾರೆ.

ಬಿಜೆಪಿ ಸದಸ್ಯತ್ವ ಅಭಿಯಾನ



ಚಾಮುಂಡೇಶ್ವರಿ ಕ್ಷೇತ್ರದ ಉದ್ಬೂರಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನ ಮಂಡಲದ ಅಧ್ಯಕ್ಷ ಪೈ.ಟಿ.ರವಿ ಲಕ್ಷ್ಮೀಪುರ ನೇತೃತ್ವದಲ್ಲಿ ನಡೆಯಿತು. ಈ ವೇಳೆ ಮಹಿಳಾ ಮೋರ್ಚಾ ಅಧ್ಯಕ್ಷೆ ಸವಿತಾಗೌಡ, ಎಸ್.ಟಿ.ಮೋರ್ಚಾ ಅಧ್ಯಕ್ಷ ಉಮೇಶ್, ಹಿನಕಲ್ ಮಹಾಶಕ್ತಿ ಕೇಂದ್ರದ ಅಧ್ಯಕ್ಷೆ ಶಾಲಿನಿ ಕುಮಾರ್, ಮಹಿಳಾ ಮೋರ್ಚಾ ಕಾರ್ಯದರ್ಶಿ ಶಶಿ, ಧನರಾಜ್, ವಕೀಲರಾದ ಮಂಜುನಾಥ್, ಮೂರ್ತಿ, ಕೆಂಪಣ್ಣ ಉಪಸ್ಥಿತರಿದ್ದರು.

ನಿಧನ



ಬಿಂಡಿಗನವಿಲೆ ಸುಬ್ಬಲಕ್ಷ್ಮಮ್ಮ

ಮೈಸೂರು: ಮೈಸೂರಿನ ಶ್ರೀರಾಂಪುರ ನಿವಾಸಿ ಬಿಂಡಿಗನವಿಲೆ ಸುಬ್ಬಲಕ್ಷ್ಮಮ್ಮ (98) ಬುಧವಾರ ಬೆಳಗ್ಗೆ ನಿಧನ ರಾದರು. ಮೃತರು ಎಂಟು ಮಂದಿ ಹೆಣ್ಣು ಮಕ್ಕಳು, ಇಬ್ಬರು ಪುತ್ರರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರ ಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ವೆಂಕಟರಾಮಯ್ಯ



ಮೈಸೂರು: ಮೈಸೂರಿನ ಕುವೆಂಪುನಗರ ನಿವಾಸಿ ಎಸ್.ವೆಂಕಟ ರಾಮಯ್ಯ(92) ಬುಧವಾರ ರಾತ್ರಿ ನಿಧನರಾದರು. ಮೃತರು ಪತ್ನಿ ಎಸ್.ಬಿ.ನಾಗರತ್ನ, ಪುತ್ರ ಎನ್.ವಿ.ಮುರುಳಿಧರ್, ಪುತ್ರಿಯರಾದ ಎನ್.ವಿ.ಪದ್ಮಜ, ಎನ್.ವಿ.ಸುಮನ, ಎನ್.ವಿ.ಅನುಪಮಾ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಅ.24) ಮಧ್ಯಾಹ್ನ 1 ಗಂಟೆಗೆ ವಿಜಯನಗರ 2ನೇ ಹಂತದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈವಿವಿ ಪ್ರಾಚ್ಯವಿದ್ಯಾ ಸಂಶೋಧನಾಲಯದ ತಾಳೆಗರಿಗಳು, ಹಸ್ತಪ್ರತಿಗಳ ಸಂರಕ್ಷಣೆ ಕಾರ್ಯ ಡಿಸೆಂಬರ್‌ಗೆ ಪೂರ್ಣ

ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯಿಂದ ಡಿಜಿಟಲೀಕರಣ ಕಾರ್ಯ





ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿರುವ ತಾಳೆಗರಿಗಳು ಮತ್ತು ಅಪರೂಪದ ಹಸ್ತಪ್ರತಿಗಳನ್ನು ಕ್ಯಾಮರಾ ಮೂಲಕ ಫೋಟೋ ಕ್ಲಿಕ್ಕಿಸಿ ಡಿಜಿಟಲೀಕರಣಗೊಳಿಸುತ್ತಿರುವುದು. ಬಲಚಿತ್ರದಲ್ಲಿ ಮೈಸೂರು ವಿವಿ ಪ್ರಾಚ್ಯ ವಿದ್ಯಾ ಸಂಶೋಧನಾಲಯಕ್ಕೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ಕುಲಪತಿ ಡಾ.ಅಹಲ್ಯ ಮತ್ತು ಕುಲಸಚಿವ ವಿಶ್ವನಾಥ್ ಪಿ.ಹಿರೇಮಠ್ ಬುಧವಾರ ಭೇಟಿ ನೀಡಿ ತಾಳೆಗರಿಗಳು ಮತ್ತು ಅಪರೂಪದ ಹಸ್ತಪ್ರತಿಗಳ ಸಂರಕ್ಷಣೆ ವೀಕ್ಷಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಂಶೋಧನಾಲಯದ ನಿರ್ದೇಶಕ ಡಾ.ಡಿ.ಪಿ.ಮಧುಸೂಧನಾಚಾರ್ಯ ಸಂರಕ್ಷಣೆ ಬಗ್ಗೆ ವಿವರಿಸಿದರು.

ಮೈಸೂರು, ಅ.23(ಜಿಎ)–ಮೈಸೂರು ವಿಶ್ವವಿದ್ಯಾಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿರುವ ತಾಳೆಗರಿಗಳು ಮತ್ತು ಅಪರೂಪದ ಹಸ್ತಪ್ರತಿಗಳ ಸಂರಕ್ಷಣೆಯ ಕಾರ್ಯವೂ ಅಂತಿಮ ಹಂತ ತಲುಪಿದ್ದು, ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳ್ಳುವ ಸಾಧ್ಯತೆ ಇದೆ.

ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿರುವ ತಾಳೆಗರಿಗಳು ಮತ್ತು ಅಪರೂಪದ ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣದ ಉದ್ದೇಶದಿಂದ ಮೈಸೂರು ವಿಶ್ವವಿದ್ಯಾಲಯವು 2022ರ ಫೆಬ್ರವರಿ ತಿಂಗಳಲ್ಲಿ ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿತ್ತು. ಅದರಂತೆ ಈ ಸಂಸ್ಥೆಯು ಹಂತಹಂತವಾಗಿ ಸಂರಕ್ಷಣಾ ಕಾರ್ಯ ನಡೆಸಿ, ಈಗಾಗಲೇ ಶೇ.90ರಷ್ಟು ಸಂರಕ್ಷಿಸಿದೆ.

650ರಿಂದ 700 ವರ್ಷಗಳ ಕನ್ನಡ, ಸಂಸ್ಕೃತ, ತಮಿಳು ಮತ್ತು ತೆಲುಗು ಸೇರಿದಂತೆ ವಿವಿಧ ಭಾಷೆಯ ಹಸ್ತಪ್ರತಿಗಳಿದ್ದು, ಇವುಗಳನ್ನು ಬಹಳ ಸೂಕ್ಷ್ಮದಿಂದ ಸಂರಕ್ಷಣೆ ಮಾಡುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದ ವಿವಿಧ ಹಂತದಲ್ಲಿ ಸಂರಕ್ಷಣಾ ಕಾರ್ಯ ನಡೆಯುತ್ತಿದ್ದು, ಎರಡು ತಿಂಗಳ ನಂತರ ಈ ಪ್ರತಿಗಳು ವೆಬ್‌ಸೈಟ್‌ನಲ್ಲಿಯೂ ಲಭ್ಯವಾಗಲಿದೆ.

ತಾಳೆಗರಿಗಳು ಬೂಸ್ಟ್ ಅಥವಾ ಹುಳುಗಳು ತಿಂದಿರುವ ಹಿನ್ನೆಲೆಯಲ್ಲಿ ತಾಳೆಗರಿಗಳನ್ನು ಬ್ರಷ್ ಮೂಲಕ ಸ್ವಚ್ಛಗೊಳಿಸಿದ್ದಾರೆ. ಇದಕ್ಕಾಗಿ ಹ್ಯೂಮಿಗೇಷನ್‌ನ ಕೊಠಡಿಯೊಳಗೆ ಇರಿಸಿ ಬೂಸ್ಟ್ ಇದ್ದರೆ ಟೈಮಾಲ್, ಹುಳು ಮತ್ತು ಅವುಗಳ ಮೊಟ್ಟೆ ಕಂಡುಬಂದರೆ ಪ್ಯಾರಡೈಮಾಲ್ ಕ್ಲೋರ್ ರಾಸಾಯನಿಕಗಳ ಹೊಗೆಯಲ್ಲಿ ಸಂಸ್ಕರಣೆ ಮಾಡಿದ್ದಾರೆ. ದೀರ್ಘ ಕಾಲ ಸಂರಕ್ಷಿಸುವ ಉದ್ದೇಶದಿಂದ ಮಜ್ಜಿಗೆ ಹುಲ್ಲಿನ ಎಣ್ಣೆ ಹಚ್ಚಿ ವಾಸನೆಗೆ ಮತ್ತೆ ಯಾವುದೇ ಹುಳಗಳು ತಾಳೆಗರಿ ಸೇರದಂತೆ ಹಾಗೂ ಗರಿಗಳು ಮತ್ತಷ್ಟು ಮೃದುವಾಗುವ ರೀತಿಯಲ್ಲಿ ತಾಳೆಗರಿಗಳು ಬಹಳಷ್ಟು ವರ್ಷಗಳು ಬಾಳಿಕೆ ಬರುವಂತೆ ಈಗಾಗಲೇ ಮಾಡಿದ್ದಾರೆ. ಮಜ್ಜಿಗೆ ಹುಲ್ಲಿನ ಎಣ್ಣೆಯಲ್ಲಿ ಒಣಗಿದ ಗರಿಗಳನ್ನು ಒಂದು ಕೆಂಪು ಕಾಟನ್ ಬಟ್ಟೆಯಲ್ಲಿ ಸುತ್ತಿಡಲಾಗಿತ್ತು. ನಂತರ ಅದನ್ನು ಡಿಜಿಟಲೀಕರಣ ಮಾಡಲು ಯಾವುದೇ ಜೆರಾಕ್ಸ್ ಮೆಷಿನ್ ಬಳಸದೇ ಫ್ಲಾಟ್‌ಬೆಡ್ ಸ್ಕ್ಯಾನರ್ ಅನ್ನು ಬಳಸುತ್ತಿದ್ದರು. ಏಕೆಂದರೆ ಇದರಿಂದ ತಾಳೆಗರಿಗಳಿಗೆ ಹಾನಿಯಿಲ್ಲ. ಫ್ಲಾಟ್‌ಬೆಡ್ ಸ್ಕ್ಯಾನರ್ ಮೂಲಕ ಪಿಡಿಎಫ್, ಜೆಪಿಜಿ, ಪಿಎನ್‌ಜಿ ಸೇರಿದಂತೆ ಅನೇಕ ವಿಧಾನ ಅನುಸರಿಸಿ, ಅಂತಿಮವಾಗಿ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲು ಸಿದ್ಧತೆ ನಡೆಯುತ್ತಿದೆ. ಮತ್ತೊಂದು ಹಂತವಾಗಿ ಈಗ ಕ್ಯಾಮರಾ ಬಳಸಿಕೊಂಡು ಪ್ರತಿಯೊಂದು ತಾಳೆಗರಿಗಳನ್ನು ಸೂಕ್ತ ಬೆಳಕಿನ ವ್ಯವಸ್ಥೆ ಮಾಡಿಕೊಂಡು ಫೋಟೋ ಕ್ಲಿಕ್ಕಿಸಿ ಮತ್ತೊಂದು ರೀತಿಯಲ್ಲಿ ಡಿಜಿಟಲೀಕರಣ ಮಾಡಲಾಗುತ್ತಿದೆ. ಈ ಎಲ್ಲಾ ಪ್ರಕ್ರಿಯೆಗಳು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳ್ಳಲಿದ್ದು, ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನೂತನ ವೆಬ್‌ಸೈಟ್‌ನ ಗ್ರಂಥಾಲಯದಲ್ಲಿ ದೊರೆಯಲಿದೆ.

> “ತಾಳೆಗರಿಗಳು ಮತ್ತು ಅಪರೂಪದ ಹಸ್ತಪ್ರತಿಗಳ ಸಂರಕ್ಷಣೆಯ ಕಾರ್ಯ ಈಗಾಗಲೇ ಶೇ.90ರಷ್ಟು ಪೂರ್ಣಗೊಂಡಿದೆ. ಇನ್ನು ಎರಡು ತಿಂಗಳೊಳಗೆ ಅಂತ್ಯಗೊಳ್ಳಲಿದೆ. ನಂತರ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನೂತನ ವೆಬ್‌ಸೈಟ್‌ನ ಗ್ರಂಥಾಲಯದಲ್ಲಿ ಹಸ್ತಪ್ರತಿಗಳು ಲಭ್ಯವಿರಲಿದೆ. ಆದರೆ, ತಾಳೆಗರಿಗಳು ದುರುಪಯೋಗವಾಗುವ ದೃಷ್ಟಿಯಿಂದ ಸೂಕ್ತ ದಾಖಲೆ ಒದಗಿಸಿದವರಿಗೆ ಮಾತ್ರ ಫೋಟೋ ಪತ್ರಗಳನ್ನು ನೀಡಲಾಗುತ್ತದೆ.
>
> **–ಡಾ.ಡಿ.ಪಿ.ಮಧುಸೂಧನಾಚಾರ್ಯ, ನಿರ್ದೇಶಕ, ಪ್ರಾಚ್ಯವಿದ್ಯಾ ಸಂಶೋಧನಾಲಯ**

ಅ.26ರಂದು ಪದವೀಧರರ ದಿನಾಚರಣೆ

ಮೈಸೂರು,ಅ.23–ಮೈಸೂರಿನ ಜಿಎಸ್‌ಎಸ್‌ಎಸ್ ಮಹಿಳಾ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಸಂಸ್ಥೆಯ ಪದವೀಧರರ ದಿನಾಚರಣೆಯನ್ನು ಅ.26ರಂದು ಬೆಳಗ್ಗೆ 10 ಗಂಟೆಗೆ ಸಂಸ್ಥೆಯ ಎಂ.ಗೋವಿಂದರಾವ್ ಮೆಮೋರಿಯಲ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ. ಇನ್ಫೋಸಿಸ್ ಉಪಾಧ್ಯಕ್ಷ ವಿನಾಯಕ್ ಹೆಗ್ಡೆ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಜಿಎಸ್‌ಎಸ್‌ಎಸ್ ಅಧ್ಯಕ್ಷ ಡಾ.ಎಂ.ಜಗನ್ನಾಥ್ ಶೆಣೈ ಅಧ್ಯಕ್ಷತೆ ವಹಿಸಲಿದ್ದು, ಉಪಾಧ್ಯಕ್ಷ ಶ್ರೀನಿವಾಸ ಗುಪ್ತ, ವನಜಾ ಬಿ.ಪಂಡಿತ್, ಪ್ರತಾಪ್ ಕುಮಾರ್, ಭರತ್, ಅನುಪಮಾ ಪಂಡಿತ್, ಡಾ.ಶಿವಕುಮಾರ್ ಉಪಸ್ಥಿತರಿರುವರು.

ಅ.27, ನಾಡಿ ಪರೀಕ್ಷೆ

ಮೈಸೂರು, ಅ. 23– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಅ. 27ರಂದು ನಾಡಿ ಪರೀಕ್ಷೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಮಾಹಿತಿಗೆ ಮೊ. 9886 186580 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.



ಅಭಿನಂದನೆ

ಮೈಸೂರಿನ ಅಬಕಾರಿ ಉಪವಿಭಾಗದ ಉಪಅಧೀಕ್ಷಕರಾಗಿ ಅಧಿಕಾರ ವಹಿಸಿಕೊಂಡ ಹೆಚ್.ಕೆ.ರಮೇಶ್ ಅವರನ್ನು ನಿಸರ್ಗ ಮಂಜಣ್ಣ, ಶಾಂತರಾಮ್ ಶೆಟ್ಟಿ, ಮಾಜಿ ಮುಡಾ ಸದಸ್ಯ ಸಿ.ಜಿ. ಶಿವಕುಮಾರ್, ಮಧು, ನವೀನ, ರಂಗಸ್ವಾಮಿ ಅಭಿನಂದಿಸಿದರು.

ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಅವರಿಂದ ಶ್ರೀ ವೈಷ್ಣವ ಸಮಾವೇಶದ ಪ್ರಚಾರ ಸಾಮಗ್ರಿ ಬಿಡುಗಡೆ



ಬೆಂಗಳೂರಿನ ಅರಮನೆ ಮೈದಾನದಲ್ಲಿ ನವೆಂಬರ್ 24ರಂದು ನಡೆಯಲಿರುವ ಬೃಹತ್ ಶ್ರೀ ವೈಷ್ಣವ ಸಮಾವೇಶದ ಪ್ರಚಾರ ಸಾಮಗ್ರಿಗಳನ್ನು ದಿವ್ಯ ಸಾನ್ನಿಧ್ಯ ವಹಿಸಿದ್ದ ಯತಿರಾಜ ಮಠದ ಜಗದ್ಗುರುಗಳಾದ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಬಿಡುಗಡೆಗೊಳಿಸಿದರು.

ಮೈಸೂರು, ಅ. 23–ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಲಕ್ಷ್ಮಿನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಯತಿರಾಜ ಮಠ ಹಾಗೂ ಶ್ರೀ ವೈಷ್ಣವ ಮಹಾಸಭಾ ವತಿಯಿಂದ ಶ್ರೀ ರಾಮಾನುಜ ವಿಶ್ವ ವಿಜಯೋತ್ಸವ 'ನಮ್ಮ ನಡೆ ರಾಮಾನುಜ ರೆಡೆಗೆ' ವೇದವಾಕ್ಯದೊಂದಿಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನವೆಂಬರ್ 24ರಂದು ಬೃಹತ್ ಶ್ರೀ ವೈಷ್ಣವ ಸಮಾವೇಶದ ಪ್ರಚಾರ ಸಾಮಗ್ರಿಗಳನ್ನು, ದಿವ್ಯ ಸಾನ್ನಿಧ್ಯ ವಹಿಸಿದ್ದ ಯತಿರಾಜ ಮಠದ ಜಗದ್ಗುರುಗಳಾದ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಬಿಡುಗಡೆಗೊಳಿಸಿದರು.

ಬಳಿಕ ಆಶೀರ್ವಚನ ನೀಡಿದ ಶ್ರೀಗಳು ಲೋಕಕಲ್ಯಾಣಾರ್ಥವಾಗಿ ಸನಾತನ ಹಿಂದೂ ಧರ್ಮದ ರಕ್ಷಣೆ ಮತ್ತು ಪುನರುತ್ಥಾನಕ್ಕಾಗಿ, ವಿಶಿಷ್ಟಾದ್ವೈತ ಸಿದ್ಧಾಂತದ ಪ್ರತಿಪಾದನಾಚಾರ್ಯ, ಜಗದ್ಗುರು ಭಗವದ್ ಶ್ರೀ ರಾಮಾನುಜಾಚಾರ್ಯರ ದಿವ್ಯ ಸಂದೇಶವನ್ನು ಸಮಾಜದ ಕೊನೆಯ ವ್ಯಕ್ತಿಗೂ ತಲುಪುವಂತೆ ಮಾಡುವುದು ಅತ್ಯಂತ ಅಗತ್ಯವಾಗಿದೆ. 'ನಮ್ಮ ನಡೆ ರಾಮಾನುಜರೆಡೆಗೆ' ಎಂಬ ಧ್ಯೇಯವಾಕ್ಯವನ್ನು ಬೋಧಿಸಿ, ಅಖಿಲ ಕರ್ನಾಟಕ ಶ್ರೀವೈಷ್ಣವ ಮಹಾಸಭಾ ತನ್ನ ಲೋಗೋವನ್ನು ಬಿಡುಗಡೆ ಮಾಡಿದ್ದು, ರಾಜ್ಯಮಟ್ಟದ 'ಶ್ರೀ ರಾಮಾನುಜ ವಿಶ್ವ ವಿಜಯೋತ್ಸವ' ಬೃಹತ್ ಸಮಾವೇಶವನ್ನು ಆಯೋಜಿಸುತ್ತಿದೆ. ಈ ಬೃಹತ್ ಶ್ರೀ ವೈಷ್ಣವ ಸಮಾವೇಶಕ್ಕೆ ಹೆಚ್ಚಿನ ಶ್ರೀವೈಷ್ಣವರು ಭಾಗಿಯಾಗುವ ಮೂಲಕ ಸಮಾವೇಶವನ್ನು ಯಶಸ್ವಿಗೊಳಿಸಬೇಕೆಂದು ಹೇಳಿದರು.

ಈ ಮಹಾ ಸಮಾವೇಶಕ್ಕೆ ನಿಮಗಿರುವ ಪಾತ್ರವನ್ನು ಮುನ್ನಡೆಸಿ, ನೀವು ಕೂಡ ಕಮಿಟಿಗಳನ್ನು ರಚಿಸಿ, ಶ್ರೀವೈಷ್ಣವರನ್ನು ಸಂಘಟಿಸಿ, ಭಗವಂತನ ಕೃಪೆಗೆ ಮತ್ತು ಆಚಾರ್ಯರ ಅನುಗ್ರಹಕ್ಕೆ ಪಾತ್ರರಾಗಬೇಕು. ಈ ಮಹಾ 'ಶ್ರೀ ರಾಮಾನುಜ ವಿಶ್ವ ವಿಜಯೋತ್ಸವ' ಸಮಾವೇಶವನ್ನು ಶ್ರೇಷ್ಠ ಮಟ್ಟದಲ್ಲಿ ಯಶಸ್ವಿಗೊಳಿಸೋಣ ಎಂಬ ಆದೇಶವನ್ನು ಶ್ರೀಯವರು ನೀಡಿದ್ದಾರೆ.

ಶ್ರೀ ವೈಷ್ಣವ ಸಮಾಜದ ಮುಖಂಡರಾದ ಯೋಗನರಸಿಂಹನ್ (ಮುರುಳಿ) ಮೈಸೂರಿನಿಂದ 5000ಕ್ಕೂ ಹೆಚ್ಚು ಶ್ರೀ ವೈಷ್ಣವರು ಈ ಸಮಾವೇಶಕ್ಕೆ ಭಾಗಿಯಾಗಲು ಮುಂದಾಗುತ್ತೇವೆ ಹಾಗೂ ಸಮಾವೇಶಕ್ಕೆ ತನು,ಮನ, ಧನ ಸಹಕಾರ ನೀಡುತ್ತೇವೆ ಎಂದು ಹೇಳಿದರು.

ಎಸ್.ವಿ.ಎಲ್.ಎನ್ ಆಚಾರ್, ವೀರ ರಾಘವಾಚಾರ್, ಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಟಿ.ಎಸ್.ಅರುಣ್, ಚಕ್ರಪಾಣಿ, ಅರ್ಚಕ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ಪುಟ್ಟಸ್ವಾಮಿ, ಸಿ.ವಿ.ಪಾರ್ಥಸಾರಥಿ, ಶ್ರೀನಿವಾಸ್ ಪ್ರಸಾದ್, ಶಾಂತರಾಮ್ ಹಾಗೂ ನೂರಾರು ಶಿಷ್ಯರು ಹಾಗೂ ಅನೇಕ ಜಿಲ್ಲೆಯ ಸಂಘ ಸಂಸ್ಥೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.10.2024 ಗುರುವಾರ, ಮಳೆ ನಕ್ಷತ್ರ: ಸ್ವಾತಿ, 24.10.2024 ರಿಂದ 05.11.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ ಸಂಜೆ 4.30 ರವರೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣೆ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ

■ **ಕನ್ನಡ ಜಾನಪದ ಪರಿಷತ್, ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ :** 8ನೇ ವಾರ್ಷಿಕೋತ್ಸವ ಸಮಾರಂಭ, ಮೈಸೂರು ಜಿಲ್ಲಾ ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ ಹಾಗೂ ಮೈಸೂರು ಜಿಲ್ಲಾ ಯುವ ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಮಾಜಿ ಸಚಿವ ಎಂ. ಶಿವಣ್ಣ, ಅಧ್ಯಕ್ಷತೆ : ಕನ್ನಡ ಜಾನಪದ ಪರಿಷತ್ ಗೌರವಾಧ್ಯಕ್ಷ ಹೆಚ್.ಪಿ.ಮಂಜುನಾಥ್, ಸಾಧಕರಿಗೆ ಗೌರವ ಸಮರ್ಪಣೆ : ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಪ್ರಾಸ್ತಾವಿಕ ನುಡಿ: ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಹೆಚ್.ಕ್ಯಾತನಹಳ್ಳಿ ಪ್ರಕಾಶ್, ಮುಖ್ಯ ಅತಿಥಿಗಳು: ಶಾಸಕ ಅನಿಲ್ ಚಿಕ್ಕಮಾದು, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕರ್ನಾಟಕ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ. ಸುಬ್ರಮಣ್ಯ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ ಅಧ್ಯಕ್ಷ ಎಂ. ರಾಮಪ್ಪ, ಮೈಸೂರು ಜಿಲ್ಲಾ ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಉಮೇಶ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್.ಆರ್. ರವಿಕುಮಾರ್, ಸ್ಥಳ: ಇಎಂಆರ್‌ಸಿ ಸಭಾಂಗಣ, ಗಾಂಧಿ ಭವನದ ಹತ್ತಿರ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಅಭಿವೃದ್ಧಿ ಸಿಲ್ಕ್ ಇಂಡಿಯಾ :** ದೀಪಾವಳಿ ಹಬ್ಬದ ಪ್ರಯುಕ್ತ ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ.

■ **ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ, ಕರ್ನಾಟಕ ಸ್ಟೇಟ್ ಯೂತ್ ನೆಟ್‌ವರ್ಕ್ :** ಮೈಸೂರು ಜಿಲ್ಲೆಯ ಪರಿಸರ ಸಂರಕ್ಷಣೆಯಲ್ಲಿ ಸರ್ಕಾರ ಹಾಗೂ ಸಾರ್ವಜನಿಕರ ಪಾಲ್ಗೊಳ್ಳುವಿಕೆ ಕುರಿತು ಸಮಾಲೋಚನಾ ಸಭೆ, ಉದ್ಘಾಟನೆ : ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ್ ರೆಡ್ಡಿ, ಅಧ್ಯಕ್ಷತೆ : ಪ್ರಗತಿಪರ ಚಿಂತಕ ಡಾ. ಕೆ. ಕಾಳಚನ್ನೇಗೌಡ, ಮುಖ್ಯ ಅತಿಥಿಗಳು : ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಶರೀಫ್, ಪರಿಸರವಾದಿ ಪ್ರೊ. ಯು.ಎನ್. ರವಿಕುಮಾರ್, ಪರಿಸರ ಬಳಗದ ಸಂಸ್ಥಾಪಕ ಸದಸ್ಯ ಪರಶುರಾಮೇಗೌಡ, ಸ್ಥಳ: ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ :** ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ, ಸ್ಥಳ: ವೈದ್ಯರ ಭವನ, ನಾಗಮ್ಮ ಆಸ್ಪತ್ರೆ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಹಾಸನಾಂಬೆ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಜಿಲ್ಲಾಡಳಿತ, ಹಾಸನ, 8.45 ಕನ್ನಡ ಚಿತ್ರಗೀತೆಗಳು, 9.45 ಹಾಸನ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಜಿಲ್ಲಾ ಪ್ರವಾಸೋದ್ಯಮ ಇಲಾಖೆ, ಹಾಸನ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್. ಕೆ. ಶ್ರೀಕಂಠನ್ ಮತ್ತು ಆರ್. ಎಸ್. ರಮಾಕಾಂತ್–ಯುಗಳ ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಕಾಡಿನಲ್ಲಿನ ಕಥೆಗಳು. ಭಾಗವಹಿಸುತ್ತಾರೆ : ಪರಿಸರ ಬರಹಗಾರ ಹಾಗೂ ವರದಿಗಾರರಾದ ಭಾನುತೇಜ್, ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.30 ದೇವರನಾಮ–ಭೀಮ್‌ಸೇನ್ ಜೋಶಿ, 12.45 ಚಿತ್ರಗೀತೆಗಳು, 1.20 ಹಾಸನಾಂಬೆ ದರ್ಶನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಜಿಲ್ಲಾಡಳಿತ, ಹಾಸನ, 1.25 ಭಾವಗೀತೆಗಳು–ಹೇಮಾ. ಎನ್, 2.40 ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 6.10 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ: ಜಯಶ್ರೀ ಹೆಗಡೆ, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ರೈತ ಉತ್ಪಾದಕ ಸಂಸ್ಥೆಗಳ ಮೂಲಕ ಉತ್ಪನ್ನಗಳ ಮಾರಾಟ ಹಾಗೂ ರಫ್ತು ಕುರಿತ ನೇರ ಫೋನ್ ಇನ್ ಕಾರ್ಯಕ್ರಮ, ಭಾಗವಹಿಸುತ್ತಾರೆ : ಕರ್ನಾಟಕ ಲಘು ಉದ್ಯೋಗ ಭಾರತಿ ಶಾಖೆಯ ಕಾರ್ಯದರ್ಶಿ ಸಿ.ಎನ್. ಭೋಜರಾಜ್, ಪ್ರಸ್ತುತಿ: ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಹಲೋ ಯುವವಾಣಿ–ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ವಿಶೇಷ ರಸಪ್ರಶ್ನೆ ಕಾರ್ಯಕ್ರಮ, ನಡೆಸಿಕೊಡುತ್ತಾರೆ : ನಿವೇದಿತಾ. ಹೆಚ್, 8.30 ರೇಡಿಯೋ ಸರಣಿ 'ಸ್ವಚ್ಛ ಆನಂದ', ರಚನೆ –ಎ.ಎಸ್. ಪ್ರಕಾಶ್, ನಿರ್ಮಾಣ–ಉಮೇಶ್. ಎಸ್.ಎಸ್, 9.30 ಕನ್ನಡ ಭಾರತಿ, 10.00 ನಾಟಕ : ಸಹದೇವನ ಗುಟ್ಟು, ಮೂಲಕಥೆ –ಮನು, ಬಾನುಲಿ ನಾಟಕ ರೂಪಾಂತರ–ಎಸ್. ಕೆ. ಸುಬ್ಬಣ್ಣ, ನಿರ್ಮಾಣ–ಪ್ರಭುಸ್ವಾಮಿ ಮಳೀಮಠ್, 10.30 ಸವಿನೆನಪು

ಮೈಸೂರು ಮಿತ್ರ ಗುರುವಾರ 24 ಅಕ್ಟೋಬರ್ 2024

ಜೆಎಸ್‌ಎಸ್‌ಎಸ್ ಸಂಸ್ಥೆಗಳ ಗೌರವ ಕಾರ್ಯದರ್ಶಿ

ವನಜ ಪಂಡಿತ್ ಇನ್ನಿಲ್ಲ



ವನಜ ಬಿ.ಪಂಡಿತ್

ಮೈಸೂರು, ಅ. 23(ಆರ್‌ಕೆ)– ಗೀತಾ ಶಿಶು ಶಿಕ್ಷಣ ಸಂಘ (ಜಿಎಸ್‌ಎಸ್‌ಎಸ್) ಸಮೂಹ ಸಂಸ್ಥೆಗಳ ಗೌರವ ಕಾರ್ಯದರ್ಶಿ ವನಜ ಬಿ.ಪಂಡಿತ್(82) ಅವರು ಮಂಗಳವಾರ ರಾತ್ರಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೈಸೂರಿನ ಹೆಬ್ಬಾಳ್‌ನಲ್ಲಿರುವ ಪುತ್ರಿ ಮನೆಯಲ್ಲಿ ವಾಸಿಸುತ್ತಿದ್ದ ಅವರು, ಪುತ್ರಿ ಅನುಪಮ ಪಂಡಿತ್, ಅಳಿಯಂದಿರು, ಮೊಮ್ಮಕ್ಕಳು, ಸಂಬಂಧಿಕರು, ಶಿಷ್ಯವೃಂದ, ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯೂ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಪಾರ್ಥಿವ ಶರೀರವನ್ನು ಇಂದು ಮಧ್ಯಾಹ್ನ ಸಿದ್ಧಾರ್ಥನಗರದ ಜಿಎಸ್‌ಎಸ್‌ಎಸ್ ಸಂಸ್ಥೆಯಲ್ಲಿ ಅಂತಿಮ ದರ್ಶನಕ್ಕಿರಿಸಿ, ಬಳಿಕ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನ ಎಸ್‌ಜೆಸಿಇ ಭೌತಶಾಸ್ತ್ರ ವಿಭಾಗದ ನಿವೃತ್ತ ಮುಖ್ಯಸ್ಥರು, ಪ್ರಾಧ್ಯಾಪಕರೂ ಆಗಿದ್ದ ದಿವಂಗತ ಪ್ರೊ. ಬಿ.ಎಸ್. ಪಂಡಿತ್ ಅವರು ಗೀತಾ ಶಿಶು ಶಿಕ್ಷಣ ಸಂಘವನ್ನು ಸ್ಥಾಪಿಸಿದ್ದರು. ಗೀತಾ ಭಾರತಿ ಪ್ರಾಥಮಿಕ ಶಾಲೆ, ಬಂಟ್ವಾಳ ಮಾಧವ ಶೆಣೈ ಪ್ರೌಢಶಾಲೆ, ಬದ್ರಿಪ್ರಸಾದ್‌ಜೀ ಪದವಿ ಪೂರ್ವ ಕಾಲೇಜು, ಕೆ. ನರಸಯ್ಯ ಮತ್ತು ಕೆ. ವೆಂಕಟಸುಬ್ಬಮ್ಮ ಕಂಪ್ಯೂಟರ್ ಸೆಂಟರ್, ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜು, ಜಿಎಸ್‌ಎಸ್‌ಎಸ್ ಇಂಜಿನಿಯರಿಂಗ್ ಕಾಲೇಜು ಮತ್ತು ಜಿಎಸ್‌ಎಸ್‌ಎಸ್ ಮ್ಯಾನೇಜ್‌ಮೆಂಟ್ ಕಾಲೇಜುಗಳನ್ನು ಅವರು ನಡೆಸುತ್ತಿದ್ದರು.

ಶಿಕ್ಷಣ ತಜ್ಞರಾಗಿ ಪ್ರೊ.ಬಿ.ಎಸ್. ಪಂಡಿತ್ ತಾಂತ್ರಿಕ ಶಿಕ್ಷಣದಲ್ಲಿ 40 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಮೇಟಗಳ್ಳಿಯ ಕೆಆರ್‌ಎಸ್ ರಸ್ತೆಯಲ್ಲಿ ಜಿಎಸ್‌ಎಸ್‌ಎಸ್ ಮಹಿಳಾ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಸಂಸ್ಥೆಯನ್ನು 2003ರಲ್ಲಿ ಆರಂಭಿಸಿದ್ದು, ಅದು ರಾಜ್ಯದಲ್ಲೇ ಮೊದಲ ಮಹಿಳಾ ಇಂಜಿನಿಯರಿಂಗ್ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು.

ಪ್ರೊ.ಬಿ.ಎಸ್.ಪಂಡಿತ್ ಅವರ ನಿಧನದ ನಂತರ 2008ರಲ್ಲಿ ಅವರ ಪತ್ನಿ ವನಜ ಬಿ. ಪಂಡಿತ್ ಸಂಸ್ಥೆಯನ್ನು ಮುನ್ನಡೆಸಿಕೊಂಡು ಬಂದಿದ್ದರು. ಮಹಿಳೆಯರ ಸಬಲೀಕರಣಕ್ಕೆ ಶಿಕ್ಷಣ ಅತ್ಯವಶ್ಯ ಎಂದು ಅರಿತಿದ್ದ ಅವರು, ಮಹಿಳಾ ಕಾಲೇಜುಗಳ ಶಿಕ್ಷಣದ ಗುಣಮಟ್ಟ ಹೆಚ್ಚಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಲಕ್ಷಾಂತರ ಜನರ ಆಕರ್ಷಿಸಿ ಮನಸೂರೆಗೊಂಡ

ಸುಂದರ–ಸುರಕ್ಷಿತ ದಸರಾ ದೀಪಾಲಂಕಾರ ಆಫ್

130 ಕಿ.ಮೀ., 65ಕ್ಕೂ ಹೆಚ್ಚು ವೃತ್ತಗಳಲ್ಲಿ ಮಿನುಗಿದ ಅಸಂಖ್ಯಾತ ವಿದ್ಯುತ್ ದೀಪಗಳು





ಬುಧವಾರ ರಾತ್ರಿ ಅರಮನೆ ವಿದ್ಯುತ್ ದೀಪಾಲಂಕಾರ ವೀಕ್ಷಣೆಗಾಗಿ ಸಾಕಷ್ಟು ಸಂಖ್ಯೆಯಲ್ಲಿ ಜನತೆ ನೆರೆದಿದ್ದರು.

ಮೈಸೂರು,ಅ.23(ಪಿಎಂ)– ಲಕ್ಷಾಂತರ ಜನರ ಆಕರ್ಷಿಸಿ ಮನಸೂರೆಗೊಂಡ ನಗರದಲ್ಲಿನ ವಿದ್ಯುತ್ ದೀಪಾಲಂಕಾರ ವೀಕ್ಷಣೆಗೆ ಬುಧವಾರ ರಾತ್ರಿಯೂ ಸಾಕಷ್ಟು ಮಂದಿ ನೆರೆದಿದ್ದರು. ಆ ಮೂಲಕ ಕೊನೆ ದಿನವೂ ವಿದ್ಯುತ್ ದೀಪಗಳ ಪ್ರಭೆಯಲ್ಲಿ ಸೆಲ್ಫಿ, ಫೋಟೋಗ್ರಫಿ ಮತ್ತು ರೀಲ್ಸ್‌ಗಳನ್ನು ಮಾಡಿ ಸಂಭ್ರಮಿಸಿದರು.

ದಸರಾ ಪ್ರಯುಕ್ತ ಮೈಸೂರು ನಗರದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್) ವ್ಯವಸ್ಥೆಗೊಳಿಸಿದ್ದ ವಿದ್ಯುತ್ ದೀಪಾಲಂಕಾರಕ್ಕೆ ಬುಧವಾರ ರಾತ್ರಿ ತೆರೆ ಬಿದ್ದಿತು. ಅರಮನೆ ಸುತ್ತಲಿನ ರಸ್ತೆಗಳು ಸೇರಿದಂತೆ ನಗರದ 130 ಕಿ.ಮೀ. ವ್ಯಾಪ್ತಿಯ ರಸ್ತೆಗಳಲ್ಲಿ ಮಾಡಿದ್ದ ದೀಪಾಲಂಕಾರ ಮತ್ತು ವಿವಿಧೆಡೆ ವಿದ್ಯುತ್ ದೀಪಗಳಿಂದಲೇ ನಿರ್ಮಿಸಿದ್ದ 65ಕ್ಕೂ ಹೆಚ್ಚು ಕಲಾಕೃತಿಗಳು ದೇಶ–ವಿದೇಶದ ಪ್ರವಾಸಿಗರು ಹಾಗೂ ಸ್ಥಳೀಯರ ಮನಸೆಳೆಯುವಲ್ಲಿ ಯಶಸ್ವಿಯಾಗಿದೆ.

ಇಂದು ರಾತ್ರಿ 7.30ರ ಸುಮಾರಿನಲ್ಲಿ ಅರಮನೆಯ ಸುತ್ತಲಿನ ರಸ್ತೆಗಳು ಹಾಗೂ ದೇವರಾಜ ರಸ್ತೆಯಲ್ಲಿ ವಿದೇಶಿ ಪ್ರವಾಸಿಗರೂ ಸೇರಿದಂತೆ ಸಾಕಷ್ಟು ಸಂಖ್ಯೆಯ ಜನತೆ ದೀಪಾಲಂಕಾರ ಕಣ್ತುಂಬಿ ಕೊಂಡರು. ದಸರಾ ಉದ್ಘಾಟನೆಯಾದ ಅ.3ರಿಂದ ಬುಧವಾರದವರೆಗೆ (ಅ.23) ಪ್ರತಿದಿನ ರಾತ್ರಿ 7 ಗಂಟೆಯಿಂದ 10 ಗಂಟೆಯವರೆಗೆ ಬೆಳಗುತ್ತಿದ್ದ ವಿದ್ಯುತ್ ದೀಪಾಲಂಕಾರಕ್ಕೆ ಲಕ್ಷಾಂತರ ಜನ ಮನಸೋತು ಸಂಭ್ರಮಿಸಿದ್ದಾರೆ.

ದಸರಾ ಸಂದರ್ಭದ ದಿನಗಳಲ್ಲಿ (ಅ.3ರಿಂದ 12ರವರೆಗೆ) ಕಿಕ್ಕಿರಿದು ಜನ ವಿದ್ಯುತ್ ದೀಪಗಳ ಚಮತ್ಕಾರವನ್ನು ಆಸ್ವಾದಿಸಿದ್ದು, ಆ ನಂತರದ ದಿನಗಳಲ್ಲಿ ತುಸು ಇಳಿಕೆಯಾದರೂ ಸಾಕಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಜನ ರಸ್ತೆಗಿಳಿದು ವಿದ್ಯುತ್ ದೀಪಗಳ ಬೆಳಕಿನ ಸೌಂದರ್ಯವನ್ನು ನೋಡಿ ಆನಂದಿಸಿದ್ದಾರೆ. ಸೆಸ್ಕ್‌ನ ಸೂಕ್ತ ಕ್ರಮಗಳ ಕಾರಣ ಯಾವುದೇ ಅವಘಡಗಳಿಲ್ಲದೆ, ದೀಪಾಲಂಕಾರ ಸುರಕ್ಷಿತವಾಗಿ ಸಮಾಪ್ತಿಗೊಂಡಿದೆ. ಎಂದಿನಂತೆ ಬುಧವಾರ ರಾತ್ರಿಯೂ ತೆರೆದ ಕಾರು, ದ್ವಿಚಕ್ರ ವಾಹನ ಸೇರಿದಂತೆ ವಿವಿಧ ವಾಹನಗಳಲ್ಲಿ ಪ್ರವಾಸಿಗರು ಹಾಗೂ ಸ್ಥಳೀಯರು ವಿದ್ಯುತ್ ದೀಪಗಳ ಶೃಂಗಾರವನ್ನು ಕಣ್ತುಂಬಿಕೊಂಡರು. ಈ ವೇಳೆ ಕಿಕ್ಕಿರಿದ ಜನ–ವಾಹನ ದಟ್ಟಣೆ ಕಂಡು ಬಂದಿಲ್ಲವಾದರೂ ಸಾಕಷ್ಟು ಸಂದಣಿ ಇದ್ದಿತು. ಈ ಹಿಂದಿನ ದಿನಗಳಂತೆ ಭಾರಿ ನಿಬಿಡತೆ ಇಲ್ಲದ ಹಿನ್ನೆಲೆಯಲ್ಲಿ ಅರಮನೆ ಸುತ್ತಲಿನ ರಸ್ತೆಗಳಲ್ಲಿ ವಿಧಿಸಿರುವ (ಅ.23ರವರೆಗೆ ಪ್ರತಿದಿನ ಸಂಜೆ 4ರಿಂದ ರಾತ್ರಿ 12ರವರೆಗೆ) ಆಂಟಿ ಕ್ಲಾಕ್‌ವೈಸ್‌ಗೆ ವಿರುದ್ಧ ದಿಕ್ಕಿನ ಏಕಮುಖ ವಾಹನ ಸಂಚಾರಕ್ಕೆ ವಿನಾಯಿತಿ ನೀಡಿರುವುದು ಬುಧವಾರ ರಾತ್ರಿ ಸುಮಾರು 7.30ರಲ್ಲಿ ಕಂಡು ಬಂದಿತು. ಭಾರಿ ಜನ ಹಾಗೂ ವಾಹನ ದಟ್ಟಣೆ ಇಲ್ಲದ ಕಾರಣ ಕಳೆದ ಮೂರು ದಿನಗಳಿಂದ ಏಕ ಮುಖ ಸಂಚಾರಕ್ಕೆ ಕ್ರಮ ವಹಿಸಿಲ್ಲವೆಂದು ಇದೇ ವೇಳೆ ಅರಮನೆ ಜಯಮಾರ್ತಾಂಡ ದ್ವಾರದ ಎದುರು ಬೆಂಗಳೂರು–ನೀಲಗಿರಿ ರಸ್ತೆಯಲ್ಲಿ ಕರ್ತವ್ಯದಲ್ಲಿದ್ದ ಸಂಚಾರ ಪೊಲೀಸ್ ಪೇದೆಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಇಂದು ರಾತ್ರಿ ಅಂಬಾರಿ ಡಬಲ್ ಡೆಕ್ಕರ್ ಬಸ್‌ಗಳಲ್ಲೂ ಜನತೆ ವಿದ್ಯುತ್ ದೀಪಾಲಂಕಾರ ಕಣ್ತುಂಬಿಕೊಂಡರು. ಒಂದರ ಹಿಂದೆ ಒಂದರಂತೆ ಅಂಬಾರಿ ಬಸ್‌ಗಳು ಸಾಗುತ್ತಿರುವುದು ಕಂಡುಬಂದಿತು. ಒಟ್ಟಾರೆ 21 ದಿನಗಳ ವಿದ್ಯುತ್ ದೀಪಾಲಂಕಾರ ಸುರಕ್ಷಿತವಾಗಿ ಮುಗಿದಿದ್ದು, ಬುಧವಾರ ರಾತ್ರಿ 10ರ ಬಳಿಕವೇ ವಿದ್ಯುತ್ ದೀಪಾಲಂಕಾರ ತೆರವು ಕಾರ್ಯಾಚರಣೆ ಆರಂಭಗೊಳ್ಳಲಿದೆ ಎಂದು ಹೇಳಲಾಗಿದೆ.

ಅರಮನೆ ಅಂದಕ್ಕೆ ನಿಬ್ಬೆರಗಾದ ಜನ; ದೀಪಾಲಂಕಾರಕ್ಕೆ ತೆರೆ

ಮೈಸೂರು ಅರಮನೆ ವಿದ್ಯುತ್ ದೀಪಾಲಂಕಾರಕ್ಕೂ ಬುಧವಾರ ರಾತ್ರಿ ತೆರೆ ಬಿದ್ದಿತು. ದಸರಾ ಪ್ರಯುಕ್ತ ಪ್ರತಿದಿನ ಸಂಜೆ 7ರಿಂದ 9ರವರೆಗೆ ಅರಮನೆಯು ಹೊಂದಿರುವ ಇಂಕ್ಯಾಂಡೆಸ್ಸೆಂಟ್ ಬಲ್ಬ್‌ಗಳು ಬೆಳಗುವ ಮೂಲಕ ಲಕ್ಷಾಂತರ ಜನರ ಕಣ್ಣಿಗೆ ಸಂಭ್ರಮ ಉಂಟು ಮಾಡಿವೆ. ಅಂತೆಯೇ ಕೊನೆ ದಿನವಾದ ಬುಧವಾರ ರಾತ್ರಿಯೂ ಅರಮನೆಯ ಬೆಳಕಿನ ವಯ್ಯಾರ ನೋಡಲು ಸಾಕಷ್ಟು ಮಂದಿ ಅರಮನೆಗೆ ಲಗ್ಗೆಯಿಟ್ಟಿದ್ದರು. ವಿದೇಶಿಗರೂ ಸೇರಿದಂತೆ ವಿವಿಧ ರಾಜ್ಯ, ಜಿಲ್ಲೆಗಳ ಪ್ರವಾಸಿಗರು ಮತ್ತು ಸ್ಥಳೀಯರು ಅರಮನೆಯ ವಿದ್ಯುತ್ ದೀಪಗಳ ಸೌಂದರ್ಯವನ್ನು ಕಣ್ತುಂಬಿಕೊಂಡರು. ದಸರಾ ಸಂದರ್ಭದ ಈ ಹಿಂದಿನ ದಿನಗಳಷ್ಟು ಕಿಕ್ಕಿರಿದ ಜನ ದಟ್ಟಣೆ ಇಲ್ಲವಾದರೂ ಸಾಕಷ್ಟು ಸಂಖ್ಯೆಯ ಜನರಿಂದ ಬುಧವಾರ ರಾತ್ರಿ 7.30ರ ಸುಮಾರಿಯಲ್ಲಿ ಅರಮನೆ ಆವರಣ ಗೋಚರಿಸಿತು.



ಅಂಬಾರಿ ಬಸ್ ಸೇರಿದಂತೆ ವಿವಿಧ ವಾಹನಗಳಲ್ಲಿ ಸಂಚರಿಸಿ ವಿದ್ಯುತ್ ದೀಪಾಲಂಕಾರ ಕಣ್ತುಂಬಿಕೊಂಡರು.

> "ದಸರಾ ಮಹೋತ್ಸವದ 21 ದಿನಗಳ ದೀಪಾಲಂಕಾರವನ್ನು ಲಕ್ಷಾಂತರ ಜನ ಕಣ್ತುಂಬಿಕೊಂಡರು. ಎಲ್ಲಿಯೂ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಎಚ್ಚರಿಕಾ ಕ್ರಮ ಕೈಗೊಳ್ಳಲಾಗಿತ್ತು. ಜನತೆಗೂ ಸುರಕ್ಷಿತ ದೀಪಾಲಂಕಾರ ಸವಿಯುವಂತೆ ಮನವಿ ಮಾಡಲಾಗಿತ್ತು. ಅದಕ್ಕೆ ಸಹಕರಿಸಿ, ನಮ್ಮ ನಿರೀಕ್ಷೆಗೂ ಮೀರಿದ ಅಧಿಕ ಜನ ದೀಪಾಲಂಕಾರ ವೀಕ್ಷಿಸಿ ಸಂಭ್ರಮಿಸಿದ್ದಾರೆ. ಇದು ನಮ್ಮ ಸಂಸ್ಥೆಯ ಹೆಮ್ಮೆ.
>
> 
>
> –ಮುನಿಗೋಪಾಲ್‌ರಾಜು, ತಾಂತ್ರಿಕ ನಿರ್ದೇಶಕರು, ಸೆಸ್ಕ್

67 ಆರೋಗ್ಯ ಕೇಂದ್ರಗಳಿಗೆ 'ಕಾಯಕಲ್ಪ ಪ್ರಶಸ್ತಿ' ಪ್ರದಾನ



ಜಿಪಂ ಸಭಾಂಗಣದಲ್ಲಿ 67 ಆರೋಗ್ಯ ಕೇಂದ್ರಗಳಿಗೆ 'ಕಾಯಕಲ್ಪ ಪ್ರಶಸ್ತಿ' ಹಾಗೂ ಪ್ರಶಂಸಾ ಪತ್ರಗಳನ್ನು ನೀಡಿ ಅಭಿನಂದಿಸಲಾಯಿತು.

ಮೈಸೂರು, ಅ.23(ಎಂಕೆ)– ಜಿಲ್ಲೆಯ ಸುಮಾರು 67 ಆರೋಗ್ಯ ಕೇಂದ್ರಗಳಿಗೆ 'ಕಾಯಕಲ್ಪ ಪ್ರಶಸ್ತಿ' ಹಾಗೂ ಪ್ರಶಂಸಾ ಪತ್ರಗಳನ್ನು ನೀಡಿ ಅಭಿನಂದಿಸಲಾಯಿತು.

ಮೈಸೂರು ಜಿಪಂ ಸಭಾಂಗಣದಲ್ಲಿ ಬುಧವಾರ ನಡೆದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ 2022–23ನೇ ಸಾಲಿನಲ್ಲಿ ಆಯ್ಕೆಯಾದ ಆರೋಗ್ಯ ಕೇಂದ್ರಗಳಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ, 'ಕಾಯಕಲ್ಪ ಪ್ರಶಸ್ತಿ' ಹಾಗೂ ಪ್ರಶಂಸಾ ಪತ್ರಗಳನ್ನು ನೀಡಿ ಅಭಿನಂದಿಸಿದರು.

ಬಳಿಕ 2024–25ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಜಿಲ್ಲಾ ಮಟ್ಟದ ವೈದ್ಯಾಧಿಕಾರಿಗಳ 2ನೇ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಮಾರ್ಗಸೂಚಿ ಅನುಸಾರ ಪರಿಣಾಮಕಾರಿ ಅನುಷ್ಠಾನಗೊಳಿಸಿ ಶೇ.100ರಷ್ಟು ಭೌತಿಕ ಮತ್ತು ಆರ್ಥಿಕ ಪ್ರಗತಿ ಸಾಧಿಸಲು ಕಟ್ಟುನಿಟ್ಟಾಗಿ ಕ್ರಮವಹಿಸುವಂತೆ ಸೂಚನೆ ನೀಡಿದರು. ಜಿಪಂ ಸಿಇಓ ಕೆ.ಎಂ. ಗಾಯತ್ರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಲಂಚ ಸ್ವೀಕಾರ; ಪಿಡಿಓ ಲೋಕಾಯುಕ್ತ ಪೊಲೀಸರ ಬಲೆಗೆ

ಮೈಸೂರು,ಅ.23(ಪಿಎಂ)– ಲಂಚ ಸ್ವೀಕರಿಸುತ್ತಿದ್ದ ವೇಳೆ ಮೈಸೂರು ತಾಲೂಕಿನ ಉದ್ಬೂರು ಗ್ರಾಪಂ ಪಿಡಿಓ ಕಿರಣ್ ಆರ್.ಜಹಗೀರ್‌ದಾರ್ ಮೈಸೂರು ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

ಪಿಡಿಓ ಕಿರಣ್ ಆರ್.ಜಹಗೀರ್‌ದಾರ್ ವಿರುದ್ಧ ಎಸ್.ಶಂಕರ್ ಎಂಬುವವರು ದೂರು ನೀಡಿದ್ದರು. ನಾನು ಉದ್ಬೂರು ಗ್ರಾಪಂ ವ್ಯಾಪ್ತಿಯಲ್ಲಿ ಸಿಸಿ ಚರಂಡಿ ಮತ್ತು ಪೈಪ್‌ಲೈನ್ ನಿರ್ಮಾಣ ಕಾಮಗಾರಿ ಮಾಡಿದ್ದು, ಈ ಸಂಬಂಧ ಬಿಲ್ ಪಾವತಿಸಲು 50 ಸಾವಿರ ರೂ. ಲಂಚ ನೀಡಬೇಕೆಂದು ಕಿರಣ್ ಆರ್.ಜಹಗೀರ್‌ದಾರ್ ಬೇಡಿಕೆ ಇಟ್ಟಿದ್ದಾರೆಂದು ಎಸ್.ಶಂಕರ್ ಆರೋಪಿಸಿ ಅ.21ರಂದು ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡ ಲೋಕಾಯುಕ್ತ ಪೊಲೀಸರು, ಅದೇ ದಿನ ಮೈಸೂರಿನ ಜಯಲಕ್ಷ್ಮೀಪುರಂನ ಖಾಸಗಿ ಹೋಟೆಲ್‌ವೊಂದರ ಬಳಿ ಆರೋಪಿಯು ತಮ್ಮ ಕಾರಿನಲ್ಲಿ ಎಸ್.ಶಂಕರ್ ಅವರಿಂದ 25 ಸಾವಿರ ರೂ. ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ನಾವು ಆಪರೇಷನ್ ಮಾಡಿಲ್ಲ, ಅವರೇ ಒಪ್ಪಿ ಬಂದಿದ್ದಾರೆ



ಕೊಪ್ಪಳ: ನಾವು ಯಾವುದೇ ಆಪರೇಷನ್ ಮಾಡಿಲ್ಲ, ಅವರೇ ಒಪ್ಪಿಕೊಂಡು ಬಂದಿದ್ದಾರೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಜಿಲ್ಲೆಯ ಚಿಕ್ಕಮ್ಯಾಗೇರಿ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಆರೋಗ್ಯ ಸಮಸ್ಯೆ ತಡೆಗಟ್ಟುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಿ.ಪಿ ಯೋಗೇಶ್ವರ್ ಕಾಂಗ್ರೆಸ್ ಪಕ್ಷದವರು, ಮರಳಿ ಪಕ್ಷ ಸೇರಿದ್ದಾರೆ. ನಾವು ಯಾವುದೇ ಆಪರೇಷನ್ ಮಾಡಿಲ್ಲ. ಅವರೇ ಒಪ್ಪಿಕೊಂಡು ಬಂದಿದ್ದಾರೆ. ಮೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲುತ್ತದೆ. ಬಿಜೆಪಿಯವರು ಮಾಡಬಾರದು ಮಾಡಿದ್ದಾರೆ. ಅವರು ನಮಗೆ ಪಾಠ ಮಾಡಬೇಕಾಗಿಲ್ಲ ಎಂದು ಕಿಡಿಕಾರಿದ್ದಾರೆ.

ಬಸವಣ್ಣನವರ 'ಕಾಯಕವೇ ಕೈಲಾಸ' ಅನ್ವಯಿಸಿಕೊಂಡರೆ ಸಮಾಜದಲ್ಲಿ ಪೊಲೀಸ್ ಠಾಣೆ, ನ್ಯಾಯಾಲಯಗಳು ಬೇಕಿಲ್ಲ...

- ಆಂಧ್ರಪ್ರದೇಶದ ರಾಜ್ಯಪಾಲ ನ್ಯಾ.ಅಬ್ದುಲ್ ನಜ್ಹೀರ್ ಅಭಿಮತ
- ಜೆಎಸ್‌ಎಸ್ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಲಯ ಉದ್ಘಾಟನೆ; ಸಂಸ್ಥೆಯ ಸೇವಾಕಾರ್ಯಕ್ಕೆ ಪ್ರಶಂಸೆ

ಮೈಸೂರು, ಅ.23(ಎಸ್‌ಪಿಎನ್)– 'ಕಾಯಕವೇ ಕೈಲಾಸ' ಎಂಬ ಬಸವಣ್ಣರ ಹೇಳಿಕೆಯನ್ನು ಪ್ರತಿಯೊಬ್ಬರು ಅರ್ಥ ಮಾಡಿಕೊಂಡರೆ, ಸಮಾಜದಲ್ಲಿನ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ. ಇದನ್ನು ಪರಿಹರಿಸಲು ಪೊಲೀಸ್ ಠಾಣೆ, ನ್ಯಾಯಾಲಯಗಳೇ ಬೇಕಿಲ್ಲ ಎಂದು ಆಂಧ್ರಪ್ರದೇಶ ರಾಜ್ಯಪಾಲ, ಭಾರತದ ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಎಸ್.ಅಬ್ದುಲ್ ನಜ್ಹೀರ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿ ಜೆಎಸ್‌ಎಸ್ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಲಯದ ನೂತನ ಕಟ್ಟಡ ಉದ್ಘಾಟಿಸಿದ ನಂತರ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪ್ರಸ್ತುತ ಸಮಾಜದಲ್ಲಿ ಬೇಕು ಬೇಕು ಎನ್ನುವವರೇ ಹೆಚ್ಚಿದ್ದಾರೆ. ಆದರೆ, ಬಸವಣ್ಣನವರ 'ಕಾಯಕವೇ ಕೈಲಾಸ'ದ ಮಹತ್ವ ಅರಿತು ಸಮಾಜದಲ್ಲಿ ಬೇಡ ಬೇಡ ಎನ್ನುವವರು ಹೆಚ್ಚಾಗುವ ವಾತಾವರಣ ನಿರ್ಮಿಸಬೇಕು. ಇಂತಹ ವಾತಾವರಣ ನಿರ್ಮಾಣವಾದರೆ, ಪೊಲೀಸ್ ಠಾಣೆ, ನ್ಯಾಯಾಲಯಗಳಿಗೆ ಕೆಲಸವೇ ಇರುವುದಿಲ್ಲ. ಅಂತೆಯೇ ಬಸವಣ್ಣನವರ ಮತ್ತೊಂದು ವಚನದಲ್ಲಿ ಏಳು ಬೇಡ ಎಂಬ ಪದಗಳಿವೆ. ಅವು ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ ಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ ಎಂಬ ವಚನವನ್ನು ಉಲ್ಲೇಖಿಸಿದರು.

ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಎಂದು ಶಾಸಕರಾದ ಟಿ.ಎಸ್.ಶ್ರೀವತ್ಸ ನೆನಪಿಸಿದ್ದಾರೆ. ಚನ್ನಮ್ಮನಲ್ಲಿರುವ ಕೆಲವು ಅಂಶಗಳನ್ನು ಇಂದಿನ ಯುವ ಪೀಳಿಗೆ ಅಳವಡಿಸಿಕೊಂಡು ಬದುಕು ರೂಪಿಸಿಕೊಳ್ಳಬೇಕು ಎಂದು ರಾಜ್ಯಪಾಲರು, ಜೆಎಸ್‌ಎಸ್ ಸಂಸ್ಥೆಗೆ ಪ್ರಥಮ ಬಾರಿ ಬಂದಿದ್ದೇನೆ. ಇಲ್ಲಿನ ಆದರಾತಿಥ್ಯ ನೋಡಿ ಸಂತೋಷವಾಗಿದೆ. ಈ ಸಂಸ್ಥೆ ಕಳೆದ ಸಾವಿರ ವರ್ಷಗಳಿಂದ ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವುದು ಸಂತೋಷದ ವಿಷಯ. ಅಲ್ಲದೆ, ಈ ಸಂಸ್ಥೆ ಬೆಳವಣಿಗೆಗೆ ಹಿಂದಿನ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಹಾಗೂ ಈಗಿನ ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾಕಷ್ಟು ಶ್ರಮಿಸುತ್ತಿರುವುದು ಸಂತೋಷದ ವಿಷಯ ಎಂದರು.

ಭಾರತದ ಮಾಜಿ ರಾಷ್ಟ್ರಪತಿ ಡಾ. ಎಪಿಜೆ ಅಬ್ದುಲ್ ಕಲಾಂ ಅವರು ತಮ್ಮ ಜೀವಿತಾವಧಿಯಲ್ಲಿ ಸುತ್ತೂರಿಗೆ ಆಗಮಿಸಿ, ಇಲ್ಲಿನ ಆಧ್ಯಾತ್ಮ ವಾತಾವರಣವನ್ನು ಅನುಭವಿಸಿದ್ದಾರೆ. ಅವರು ವಿಜ್ಞಾನಿಯೂ ಹೌದು, ಆಧ್ಯಾತ್ಮಿಕ ಚಿಂತಕರೂ ಹೌದು. ಭಾರತೀಯ ಪರಂಪರೆಯಲ್ಲಿ ಆಧ್ಯಾತ್ಮಿಕ ವಿಚಾರ ಜಗತ್ತಿನೆಲ್ಲೆಡೆ ಪ್ರಸ್ತುತ ಗಮನ ಸೆಳೆದಿದೆ. ಸಮಾಜದ ಎಲ್ಲಾ ಸಮಸ್ಯೆಗಳಿಗೆ ಜ್ಞಾನವೇ ದಿವ್ಯೌಷಧ ಇದ್ದ ಹಾಗೆ. ಎಲ್ಲಾ ವರ್ಗದವರಿಗೂ ಜೆಎಸ್‌ಎಸ್ ಸಂಸ್ಥೆ ಶಿಕ್ಷಣ, ಆರೋಗ್ಯ, ಆಧ್ಯಾತ್ಮ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು ತಲುಪಿಸುತ್ತಿರುವುದು ಶ್ಲಾಘನೀಯ ಎಂದರು.

ಜೆಎಸ್‌ಎಸ್ ಸಂಸ್ಥೆ ಮೈಸೂರು ಸೇರಿದಂತೆ ಕರ್ನಾಟಕದ ವಿವಿಧ ಭಾಗಗಳು, ತಮಿಳುನಾಡು, ಉತ್ತರ ಪ್ರದೇಶ ಹಾಗೂ ವಿದೇಶಗಳಲ್ಲಿ 300ಕ್ಕೂ ಹೆಚ್ಚು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ, ಸಾವಿರಾರು ಜನರಿಗೆ ಅನುಕೂಲ ಮಾಡಿಕೊಟ್ಟಿದೆ. ಇದರ ಜೊತೆಗೆ ಇಂಜಿನಿಯರಿಂಗ್, ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಿ ಶಿಕ್ಷಣ ಕ್ಷೇತ್ರವನ್ನು ವಿಸ್ತರಿಸಿದೆ. ಸಂಸ್ಕೃತದ ಸುಭಾಷಿತದಲ್ಲಿ ಅನ್ನದಾನಂ ಪರಂದಾನಂ ವಿದ್ಯಾ ದಾನಂ ಅತಃ ಪರಮ್, ಅನ್ನೇನ ಕ್ಷಣಿಕಾ ತೃಪ್ತಿಃ ಯಾವಜ್ಜೀವಂ ಚ ವಿದ್ಯಾಯೋ?' ಉಲ್ಲೇಖಿಸಿ ಅನ್ನದಾನ ಮಾಡುವುದು ಶ್ರೇಷ್ಠ, ಆದರೆ, ವಿದ್ಯಾದಾನ ಮಾಡಿದರೆ, ಅನ್ನದಾನಕ್ಕಿಂತ ಶ್ರೇಷ್ಠ ಎನ್ನುವ ಮಾತಿದೆ ಎಂದು ಶ್ಲೋಕದ ಅರ್ಥವನ್ನು ವಿವರಿಸಿದರು.

ಈಗ ಉದ್ಘಾಟಿಸಿರುವ ಸ್ನಾತಕೋತ್ತರ ವಸತಿ ನಿಲಯದ ಕಟ್ಟಡವು ನೂರಾರು ವಿದ್ಯಾರ್ಥಿಗಳಿಗೆ ವಸತಿ ಕಲ್ಪಿಸಲಿದೆ. ಈ ಸೌಲಭ್ಯವನ್ನು ಬಳಸಿಕೊಂಡು ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಉನ್ನತ ಪದವಿಗಳಿಸುವಂತೆ ಕಿವಿಮಾತು ಹೇಳಿದರಲ್ಲದೆ, ಈ ಆಸ್ಪತ್ರೆಯಲ್ಲಿ 1800 ರೋಗಿಗಳಿಗೆ ವಿವಿಧ ವಿಭಾಗದಲ್ಲಿ ಏಕಕಾಲಕ್ಕೆ ಚಿಕಿತ್ಸೆ ನೀಡುವ ಸೌಲಭ್ಯ ಕಲ್ಪಿಸಿದೆ. ಇಷ್ಟೊಂದು ದೊಡ್ಡಮಟ್ಟದ ಆಸ್ಪತ್ರೆ ಮೈಸೂರಿನಲ್ಲಿ ಸ್ಥಾಪನೆಯಾಗಿರುವುದು ಮೆಚ್ಚುಗೆ ವಿಷಯ ಎಂದರು.

ವೇದಿಕೆಯಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಟಿ.ಎಸ್.ಶ್ರೀವತ್ಸ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್, ಕಾಂಗ್ರೆಸ್ ಮುಖಂಡ ಪ್ರದೀಪ್ ಕುಮಾರ್, ಕುಲಪತಿ ಡಾ ಸುರೀಂದರ್ ಸಿಂಗ್, ಎಸ್. ಶಿವಕುಮಾರಸ್ವಾಮಿ, ನಿರ್ದೇಶಕ ಆರ್. ಮಹೇಶ್, ಕುಲಸಚಿವ ಡಾ. ಬಿ.ಮಂಜುನಾಥ್, ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ಜೆಎಸ್‌ಎಸ್ ಎಹೆಚ್‌ಇಆರ್‌ನ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗ, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿವರ್ಗ ಪಾಲ್ಗೊಂಡಿದ್ದರು. ಪ್ರಾಂಶುಪಾಲರಾದ ಡಾ. ಹೆಚ್. ಬಸವನಗೌಡಪ್ಪ ಸ್ವಾಗತಿಸಿದರು. ವೈದ್ಯಕೀಯ ಅಧೀಕ್ಷಕ ಡಾ. ಸಿ.ಪಿ. ಮಧು ವಂದಿಸಿದರು. ಪರೀಕ್ಷಾ ನಿಯಂತ್ರಣಾಧಿಕಾರಿ ಡಾ. ಆರ್.ಸುಧೀಂದ್ರ ಭಟ್ ನಿರೂಪಿಸಿದರು.



ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿ ಜೆಎಸ್‌ಎಸ್ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಲಯದ ನೂತನ ಕಟ್ಟಡವನ್ನು ಆಂಧ್ರಪ್ರದೇಶ ರಾಜ್ಯಪಾಲ, ಭಾರತದ ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಎಸ್.ಅಬ್ದುಲ್ ನಜ್ಹೀರ್ ಉದ್ಘಾಟಿಸಿದರು. ಈ ವೇಳೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಟಿ.ಎಸ್.ಶ್ರೀವತ್ಸ, ಕಾಂಗ್ರೆಸ್ ಮುಖಂಡ ಪ್ರದೀಪ್ ಕುಮಾರ್, ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರು, ಬೋಧಕ ವರ್ಗ ಸೇರಿದಂತೆ ಇತರರಿದ್ದರು.

ಶೈಕ್ಷಣಿಕ ಕ್ಷೇತ್ರದಲ್ಲಿ ಜೆಎಸ್‌ಎಸ್ ಕೊಡುಗೆ ಅನನ್ಯ

ಮೈಸೂರು, ಅ.23– ಸಾಮಾಜಿಕ, ಶೈಕ್ಷಣಿಕ ಹಾಗೂ ಆಧ್ಯಾತ್ಮ ಕ್ಷೇತ್ರದಲ್ಲಿ ಜೆಎಸ್‌ಎಸ್ ಮಠದ ಸೇವೆ ಅನನ್ಯ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯಪಟ್ಟರು.

ದೇಶವನ್ನು ಉನ್ನತಿಗೆ ತರುವ ಪ್ರಯತ್ನದಲ್ಲಿ ಸುತ್ತೂರು ಮಠದ ಕೊಡುಗೆ ಅಪಾರ. ಹಾಗಾಗಿ ಸಮಾಜದಲ್ಲಿ ಸಂಭವಿಸುವ ಸಾಮಾಜಿಕ ಸಮಸ್ಯೆಗಳಿಗೆ ವಿವಿಧ ಮಠಾಧೀಶರು ಚಿಕಿತ್ಸೆ ನೀಡುತ್ತಿರುತ್ತಾರೆ. ಇದರಿಂದ ಸಮಾಜದಲ್ಲಿನ ಯುವ ಸಮೂಹ ಸರಿದಾರಿಗೆ ಬರಲು ಸಾಧ್ಯವಾಗಿದೆ. ಅಲ್ಲದೆ, ಇಂದು(ಬುಧವಾರ) ವೀರ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಆಚರಣೆಯಾಗುತ್ತಿದೆ. ಇದರ ನಡುವೆ ಆಂಧ್ರ ಪ್ರದೇಶದ ರಾಜ್ಯಪಾಲರು ಮೈಸೂರು ಪ್ರವಾಸದಲ್ಲಿರುವುದು ನಮ್ಮೆಲ್ಲರ ಸೌಭಾಗ್ಯ ಎಂದು ತಿಳಿಸಿದರು. ಕೃಷ್ಣರಾಜ ಕ್ಷೇತ್ರದಲ್ಲಿ ದಿನೇದಿನೆ ಗೋವುಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಪ್ರತಿದಿನ 30ರಿಂದ 40 ಸಾವಿರ ಕೆಜಿ ಸಗಣಿ ಉತ್ಪತ್ತಿಗೊಂಡು ಮೋರಿ ಪಾಲಾಗುತ್ತಿದೆ. ಇದನ್ನು ಸದ್ಬಳಕೆ ಮಾಡುವ ನಿಟ್ಟಿನಲ್ಲಿ ಜೆಎಸ್‌ಎಸ್ ವಿದ್ಯಾಸಂಸ್ಥೆ ವತಿಯಿಂದ ಗೋಬರ್ ಗ್ಯಾಸ್ ಇಲ್ಲವೇ ವಿದ್ಯುತ್ ಉತ್ಪಾದಿಸಿ, ಕೆ.ಆರ್. ಕ್ಷೇತ್ರದ ಜನರ ಉಪಯೋಗಕ್ಕೆ ಯೋಜನೆ ರೂಪಿಸುವ ಕುರಿತು ಶಾಸಕರು ತಮ್ಮ ಭಾಷಣದ ವೇಳೆ ಸುತ್ತೂರು ಶ್ರೀಗಳಲ್ಲಿ ವಿನಂತಿಸಿದರು.

ನ್ಯಾ.ಅಬ್ದುಲ್ ನಜ್ಹೀರರ ಯೋಗಾಯೋಗ!

ಮೈಸೂರು, ಅ.23(ಎಸ್‌ಪಿಎನ್)– ಇಸ್ಲಾಂ ಧರ್ಮದ ಹೆಣ್ಣು ಮಕ್ಕಳು ಸಮಾಜದಲ್ಲಿ ಮುಕ್ತವಾಗಿ ಜೀವನ ಕಟ್ಟಿಕೊಳ್ಳಲು ಹಾಗೂ ಮುಕ್ತವಾಗಿ ಮಾತನಾಡಲು ನ್ಯಾಯಮೂರ್ತಿ ಎಸ್.ಅಬ್ದುಲ್ ನಜ್ಹೀರ್ ನೀಡಿದ ಒಂದು ತೀರ್ಪು ಪೂರಕವಾಗಿದೆ ಎಂದರೆ ತಪ್ಪಾಗಲಾರದು ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಈ ಭೂಮಿ ಮೇಲೆ ಭಗವಂತನ ಕೃಪೆಯಿಲ್ಲದೆ, ಒಂದು ಹುಲ್ಲು ಕಡ್ಡಿ ಕೂಡ ಅಲುಗಾಡಲ್ಲ. ಗೋವಾ ಅಥವಾ ಮೇಘಾಲಯ ರಾಜ್ಯಪಾಲರಿಂದ ಸ್ನಾತಕೋತ್ತರ ವಿದ್ಯಾರ್ಥಿನಿಲಯ ಕಟ್ಟಡ ಉದ್ಘಾಟನೆ ಆಗಬೇಕಿತ್ತು ಯೋಗಾಯೋಗ ಆಂಧ್ರಪ್ರದೇಶದ ರಾಜ್ಯಪಾಲರ ಅಮೃತ ಹಸ್ತದಿಂದ ನೆರವೇರಿರುವುದು ಸಂತೋಷದ ವಿಷಯ. ಈಗಿನ ನ್ಯಾಯಾಂಗ ವ್ಯವಸ್ಥೆಯಲ್ಲಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾಗಲು ಮೊದಲು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾಗಿ ಕೆಲಸ ಮಾಡಬೇಕು.

ಆದರೆ, ಎಸ್.ಅಬ್ದುಲ್ ನಜೀರ್ ಅವರು ಹೈಕೋರ್ಟ್‌ನಿಂದ ನೇರವಾಗಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಬಡ್ತಿ ಪಡೆದವರಲ್ಲಿ ಒಬ್ಬರು. ಇವರು ನ್ಯಾಯಮೂರ್ತಿಗಳಾಗಿದ್ದಾಗ ಅಯೋಧ್ಯೆ ತೀರ್ಪು, ಆಧಾರ್ ಕಾರ್ಡ್ ಖಾಸಗಿ ಗೌಪ್ಯತೆ ಕಾಪಾಡುವ ತೀರ್ಪು, ತ್ರಿವಳಿ ತಲಾಖ್ ತೀರ್ಪು ನೀಡಿ, ದೇಶದ ಗಮನ ಸೆಳೆದಿದ್ದಾರೆ. ತ್ರಿವಳಿ ತಲಾಖ್ ತೀರ್ಪು ನೀಡಿ, ಈ ಆದೇಶ ಆರು ತಿಂಗಳಲ್ಲಿ ಜಾರಿಗೆ ಬರಬೇಕು ಎಂದು ಕೇಂದ್ರ ಸರ್ಕಾರಕ್ಕೆ ಸೂಚಿಸಿದ ಹಿನ್ನೆಲೆಯಲ್ಲಿ ಇಸ್ಲಾಂ ಹೆಣ್ಣು ಮಕ್ಕಳು ತ್ರಿವಳಿ ತಲಾಖ್ ಸಮಸ್ಯೆಯಿಂದ ಹೊರಬರಲು ಸಾಧ್ಯವಾಯಿತು ಎಂದರು. ನ್ಯಾ.ಎಸ್.ಅಬ್ದುಲ್ ನಜ್ಹೀರ್ ಅವರು, ಮಂಗಳೂರಿನ ಮೂಡುಬಿದಿರೆಯ ಬಡ ಕುಟುಂಬದಲ್ಲಿ ಜನಿಸಿ, ಹಂತಹಂತವಾಗಿ ಮೇಲೇರಿದವರು. ಸಾಧನೆ ಇದ್ದರೆ, ಕೀರ್ತಿ ಖಂಡಿತ ಬರುತ್ತದೆ ಎಂಬುದಕ್ಕೆ ಈ ನ್ಯಾಯಮೂರ್ತಿಗಳೇ ಕಣ್ಣೆದುರಿನ ಸಾಕ್ಷಿ ಎಂದು ಸುತ್ತೂರು ಶ್ರೀಗಳು ಹೇಳಿದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ ಚಪಾತಿ ಮಾಡಿ ಗಂಡನಿಗೆ ಬಡಿಸುತ್ತಾಳೆ.

ಗಂಡ : ಚಪಾತಿ ಯಾಕೆ ಇಷ್ಟು ದಪ್ಪ?

ಹೆಂಡತಿ : ಹೌದಾ...ಹೊರಗಡೆ ಸಮೋಸಾ, ಕಚೋರಿ ತಿನ್ನೋಕೆ ಇಷ್ಟು ದೊಡ್ಡದಾಗಿ ಬಾಯಿ ತೆಗೀತಿರಿ. ಮನೇಲಿ ಮಾತ್ರ ಹೆಂಡತಿ ಮತ್ತು ಚಪಾತಿ ಸಣ್ಣಗೆ ಇರಬೇಕಾ..? ತೆಪ್ಗೆ ತಿನ್ನಿ.

ಮೈಸೂರು ಮಿತ್ರ

ಗುರುವಾರ, 24 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ನಂಬಿಕೆ ಮತ್ತು ವಿಶ್ವಾಸ ಹೀಗೆಯೇ ನಮ್ಮ ಮನಸ್ಸನ್ನು ಕೆಲವೊಮ್ಮೆ ಕಾಯುತ್ತದೆ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಾಡೋದೆಲ್ಲ ಅನಾಚಾರ, ಮನೆ ಮುಂದೆ ಬೃಂದಾವನ

ನಿಮ್ಮ ಪತ್ರಗಳು

ಸರ್ವರ್ ಸಮಸ್ಯೆ: ಪಡಿತರದಾರರ ಪರದಾಟ

ಮಾನ್ಯರೆ,

ಸರ್ವರ್ ಸಮಸ್ಯೆಯಿಂದ ಪಡಿತರದಾರರು ತಮ್ಮ ದೈನಂದಿನ ಕೆಲಸ ಕಾರ್ಯವನ್ನು ಬಿಟ್ಟು ದಿನಪೂರ್ತಿ ನ್ಯಾಯಬೆಲೆ ಅಂಗಡಿ ಮುಂದೆ ಕ್ಯೂ ನಿಲ್ಲಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಹೆಚ್.ಡಿ.ಕೋಟೆ ತಾಲೂಕಿನ ಮಾನಂದವಾಡಿ ರಾಜ್ಯ ಹೆದ್ದಾರಿಯಲ್ಲಿ ಬರುವ ಕೆಜಿ ಹಳ್ಳಿ ಗ್ರಾಮದಲ್ಲಿ ಪಡಿತರ ಅಕ್ಕಿಗಾಗಿ ನೂರಾರು ಜನರು ಸಾಲುಗಟ್ಟಿ ನಿಂತರೂ ಪಡಿತರ ಸಿಗುತ್ತಿಲ್ಲ. ಕೆಲವೊಮ್ಮೆ ಸರ್ವರ್ ಸಿಕ್ಕಿದಾಗ ಮಾತ್ರ ಒಬ್ಬೊಬ್ಬರೇ ಪಡಿತರ ಅಕ್ಕಿ ಪಡೆಯುವಂತಾಗಿದೆ.

ಬೆಳಗ್ಗೆ 8 ಗಂಟೆ ಸುಮಾರಿಗೆ ಪಡಿತರ ಅಕ್ಕಿ ಅಂಗಡಿ ಮುಂದೆ ಅಕ್ಕಿಗಾಗಿ ಬಂದು ನಿಲ್ಲುವ ಜನರು ಸರ್ವರ್ ಸಮಸ್ಯೆಯಿಂದ ಇತ್ತ ಪಡಿತರ ಅಕ್ಕಿಯು ಇಲ್ಲದೆ ಅತ್ತ ದಿನದ ಕೂಲಿಯು ಇಲ್ಲದೆ ಪರದಾಡುವಂತಾಗಿದೆ. ಪಡಿತರ ಅಂಗಡಿಯಿಂದ ಅಕ್ಕಿ ಪಡೆದು ಮಕ್ಕಳಿಗೆ ಅಡುಗೆ ಮಾಡಿ ಶಾಲೆಗೆ, ಗಂಡನಿಗೆ ಕೂಲಿ ಕೆಲಸಕ್ಕೆ, ಇಲ್ಲವೆ ತಾವೇ ಸ್ವತಃ ತಯಾರಾಗಿ ಕೆಲಸಕ್ಕೆ ಹೋಗಬೇಕಾದ ಮಹಿಳೆಯರು, ಪುರುಷರು. ಮಕ್ಕಳು ಮತ್ತು ವೃದ್ಧರು ದಿನಗಟ್ಟಲೇ ಸಾಲುಗಟ್ಟಿ ನಿಲ್ಲುವಂತಾಗಿದೆ.

ತಿಂಗಳು ಕಳೆಯುತ್ತಾ ಬಂದರೂ ಹಿಂದುಳಿದ ತಾಲೂಕು ಹೆಚ್.ಡಿ. ಕೋಟೆಯ ಹಲವು ಹಳ್ಳಿಗಳಲ್ಲಿ ಪಡಿತರ ಅಕ್ಕಿ ಸಿಗದೆ ಹಿಡಿಶಾಪ ಹಾಕುವಂತಾಗಿದೆ.

ಒಂದೆಡೆ ಸರ್ವರ್ ಸಮಸ್ಯೆಯಾದರೆ ಮತ್ತೆ ಕೆಲವು ಪಡಿತರ ಅಂಗಡಿಗಳಲ್ಲಿ ಒಂದೆರಡು ದಿನ ಪಡಿತರ ನೀಡಿ, ಮತ್ತೆ ಹೋದರೆ ಪಡಿತರ ಕೊಟ್ಟಾಯಿತು. ಮುಂದಿನ ತಿಂಗಳು ಬಾ ಎನ್ನುತ್ತಿದ್ದಾರೆ. ಇದಕ್ಕೆ ಆಹಾರ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯ ಕಾರಣವಾಗಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡುತ್ತೇವೆ. ಕೂಡಲೇ ಸರ್ವರ್ ಸಮಸ್ಯೆಯನ್ನು ಸರಿಪಡಿಸಬೇಕು ಎಂದು ಒತ್ತಾಯಿಸುತ್ತೇನೆ.

–ಕೆ.ಎಸ್.ಸುರೇಶ್, ಮುಖ್ಯ ಶಿಕ್ಷಕರು, ಕೆ.ಜಿ.ಹಳ್ಳಿ

ಬೆಳಗಿನ ಸಮಯದಲ್ಲೂ ಜಗಮಗಿಸುವ ದೀಪಾಲಂಕಾರ, ಸಾರ್ವಜನಿಕರ ಹಣ ಪೋಲು



ಮಾನ್ಯರೇ,

ಮೈಸೂರು ದಸರಾ ಎಷ್ಟೊಂದು ಸುಂದರ. ಹೌದಲ್ವಾ ದಸರೆಯ ಪರ್ವ ಮುಗಿದಿದೆ. ಮದುವಣಗಿತ್ತಿಯಂತೆ ಸಿಂಗಾರಗೊಂಡು ಪ್ರವಾಸಿಗರ ಕಣ್ಮಣಿಯಾಗಿದೆ. ನಮ್ಮ ಮೈಸೂರು. ಜಗಮಗಿಸುವ ದೀಪಾಲಂಕಾರ ನೋಡಲು ಸಾಗರೋಪಾದಿಯಲ್ಲಿ ಜನರು ಬರುತ್ತಿದ್ದಾರೆ. ಸರ್ಕಾರದ ಬೊಕ್ಕಸದಿಂದ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿಯೂ ನಿರ್ದಿಷ್ಟ ಸಮಯಕ್ಕೆ ದೀಪಾಲಂಕಾರಕ್ಕೆ ವಿದ್ಯುತ್ ಒದಗಿಸುತ್ತಿರುವ ಚೆಸ್ಕಾಂ ಹಾಗೂ ದೀಪಾಲಂಕಾರದ ನಿರ್ವಹಣೆಯನ್ನು ಹೊತ್ತ ಸಂಸ್ಥೆ ತಮ್ಮ ಬೇಜವಾಬ್ದಾರಿತನ ತೋರಿದೆ. ಇಂದು ಬೆಳಗ್ಗೆ ಸುಮಾರು 6.15ರ ಸಮಯದಲ್ಲೂ ಮಾನಸ ಗಂಗೋತ್ರಿಯ ರಸ್ತೆಯಲ್ಲಿ ಜಗಮಗಿಸುವ ದೀಪಾಲಂಕಾರ ನೋಡಿ ಕಾರ್ಯ ನಿರ್ವಹಿಸುತ್ತಿರುವವರ ಬಗ್ಗೆ ಮನದಲ್ಲಿ ಬೇಸರ ಮೂಡಿತು. ನಾವು ಸರ್ಕಾರಕ್ಕೆ ಕಟ್ಟುವ ತೆರಿಗೆಯ ಹಣವು ಹೀಗೂ ಪೋಲಾಗುತ್ತಿರುವುದನ್ನು ಮನಗಂಡು ನಾವು ಎತ್ತ ಸಾಗುತ್ತಿದ್ದೇವೆ ಎಂಬ ಶಂಕೆ ಮನದಲ್ಲಿ ಮೂಡಿತು.

–ಶ್ರೀಕಾಂತ್, ಸರಸ್ವತಿಪುರಂ, ಮೈಸೂರು.

ಶೀಘ್ರ ರಸ್ತೆ ದುರಸ್ತಿಪಡಿಸಿ

ಮಾನ್ಯರೆ,



ಮೈಸೂರು ನಗರದ ಸರಸ್ವತಿಪುರಂನ ಮಹಿಳಾ ಕಾಲೇಜಿನ ಪಕ್ಕದ ರಸ್ತೆಯ ಒಂದಷ್ಟು ಭಾಗವು ಆರೇಳು ಅಡಿಯಷ್ಟು ಕುಸಿದಿದೆ. ಇದರಿಂದಾಗಿ, ಈ ರಸ್ತೆಯಲ್ಲಿ ಓಡಾಡುವ ಪಾದಚಾರಿಗಳು, ವಾಹನ ಸವಾರರು ಭಯದಿಂದಲೇ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ರಾತ್ರಿ ವೇಳೆಯಂತು ಕುಸಿದಿರುವ ಈ ಹೊಂಡವು ಕಾಣದಿರುವುದರಿಂದ, ಸ್ವಲ್ಪ ಎಚ್ಚರ ತಪ್ಪಿದರೂ ಸಹ ಅಪಾಯ ಕಟ್ಟಿಟ್ಟಬುತ್ತಿ. ಆದ್ದರಿಂದ, ಸಂಬಂಧಪಟ್ಟವರು ಕೂಡಲೇ ಎಚ್ಚೆತ್ತು ರಸ್ತೆಯನ್ನು ದುರಸ್ತಿಗೊಳಿಸಿ ಆಗಬಹುದಾದ ಅನಾಹುತವನ್ನು ತಪ್ಪಿಸಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಮನೆಗಳ ಮೇಲೆ ಹಾದು ಹೋಗಿರುವ ವಿದ್ಯುತ್ ತಂತಿ ತೆರವುಗೊಳಿಸಿ

ಮಾನ್ಯರೆ,

ನಂಜನಗೂಡು ತಾಲೂಕು ಲಲಿತಾಳಪುರ ಗ್ರಾಪಂಗೆ ಸೇರಿರುವ ಮೊತ್ತ ಗ್ರಾಮವು ತಾಲೂಕಿನಲ್ಲಿಯೇ ದೊಡ್ಡ ಗ್ರಾಮ. ಈ ಗ್ರಾಮದಲ್ಲಿ ಹಳೆಯದಾದ ವಿದ್ಯುತ್ ಕಂಬಗಳು ಇನ್ನೇನು ಬೀಳುವ ಹಂತದಲ್ಲಿವೆ. ಹಾಗೆ ಈ ಕಂಬಗಳ ತಂತಿಗಳು ಮನೆಗಳ ಮೇಲೆ ಹಾದು ಹೋಗಿವೆ. ಈ ರಸ್ತೆಯಲ್ಲಿ ಸಣ್ಣಪುಟ್ಟ ಮಕ್ಕಳು ಆಟವಾಡುವುದುಂಟು. ಈ ವಿಚಾರವನ್ನು ಗ್ರಾಪಂ, ಕೆಇಬಿ ಇಲಾಖೆಯವರಿಗೆ ತಿಳಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದ ಗ್ರಾಮದ ಜನರಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ವಿದ್ಯುತ್ ಕಂಬ ಮತ್ತು ಮನೆ ಮೇಲೆ ಹಾದು ಹೋಗಿರುವ ವಿದ್ಯುತ್ ತಂತಿಯನ್ನು ತೆರವುಗೊಳಿಸಬೇಕೆಂದು ಈ ಮೂಲಕ ಮನವಿ. – ಸಿದ್ದಲಿಂಗೇಗೌಡ, ಹೈರಿಗೆ, ಹೆಚ್.ಡಿ. ಕೋಟೆ ತಾ.

ಯುವ ಚೇತನ ಜೀವನಕ್ಕೆ ಚೈತನ್ಯವಾಗಬೇಕಿದೆ!



ಸಾಂದರ್ಭಿಕ ಚಿತ್ರ



ಡಾ.ಎಲ್.ಶಶಿಕುಮಾರ್
ವೈಜ್ಞಾನಿಕ ಅಧಿಕಾರಿ,
ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ
ಮೊ: 7204932795

> ಸರಿಯಾದ ದಿಕ್ಕಿನಲ್ಲಿ, ಸರಿಯಾದ ಸಮಯದಲ್ಲಿ, ಸೂಕ್ತ ಪರಿಸರದಲ್ಲಿ ಮೂಡಿದ ಆಲೋಚನೆಗಳು ಪ್ರಪಂಚವನ್ನೇ ಬದಲಾಯಿಸಿವೆ. ದೇಶವನ್ನು ಪ್ರಗತಿ ಪಥದತ್ತ ಒಯ್ಯುವಂತೆ ಮಾಡುವ ಜವಾಬ್ದಾರಿ ನಮ್ಮ ಯುವ ಜನರ ಮೇಲಿದೆ. ನಾವು ಹೇಗೆ ಯೋಚಿಸುತ್ತೇವೆಯೋ ಜಗತ್ತು ಹಾಗೆಯೇ ಇರುತ್ತದೆ. ನಮ್ಮ ಆಲೋಚನೆಗಳನ್ನು ಬದಲಿಸಿಕೊಂಡು ಯಶಸ್ಸಿನತ್ತ ನುಗ್ಗಿದರೆ ಯಶಸ್ಸು ನಮ್ಮದಾಗದೇ ಇರಲು ಸಾಧ್ಯವೇ ಇಲ್ಲ.

ಇಂದಿನ ಮಕ್ಕಳೇ ನಾಳೆಯ ಪ್ರಜೆಗಳು ಎಂಬ ಮಾತು ಎಷ್ಟು ಅರ್ಥಪೂರ್ಣವೋ ಅದೇ ರೀತಿ ಇಂದಿನ ಯುವಕರೇ ನಾಳಿನ ನೇತಾರರು ಎಂಬುದನ್ನು ಆಗಾಗ ಅಲ್ಲಲ್ಲಿ ಕೇಳುತ್ತಿರುತ್ತೇವೆ. ಎಸ್‌ಎಸ್‌ಎಲ್‌ಸಿ ಎಂಬ ಶಿಕ್ಷಣದ ಗಡಿ ದಾಟುತ್ತಲೇ ಪ್ರತಿ ಯುವ ಮನಸ್ಸು "ಕಾಲೇಜು" ಎಂಬ ಹೈವೆಯಲ್ಲಿ ಜೀವನ ಪಯಣದ ಮೊದಲ ಹಂತಕ್ಕೆ ತಲುಪುವಾಗ "ಮನಸ್ಸು" ಬಂಧ ಮುಕ್ತ ಮೈದಾನದಲ್ಲಿ ಧುಮುಕಿರುವ ಚಂಚಲತೆಯ ಚೆಂಡಿನಂತಾಗುವುದು. ಈ ವಯೋಮಾನದಲ್ಲಿ ಪ್ರತಿ ತರುಣ/ತರುಣಿಗೂ ತನ್ನದೇ ಆದ ಹೊಸ ಚೈತನ್ಯ, ಸ್ಪರ್ಧಾ ಮನೋಭಾವ, ಏನು ಬೇಕಾದರೂ ಸಾಧಿಸಬಲ್ಲನೆಂಬ ಹುರುಪು ಹೆಚ್ಚಿರುತ್ತದೆ. ಈ ಚೈತನ್ಯದ ಹುರುಪು ಒಳ್ಳೆ ವಿಷಯಗಳಿಗಿಂತ ಕೆಟ್ಟ ವಿಷಯಗಳೆಡೆಗೇ ಸದಾ ವಾಲುತ್ತದೆ.

ಮುಖ್ಯವಾಗಿ ಪಾಶ್ಚಾತ್ಯ ಸಂಸ್ಕೃತಿ ಅನುಕರಣೆ, ಐಷಾರಾಮಿ ಜೀವನದ ಆಸಕ್ತಿ, ಮಾಧ್ಯಮದಲ್ಲೇ ಪ್ರಮುಖ ಮಾಧ್ಯಮ ಎನಿಸಿಕೊಂಡ ಚಲನಚಿತ್ರಗಳು ಯುವಕರ ಮನಸ್ಸನ್ನು ಋಣಾತ್ಮಕವಾಗಿ ಹುಚ್ಚೆಬ್ಬಿಸುತ್ತವೆ. ಜೀವನವನ್ನು ರೂಪಿಸಿಕೊಳ್ಳುವ ಕಾಲೇಜು ಹಂತದಲ್ಲಿ ಪ್ರೀತಿ, ಪ್ರೇಮ ಪ್ರಣಯ ಎಂಬ ಮೋಹದ ಬಲೆಗೆ ಸಿಲುಕಿ ವಿದ್ಯಾಭ್ಯಾಸವನ್ನು ಅರ್ಧದಲ್ಲೇ ಮೊಟಕುಗೊಳಿಸುವ ಅನೇಕ ಉದಾಹರಣೆಗಳು ನಮ್ಮ ಮುಂದಿವೆ. ಯುವಜನಾಂಗದಲ್ಲಿ ಆದರ್ಶಗಳು ಕ್ಷೀಣಿಸುತ್ತಿವೆ ಎನ್ನುವ ಗಂಭೀರ ಆರೋಪವೂ ಇತ್ತೀಚಿನ ದಿನಗಳಲ್ಲಿ ಕೇಳಿಬರುತ್ತಿವೆ.

'ಸ್ಟುಡೆಂಟ್ ಲೈಫ್ ಇಸ್ ಗೋಲ್ಡನ್ ಲೈಫ್' ಎಂಬ ಮಾತೊಂದಿದೆ. ಇದನ್ನು ತಪ್ಪಾಗಿ ಅರ್ಥೈಸಿಕೊಂಡ ವಿದ್ಯಾರ್ಥಿಗಳೇ ಹೆಚ್ಚು. 'ಕಾಲೇಜ್ ಅಂದರೆ ಎಂಜಾಯ್ ಲೈಫುಮಗಾ; ಇರುವಷ್ಟು ದಿನ ಜಾಲಿಯಾಗಿರಬೇಕು' ಎನ್ನುವ ಭಾವನೆ ಯುಜನಾಂಗದಲ್ಲಿ ಒಡಮೂಡುತ್ತಿರುವ ಹಾಗೆ ಕಾಣುತ್ತಿದೆ. ಇಂತಹ ಕ್ಷುಲ್ಲಕ ಅಂಶಗಳಿಂದ ತಮ್ಮ ಅಮೂಲ್ಯವಾದ ಸಮಯವನ್ನು ಪ್ರೀತಿ, ಪ್ರೇಮ, ಪ್ರಣಯ ಎಂಬ ಗುಂಗಿನಲ್ಲಿ ಭವಿಷ್ಯವನ್ನು ಕೆಲ ಯುವಕ–ಯುವತಿಯರು ಅಲ್ಲೋಲ–ಕಲ್ಲೋಲ ಮಾಡಿಕೊಂಡಿರುತ್ತಾರೆ. ಇನ್ನೊಂದೆಡೆ ಇಂತಹ ಸಂಬಂಧಗಳು ಗಟ್ಟಿಯಾಗಿ ಉಳಿಸಿಕೊಳ್ಳಲು ಹೋಗಿ ಚಿಕ್ಕ ವಯಸ್ಸಿನಲ್ಲಿಯೇ ದಾಂಪತ್ಯಕ್ಕೆ ಕಾಲಿಡುವ ಅನೇಕರು ಬದುಕಿನ ಸಂತಸದ ಘಟನೆಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಇದು ನಿಜಕ್ಕೂ ಅತ್ಯಂತ ಆತಂಕಕಾರಿ ಬೆಳವಣಿಗೆ.

ಉಜ್ವಲ ಭವಿಷ್ಯಕ್ಕೆ ಭದ್ರ ಬುನಾದಿ ರೂಪಿಸಿಕೊಳ್ಳಲು ವಿದ್ಯಾರ್ಥಿ ಜೀವನ ಒಂದು ಪ್ರಮುಖ ಘಟ್ಟ. ತಮ್ಮ ಜೀವನ ಹೇಗಿರಬೇಕು? ಏನೆಲ್ಲಾ ಸಾಧನೆ ಮಾಡಬೇಕು ಎನ್ನುವುದಕ್ಕೇ ಇಲ್ಲಿ ಉತ್ತಮ ಅವಕಾಶಗಳಿರುತ್ತವೆ. ಆದರೆ ಬಹಳಷ್ಟು ವಿದ್ಯಾರ್ಥಿಗಳು ಕಾಲೇಜು ದಿನಗಳನ್ನು ಸಂತೋಷದ ಕ್ಷಣಗಳು ಎಂದುಕೊಂಡಿದ್ದಾರೆ. ಕುಣಿದು ಕುಪ್ಪಳಿಸಿ ಬಿಡೋಣ! ಎಂದು ವೃಥಾ ಸಮಯವನ್ನು ಹಾಳು ಮಾಡುತ್ತಿದ್ದಾರೆ ಎಲ್ಲದಕ್ಕೂ ಒಂದು ಇತಿಮಿತಿ, ಹದ ಅಂತ ಇರಬೇಕಲ್ಲವೇ? ಅದಿಲ್ಲದಿದ್ದರೆ ಅಮೃತವು ವಿಷವಾದಂತೆ ಜೀವನದ ಅತ್ಯುತ್ತಮ ಸಮಯ ನಮ್ಮ ಕೈಜಾರಿ ಭವಿಷ್ಯ ಮಾರಕವಾಗುತ್ತದೆ.

ಕ್ಷಣಗಳು, ದಿನಗಳು, ವರ್ಷಗಳೂ ಯಾರಿಗೂ ಹೇಳದೇ, ಯಾರನ್ನೂ ಕಾಯದೆ ಉರುಳುತ್ತಲೇ ಇರುತ್ತವೆ. ಹಾಗೆ ನಮ್ಮ ಬದುಕಿನ ಅವಧಿಯೂ ಕಡಿಮೆಯಾಗುತ್ತಾ ಹೋಗುತ್ತದೆ. ನೆನ್ನೆ–ಮೊನ್ನೆಗಳಲ್ಲಿ ನಾವೇನಾಗಿದ್ದೇವೋ ಅದು ಮುಖ್ಯವಲ್ಲ. ನಾವೇನಾಗಬೇಕಿತ್ತೋ ಮತ್ತು ನಾಳಿದ್ದುಗಳಲ್ಲಿ ಏನಾಗಬೇಕೋ ಅದು ಮುಖ್ಯ. ಹಾಗಾಗಿ ಓದುವ ಅವಧಿಯಲ್ಲಿ ಜೀವನದ ಗುರಿ, ಓದುವ ಸಾಮರ್ಥ್ಯದ ಬಗ್ಗೆ ಜಾಗ್ರತೆ ವಹಿಸುವುದು ಒಳಿತು. ಆಗ ಮಾತ್ರ ನಾವು ಓದುವ "ಓದಿ"ಗೆ ಬದುಕು ಕಟ್ಟಬಲ್ಲ ಶಕ್ತಿ ಬರುತ್ತದೆ.

ಮಕ್ಕಳ ಬಗೆಗೆ ತಂದೆ–ತಾಯಿಗಳು ಕನಸಿನ ಮೂಟೆ ಕಟ್ಟಿಕೊಂಡಿರುತ್ತಾರೆ. ಮನೆಯವರ ಬಗೆಗೆ ಸ್ವಲ್ಪವೂ ತಲಕೆಡಿಸಿಕೊಳ್ಳದೇ ಪ್ರೀತಿ ಪ್ರೇಮ ಎಂಬ ಅಲ್ಪಸುಖಕ್ಕಾಗಿ ಯುವಜನತೆ ತಮ್ಮ ಜೀವನವನ್ನು ಹಾಳುಮಾಡಿಕೊಳ್ಳುವುದು ಸರಿಯಲ್ಲ. ಇದರ ಬದಲಾಗಿ ಯುವ ಜನತೆ ತಮ್ಮ ವ್ಯಾಸಂಗದ ಕಡೆ ಗಮನ ಕೊಡಬೇಕು. ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು ಆತ್ಮವಿಶ್ವಾಸವೇ ಜಯದ ಮೂಲ ಗುಟ್ಟು, ಆತ್ಮವಿಶ್ವಾಸದಿಂದ ಏಕಾಗ್ರತೆ ತಂತಾನೆ ಬೆಳೆಯತೊಡಗುತ್ತದೆ. ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುವ ಅವನ, ಅವಳ ಚಿಂತೆಯಿಂದ ದೂರ ವಿರುವುದು ಒಳಿತು. ಪ್ರೀತಿ ಒಂದು ಕ್ಷಣಿಕ ಎಂಬ ಭಾವನೆ ಯುವ ಸಮೂಹಕ್ಕಿರಬೇಕು. ಕ್ಷತ್ರಿಯನು ರಣರಂಗದಲ್ಲಿ ಹೋರಾಡಿ ಉಳಿದವರ ಜೀವ ಕಾಯುವುದು ಆತನ ಧರ್ಮ. ಅದರಂತೆ ಪರೀಕ್ಷೆಯನ್ನು ಚೆನ್ನಾಗಿ ಎದುರಿಸಿ ನಿಮ್ಮ ಜೀವನಕ್ಕೆ ದಾರಿ ಕಂಡುಕೊಳ್ಳುವುದು ಪ್ರತಿಯೊಬ್ಬ ವಿದ್ಯಾರ್ಥಿ, ವಿದ್ಯಾರ್ಥಿನಿಯ ಆದ್ಯ ಕರ್ತವ್ಯ. ಯಶಸ್ಸನ್ನು ಯಾವತ್ತೂ ಪರಿಶ್ರಮದಿಂದ ನಿರ್ಧರಿಸಬೇಕೇ ಹೊರತು ಕಡಿಮೆ ಕೆಲಸ ಅಥವಾ ಅದೃಷ್ಟದ ಫಲದಿಂದಲ್ಲ ಎಂಬ ಅರಿವು ಪ್ರತಿ ವಿದ್ಯಾರ್ಥಿಯಲ್ಲಿರಬೇಕು. ಸ್ವಂತ ಇಚ್ಛೆಯಿಂದ ಮನಸ್ಸು ಕೊಟ್ಟು ಶ್ರದ್ಧೆಯಿಂದ ಓದಿದಲ್ಲಿ ಯಶಸ್ಸು ಕಟ್ಟಿಟ್ಟಬುತ್ತಿ! ಎಂಬ ವಿಚಾರವನ್ನು ಯುವಕರು ತಿಳಿದಿರಬೇಕು.

'ಒಂದು ಬಾರಿಗೆ ಒಂದೇ ಕೆಲಸವನ್ನು ಮಾಡು; ಅದನ್ನು ಸರಿಯಾಗಿ ಮಾಡು ಎನ್ನುವ ಮಕ್ಕಳ ಪದ್ಯ ಅರ್ಥಪೂರ್ಣ ಉತ್ತಮ ಫಲಿತಾಂಶ ಬಯಸುವವನು ಮನಪೂರ್ತಿಯಾಗಿ ಒಂದೇ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು. ಎರಡು ಮೂರು ಜವಾಬ್ದಾರಿಗಳನ್ನು ಒಪ್ಪಿಕೊಂಡಿರುವವರು, ಅಷ್ಟನ್ನೂ ತೃಪ್ತಿಕರವಾಗಿ ನಿರ್ವಹಿಸುತ್ತಾರೆ ಎನ್ನುವುದು ಅನುಮಾನವೇ ಎಂಬ ಮಾತೊಂದಿದೆ. ಈ ವಿಚಾರವನ್ನು ಇಂದಿನ ಯುವಕ, ಯುವತಿಯರು ಸದಾ ಗಮನದಲ್ಲಿಟ್ಟುಕೊಂಡಿರಬೇಕು.

ಮನುಷ್ಯ ಸಂಘಜೀವಿ ಎನ್ನುತ್ತಾರೆ ಸಮಾಜ ಶಾಸ್ತ್ರಜ್ಞರು. ಹೌದು ಮನುಷ್ಯನಷ್ಟೇ ಅಲ್ಲ. ಪ್ರಕೃತಿಯಲ್ಲಿನ ಸಕಲ ಜೀವಿಗಳೂ ಗುಂಪಿನಲ್ಲಿಯೇ ಬದುಕ ಬಯಸುತ್ತವೆ. ಮನುಷ್ಯ ಗಾಳಿ, ನೀರು, ಆಹಾರ ಇಲ್ಲದೇ ಹೇಗೆ ಬದುಕಲು ಸಾಧ್ಯವಿಲ್ಲವೋ ಹಾಗೆಯೇ ಸ್ನೇಹ, ಬಂಧುತ್ವ, ಪ್ರೇಮ ಇವುಗಳಿಲ್ಲದೇ ಬದುಕಲಾರ. ಬಳ್ಳಿಗೆ ಮರ ಹೇಗೆ ಆಸರೆಯೋ ಹಾಗೆಯೇ ನೊಂದ ಮನಸ್ಸುಗಳಿಗೆ ಸ್ನೇಹವೇ ಆಸರೆ. ಕಾಲೇಜು ಕಲಿಯುವ ವಯಸ್ಸಿನಲ್ಲಿ ಮೂಡುವ 'ಸ್ನೇಹ' ಒಂದು ಅಮೂಲ್ಯ ರತ್ನ. ಅದನ್ನು ಜೋಪಾನವಾಗಿ ಅದಕ್ಕೆ ಕಳಂಕ ಬರದಂತೆ ಕಾಪಾಡಿಕೊಂಡರೆ ಆ ರತ್ನ ಮುಂದೆ ಫಳ ಫಳನೇ ಹೊಳೆಯುತ್ತದೆ. ಇಲ್ಲವಾದಲ್ಲಿ ಕೃತಕ ಬೆಳಕಿನಂತೆ ಮಿಂಚಿ ಮಾಯವಾಗಿಬಿಡುತ್ತದೆ. ಬೇಸರ ತರಿಸುತ್ತದೆ. ಸ್ನೇಹ ಮಿತಿಮೀರಿ ಅನರ್ಥಗಳಿಗೆ ಎಡೆ ಮಾಡಿಕೊಡುವಂತಿರಬಾರದು. ಸ್ನೇಹಿತ, ಸ್ನೇಹಿತೆಯನ್ನು ಸಂಪಾದಿಸಿ. ಅದು ನಿಮ್ಮ ಓದಿಗೂ ನಿಮ್ಮ ಗುರಿಗೂ ಸಹಕಾರಿ. ನಿಮ್ಮ ಜ್ಞಾನವನ್ನು ಜಾಣತನವನ್ನು ನಿಮ್ಮ ಒಳ್ಳೆಯ ಗುಣಗಳನ್ನು ಪರಿಸ್ಪರ ಹಂಚಿಕೊಳ್ಳಿ, ತಪ್ಪು ಒಪ್ಪುಗಳನ್ನೂ ಶೀಘ್ರವಾಗಿ ಸರಿಪಡಿಸಿಕೊಳ್ಳಿ. ಅನುಭವ ವಿಚಾರಗಳ ವಿನಿಮಯ ಹಾಗೂ ಪರಸ್ಪರ ಬೆಂಬಲವಿರಲಿ. ಸ್ನೇಹವನ್ನು ಪ್ರೀತಿ– ಪ್ರೇಮ ಎಂಬ ಭ್ರಮೆಯಲ್ಲಿ ಇರಬೇಡಿ. ಒಂದು ವೇಳೆ ನೀವು ಪರಸ್ಪರ ಇಷ್ಟಪಟ್ಟಲ್ಲಿ ಪ್ರೀತಿಸಿ, ಆದರೆ ತಾಳ್ಮೆಯಿಂದಿರಿ. ವ್ಯಾಸಂಗದ ಬಗ್ಗೆ ಮೊದಲು ಆದ್ಯತೆ ನೀಡಿ. ವ್ಯಾಸಂಗ ನಂತರ ಗಾಢವಾಗಿ ಪ್ರೀತಿಸಿ!!

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಅದರಲ್ಲೂ ಇತ್ತೀಚಿನ ಸೆಮಿಸ್ಟರ್ ಪದ್ಧತಿ ಜಾರಿಗೆ ಬಂದಾಗಿನಿಂದ ವಿದ್ಯಾರ್ಥಿಗಳು ಪ್ರಾರಂಭದಿಂದಲೇ ಓದಬೇಕಾದ ಪರಿಸ್ಥಿತಿ ಕಂಡುಬಂದಿದೆ. ಇಂತಹ ಸಂದರ್ಭಗಳಲ್ಲಿ ಪ್ರೀತಿಗೆಲ್ಲಿ ಸಮಯ ಸಿಗುವುದು! ಪುಸ್ತಕಗಳು ನೀಡುವ ಜ್ಞಾನ ಅನುಪಮವಾದುದು. ಗೆಳೆಯ, ಗೆಳತಿಯರು ಮೋಸ ಮಾಡಬಹುದು, ದಾರಿತಪ್ಪಿಸಬಹುದು. ಕಂಟಕಪ್ರಾಯವಾಗಬಹುದು. ಆದರೆ ಉತ್ತಮ ಪುಸ್ತಕಗಳ ಸಹವಾಸ ಸದಾ ಸಂತೋಷಕರ, ಶಕ್ತಿದಾಯಕ, ಸೃಜನಪ್ರದವಾದುದು. ಉತ್ತಮ ಪುಸ್ತಕ ಪೋಷಕ ಎನ್ನಬಹುದು. ಎಷ್ಟೋ ಸಲ ಸ್ನೇಹಿತ, ಸ್ನೇಹಿತರ ಕೂಟ ಕಾಲಹರಣಕ್ಕೆ ಕೆಟ್ಟ ಚಟಗಳಿಗೆ ಕಾರಣವಾಗುತ್ತದೆ. ಆದರೆ ಶ್ರೇಷ್ಠ ಕೃತಿಗಳ ಅಧ್ಯಯನ ಕಾಲದ ಬೆಲೆಯನ್ನು ಕಲಿಸುತ್ತದೆ. ಬಾಳಿನ ಮೌಲ್ಯ ತಿಳಿಸುತ್ತದೆ. ಹೊಸ ಪುಸ್ತಕವೊಂದನ್ನು ಮನೆಗೆ ತಂದೆನೆಂದರೆ ಹಿತೈಷಿಯೊಬ್ಬ ಮನೆಗೆ ಬಂದನೆಂದು ತಿಳಿಯಬೇಕು. ಒಳ್ಳೆಯ ಓದುಗನು ದೇಶದ ಸಂಸ್ಕೃತಿಯನ್ನು ನಿರ್ಮಿಸುವವನಾಗಿರುತ್ತಾನೆ. ನಿಮಗೆ ಬೇಕಾದ ಸಂದೇಶವನ್ನು ಆ ಪುಸ್ತಕಗಳು ಸಾರುತ್ತವೆ" ಎಂದು ದಿವಂಗತ ಶ್ರೀಯುತ ಹಾಮಾ ನಾಯಕರು ಅಭಿಪ್ರಾಯಪಟ್ಟಿದ್ದರು. ಪುಸ್ತಕ ಅಧ್ಯಯನದಿಂದ ತಾಳ್ಮೆ ಹಾಗೂ ಬದುಕಿನ ಮೌಲ್ಯಗಳು ವೃದ್ಧಿಸುತ್ತವೆ. ಪುಸ್ತಕಗಳು ಚಿಂತನೆಯ ದಾರಿದೀಪಗಳು.

ವಿದ್ಯಾರ್ಥಿ ಕಾಲೇಜಿನಲ್ಲಿ ಒಂದು ವೇಳಾಪಟ್ಟಿಯನ್ನು ಅನುಸರಿಸುವಂತೆ ಮನೆಯಲ್ಲೂ ಒಂದು ವೇಳಾಪಟ್ಟಿಯನ್ನು ತಯಾರಿಸಿಕೊಳ್ಳಬೇಕು. ಅದಕ್ಕೆ ತಕ್ಕಂತೆ ಓದಬೇಕು. ನಿಮ್ಮ ಚಿಂತನೆ ಸದಾ ಸಕಾರಾತ್ಮಕವಾಗಿರಬೇಕು. ವಿದ್ಯಾರ್ಥಿಗಳು ವರ್ಷಪೂರ್ತಿ ಪ್ರೀತಿಯ ಹೆಸರಲ್ಲಿ ಸಿನಿಮಾ ಪಾರ್ಕ್ ಎಂಬ ಮೋಜಿನಲ್ಲಿ ಕಳೆದು ಪರೀಕ್ಷೆ ಸಮೀಪ ಬಂದಾಗ 'ಯುದ್ಧ ಕಾಲ ಶಸ್ತ್ರಾಭ್ಯಾಸ' ಎನ್ನುವಂತೆ ಪುಸ್ತಕ ಹುಡುಕಿ ತೆಗೆದು ಓದಲು ಆರಂಭಿಸುತ್ತಾರೆ. ಆಗ 'ಅಬ್ಬಬ್ಬ ಇಷ್ಟೆಲ್ಲ ಸಿಲಬಸ್ ಓದೋದು ಇದೆಯಲ್ಲ! ಇದನ್ನೆಲ್ಲ ಯಾವಾಗ ಓದಿ ಮುಗಿಸೋದು ಎಂದು ತಲೆ ಕೆರೆದುಕೊಳ್ಳುವರು. ಅಂತಹವರೇ ಪರೀಕ್ಷೆಯಲ್ಲಿ ಕಡಿಮೆ ಅಂಕ ಇಲ್ಲವೆ ನಪಾಸ್ ಆಗುವರು. ನಂತರದ ದಿನಗಳಲ್ಲಿ ಸಮಾಜಕ್ಕೆ ಸುಮ್ಮನೆ ಹೊರೆಯಾಗುವರು.

ಶಿಕ್ಷಣವೆಂದರೆ ಅಶಿಕ್ಷಿತ, ಅನಾಗರಿಕ ಮನುಷ್ಯನನ್ನು ಸುಶಿಕ್ಷಿತ, ಸುಸಂಸ್ಕೃತನನ್ನಾಗಿ ಮಾಡುವುದೇ ಆಗಿದೆ. ಅದರ ಮೂಲಕ ನಡೆನುಡಿ, ಸಂಸ್ಕೃತಿ, ಶಿಸ್ತುಬದ್ಧ ಜೀವನ, ಸದಾಚಾರ, ಸಚ್ಚಾರಿತ್ರ್ಯದ ಬೆಳವಣಿಗೆಗೆ ಅಡಿಪಾಯ ಹಾಕುವುದು ಎಂದರ್ಥ. ಒಂದು ಗಂಟೆಯಲ್ಲಿ ಒಂದೆಡೆ ಕುಳಿತು ಓದಿದ್ದನ್ನು ಸ್ನೇಹಿತ, ಸ್ನೇಹಿತೆಯೊಡನೆ ಚರ್ಚಿಸುವುದು ಒಳ್ಳೆಯ ಅಂಶ. ಈ ಚರ್ಚೆ, ಅಧ್ಯಯನ ವಿಷಯದ ವಿವಿಧ ಆಯಾಮಗಳನ್ನು, ಹೊಳಹುಗಳನ್ನು ಸ್ಪಷ್ಟಪಡಿಸುವಂತದ್ದಾಗಿರಬೇಕು. ಚರ್ಚೆ ಯಾವತ್ತೂ ಅಧ್ಯಯನ ಕೇಂದ್ರಿಕೃತವಾಗಿರಬೇಕು.

ನೀವು ಆರಾಧಿಸುವ ವ್ಯಕ್ತಿ ನಿಮ್ಮ ತರಗತಿಯಲ್ಲೇ ಇರುತ್ತಾರೆ. ಚೆನ್ನಾಗಿ ಓದಿ ಅವನ/ಅವಳ ಮೆಚ್ಚುಗೆಗಳಿಸಬೇಕು ಎಂಬ ಸಾತ್ವಿಕ ಗುರಿಯಾಗಿಟ್ಟುಕೊಂಡು ಅಧ್ಯಯನದಲ್ಲಿ ನಿರತರಾಗಿ. ಇದು ನಿಮ್ಮಲ್ಲಿ ಹೊಸಹುರುಪು ತುಂಬುತ್ತದೆ. ಓದಲು ಪ್ರಚೋದಿಸುತ್ತದೆ. ನಿಮ್ಮ ಪೂರ್ಣ ವಿದ್ಯಾಭ್ಯಾಸ ಮುಗಿಯುವವರೆಗೂ ಪ್ರೀತಿಯ ಬಗ್ಗೆ ಹೆಚ್ಚಿನ ಗಮನಕೊಡಬೇಡಿ. ಆದರೆ ಆಕೆ, ಆತನೊಂದಿಗೆ ಒಳ್ಳೆಯ ಸ್ನೇಹದಿಂದಿರಿ.

ಕನಸು ಕಾಣಿರಿ. ಕನಸು ಆಲೋಚನೆಗೆ ದಾರಿ ಮಾಡಿಕೊಡುತ್ತದೆ, ಆಲೋಚನೆ ಕಾರ್ಯಸಾಧನೆ ಮಾಡಿಸುತ್ತದೆ ಎಂದು ಮಾಜಿ ರಾಷ್ಟ್ರಪತಿ ದಿವಂಗತ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ, ಯುವ ಜನರನ್ನು ಹುರಿದುಂಬಿಸುತ್ತಿದ್ದನ್ನು ನಾವು ನೋಡಿದ್ದೇವೆ. ಸರಿಯಾದ ದಿಕ್ಕಿನಲ್ಲಿ, ಸರಿಯಾದ ಸಮಯದಲ್ಲಿ, ಸೂಕ್ತ ಪರಿಸರದಲ್ಲಿ ಮೂಡಿದ ಆಲೋಚನೆಗಳು ಪ್ರಪಂಚವನ್ನೇ ಬದಲಾಯಿಸಿವೆ. ದೇಶವನ್ನು ಪ್ರಗತಿ ಪಥದತ್ತ ಒಯ್ಯುವಂತೆ ಮಾಡುವ ಜವಾಬ್ದಾರಿ ನಮ್ಮ ಯುವಜನರ ಮೇಲಿದೆ. ನಾವು ಹೇಗೆ ಯೋಚಿಸುತ್ತೇವೆಯೋ ಜಗತ್ತು ಹಾಗೆಯೇ ಇರುತ್ತದೆ. ನಮ್ಮ ಆಲೋಚನೆಗಳನ್ನು ಬದಲಿಸಿಕೊಂಡು ನುಗ್ಗಿದರೆ ಯಶಸ್ಸು ನಮ್ಮದಾಗದೇ ಇರಲು ಸಾಧ್ಯವೇ ಇಲ್ಲ.

ಯುವಜನತೆ ಕಾಲೇಜು ದಿನಗಳಲ್ಲಿ ಪ್ರೀತಿ–ಪ್ರೇಮ ಎಂಬ ವಿಷಯದತ್ತ ಗಮನ ಕೊಡದೆ ಪಠ್ಯದಷ್ಟೇ ಪಠ್ಯೇತರ ಚಟುವಟಿಕೆಗಳಾದ ಸಂಗೀತ, ನಾಟಕ, ಜಾನಪದ, ನೃತ್ಯ, ಚಿತ್ರಕಲೆ, ಸಮಾಜಸೇವೆ, ಪರಿಸರ ಸಂರಕ್ಷಣೆ, ಸಾಹಿತ್ಯ, ಭಾಷಣ ಇವನ್ನೆಲ್ಲಾ ಕಲಿತಾಗ ಮಾತ್ರ 'ಸರ್ವಾಂಗೀಣ ಬೆಳವಣಿಗೆ' ಪದಕ್ಕೆ ಪುಷ್ಟಿ ಕೊಟ್ಟಂತಾಗುತ್ತದೆ. ಸಮಯದ ಸದುಪಯೋಗವಾಗುತ್ತದೆ ಹಾಗೂ ವೃಥಾ ಕಾಲಹರಣ ತಪ್ಪುತ್ತದೆ.

ಯೌವ್ವನವೆನ್ನುವುದು ಒಳಿತು–ಕೆಡುಕುಗಳೆರಡನ್ನು ಒಳಗೊಂಡಿರುವ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇವೆರಡು ಕೂಡ ಮುಕ್ತವಾಗಿರುತ್ತದೆ. ಆಯ್ಕೆ ನಮ್ಮದಾಗಿದ್ದು ಕೆಲ ಯುವಕ/ಯುವತಿಯರಿಗೆ ಪ್ರೀತಿ, ಪ್ರೇಮ ಬಹಳ ಆಕರ್ಷಣೆಯಾಗಿದ್ದುಕೊಂಡು ತನ್ನತ್ತ ಸೆಳೆದುಕೊಳ್ಳುತ್ತದೆ. ಇದೇ ಯೌವ್ವನದಲ್ಲಿ ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ತಾರೆಗಳಂತೆ ಚಿಮ್ಮಿ ತಮ್ಮ ಬದುಕನ್ನು ರೂಪಿಸಿಕೊಂಡ ಅನೇಕ ಉದಾಹರಣೆಗಳು ನಮ್ಮೊಟ್ಟಿಗಿವೆ. ಎಪಿಜೆ ಅಬ್ದುಲ್ ಕಲಾಂ, ರಾಮಕೃಷ್ಣ ಪರಮಹಂಸ, ಮೇಧಾ ಪಾಟ್ಕರ್, ಕಲ್ಪನಾ ಚಾವ್ಲ, ಕಿರಣ್‌ಬೇಡಿಯಂತಹ ಅನೇಕ ಆದರ್ಶ ವ್ಯಕ್ತಿಗಳು ನಮಗೆ ದಾರಿದೀಪವಾಗಬೇಕಿದೆ. ಇಂದು ಯೌವ್ವನದಲ್ಲಿರುವ ಪ್ರತಿಯೊಬ್ಬರೂ ತಮ್ಮ ಪ್ರತಿಭೆ, ಸಮಯ, ಅವಕಾಶ ಸಾಮರ್ಥ್ಯಗಳನ್ನು ಎಷ್ಟರಮಟ್ಟಿಗೆ ಸದುಪಯೋಗಪಡಿಸಿಕೊಳ್ಳುತ್ತಿದ್ದೇವೆ ಎಂದು ಸ್ವ ವಿಮರ್ಶೆ ಮಾಡಿಕೊಳ್ಳುವ ಅಗತ್ಯವಿದೆ. ಬದುಕು ದೊಡ್ಡದಾಗಿದ್ದು ನೋಡಲಿಕ್ಕೆ, ಸಾಧಿಸಲಿಕ್ಕೆ, ಅನುಭವಿಸಲಿಕ್ಕೆ ಸಾಕಷ್ಟಿದ್ದು ಅವುಗಳೆಲ್ಲವನ್ನು ಬಳಸಿಕೊಂಡು ತಾವು ಕಟ್ಟಿಕೊಂಡ ಗುರಿಗಳೆಡೆಗೆ ಲಕ್ಷ್ಯ ವಹಿಸಿದರೆ ಜಯ ಖಂಡಿತ.

ಯುವಕ–ಯುವತಿಯರ ಮನಸ್ಸು ವಿಚಿತ್ರ. ಏನೇನೊ ಬಯಸುತ್ತದೆ, ಯಾವುದಕ್ಕೊ ಹೆದರುತ್ತದೆ, ಇನ್ಯಾವುದಕ್ಕಾಗಿಯೋ ಚಡಪಡಿಸುತ್ತದೆ, ಇನ್ನೊಮ್ಮೆ ಮುದುಡುತ್ತದೆ, ಉಕ್ಕಿ ಹರಿವ ಭಾವಗಳಲ್ಲಿ ಕೆಲವು ಮಾತಾಗಿ ಹೊರಹೊಮ್ಮುತ್ತವೆ, ಕೆಲವು ಅಕ್ಷರ ಕವನಗಳಾಗಿ ಕಾಗದ ಸೇರುತ್ತವೆ, ಹೇಳಲು ಅಂಜುವವರು, ಹೇಳದೆ ಇರಲಾರರು, ಕ್ಷಣಕ್ಕೊಮ್ಮೆ ಹೊಯ್ದಾಡುವ ಮನಸ್ಸು ಚಂಚಲಗೊಳ್ಳುವ ಕಣ್ಣುಗಳು ಉಕ್ಕಿ ಹರಿಯುವ ಭಾವಗಳ ಸಾಗರ, ಆದ್ದರಿಂದ ಎಲ್ಲದಕ್ಕೂ ತಾಳ್ಮೆಯಿಂದಿರಿ. "ಏಳಿ, ಎದ್ದೇಳಿ ಗುರಿಮುಟ್ಟುವ ತನಕ ನಿಲ್ಲದಿರಿ" ಎಂಬ ಸ್ವಾಮಿ ವಿವೇಕಾನಂದರ ವಾಣಿಯು ಸದಾ ನಿಮ್ಮ ಮನದಲ್ಲಿರಲಿ. ನಮ್ಮ ಮೊದಲ ಆದ್ಯತೆ ಓದಿನ ಕಡೆ ಇರಲಿ ಹೊರತು ಪ್ರೀತಿಗಲ್ಲ ಎಂಬುದು ಗೊತ್ತಿರಲಿ.

ನಿಮ್ಮ ವ್ಯಾಸಂಗದ ಬಗ್ಗೆ ನೂರಕ್ಕೆ ನೂರರಷ್ಟು ಭಾಗ ಮೀಸಲಿಡಿ. ಪೂರ್ಣಶ್ರದ್ಧೆ ಹಾಗೂ ಛಲದಿಂದ ಉತ್ತಮ ವ್ಯಾಸಂಗ ಮುಗಿಸಿ, ಅತ್ಯುನ್ನತ ಹುದ್ದೆಗೇರಿದ ಬಳಿಕ ನಿಮ್ಮ ಪ್ರೀತಿಯನ್ನು ವ್ಯಕ್ತಪಡಿಸಿ. ಅದು ಫಲಿಸಿದರೆ ಹಿರಿಯರ ಪ್ರೀತಿಯ ಹಾರೈಕೆಗಳೊಂದಿಗೆ ಮದುವೆಯಾಗಿ ಚೆನ್ನಾಗಿ ಬಾಳಿ, ಇಡೀ ಸಮಾಜಕ್ಕೆ ಮಾದರಿ ವ್ಯಕ್ತಿಗಳಾಗುವುದು ಒಳಿತಲ್ಲವೇ!?

ಸ್ತನ ಕ್ಯಾನ್ಸರ್ ವಾಸಿಯಾಗುವ ಕಾಯಿಲೆ, ಆದರೆ ಜಾಗೃತಿ ಅವಶ್ಯ

ಅಪೋಲೋ ಬಿಜಿಎಸ್ ಆಸ್ಪತ್ರೆ ಆಂಕೊಲಜಿ ಸಲಹೆಗಾರರಾದ ಡಾ.ರಮ್ಯ ಯೆತ್ತಡ್ಕ



ಸ್ಪರ್ಶ್, ಫೋರಮ್ ಫಾರ್ ವುಮೆನ್ ಎಂಪವರ್‌ಮೆಂಟ್, ವೆಲ್ನೆಸ್ ಸೆಂಟರ್ ಮತ್ತು ಹೈಜೀನ್ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ, ಇನ್ನರ್–ವ್ಹೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಅಧ್ಯಾಪಕ ಹಾಗೂ ಅಧ್ಯಾಪಕೇತರರಿಗೆ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೈಸೂರು, ಅ.23– ಸ್ತನ ಕ್ಯಾನ್ಸರ್ ವಾಸಿಯಾಗುವ ಕಾಯಿಲೆ. ಈ ಬಗ್ಗೆ ಜನರಿಗೆ ಜಾಗೃತಿಯ ಅವಶ್ಯಕತೆ ಇದೆ ಎಂದು ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಯ ಆಂಕೊಲಜಿ ಸಲಹೆಗಾರ್ತಿ ಡಾ.ರಮ್ಯ ಯೆತ್ತಡ್ಕ ತಿಳಿಸಿದರು.

ಸ್ಪರ್ಶ್, ಫೋರಮ್ ಫಾರ್ ವುಮೆನ್ ಎಂಪವರ್‌ಮೆಂಟ್, ವೆಲ್ನೆಸ್ ಸೆಂಟರ್ ಮತ್ತು ಹೈಜೀನ್ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ, ಇನ್ನರ್–ವ್ಹೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಅಧ್ಯಾಪಕ ಹಾಗೂ ಅಧ್ಯಾಪಕೇತರರಿಗೆ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿ ಡಾ.ರಮ್ಯ ಯೆತ್ತಡ್ಕ ಮಾತನಾಡಿ, ಕ್ಯಾನ್ಸರ್ ದೊಡ್ಡ ಕಾಯಿಲೆಯಲ್ಲ. ಆದರೆ, ಈ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಮಾತ್ರ ಅದು ಸಾವಿಗೆ ಕಾರಣವಾಗುತ್ತದೆ. ಶೇ.26ರಿಂದ ಶೇ.28ರಷ್ಟು ಜನರು ಸ್ತನ ಕ್ಯಾನ್ಸರ್‌ಗೆ ಒಳಗಾಗುತ್ತಿದ್ದಾರೆ. ಮಹಿಳೆಯರು ಮಾತ್ರವಲ್ಲದೇ 100ರಲ್ಲಿ ಒಬ್ಬ ಪುರುಷನಿಗೂ ಸ್ತನ ಕ್ಯಾನ್ಸರ್ ಬರುತ್ತದೆ. ಸ್ತನ ಕ್ಯಾನ್ಸರ್‌ನಿಂದ ಮೃತಪಡುವವರ ಸಂಖ್ಯೆ ಮೊದಲನೇ ಸ್ಥಾನದಲ್ಲಿದೆ. ಸ್ತನದ ಕ್ಯಾನ್ಸರ್ ಯಾರಿಗೆ ಬೇಕಾದರೂ ಹಾಗೂ ಎಲ್ಲಾ ವಯಸ್ಸಿನವರಿಗೂ ಬರಬಹುದು.

35 ವರ್ಷದ ನಂತರ ಮಗುವಿಗೆ ಜನ್ಮ ನೀಡಿದರೆ, ಅವರಿಗೆ ಸ್ತನ ಕ್ಯಾನ್ಸರ್ ಬರುವ ಸಾಧ್ಯತೆ ಎರಡುಪಟ್ಟು ಇರುತ್ತದೆ. ಮಗುವಿಗೆ ಎದೆಹಾಲು ಉಣಿಸದಿದ್ದರೆ ಸ್ತನ ಕ್ಯಾನ್ಸರ್ ಬರುವುದಕ್ಕೆ ಮತ್ತೊಂದು ಕಾರಣ. ಅನುವಂಶಿಕವಾಗಿ ಶೇ.5ರಷ್ಟು ಸ್ತನ ಕ್ಯಾನ್ಸರ್ ಬರುವ ಸಂಭವ ಹೆಚ್ಚಿರುತ್ತದೆ. 40 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು ವರ್ಷಕ್ಕೊಮ್ಮೆ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳುವುದು ಉತ್ತಮ ಮತ್ತು 21 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು 2–3 ತಿಂಗಳಿಗೊಮ್ಮೆ ಸ್ವಯಂ ಪರೀಕ್ಷೆ ಮಾಡಿಕೊಳ್ಳಬೇಕು ಎಂದು ವಿವರಿಸಿದರು.

ಕ್ಯಾನ್ಸರ್ ರೋಗಿಗಳಿಗೆ ಖಾಸಗಿ ಆರೋಗ್ಯ ವಿಮಾ ಸೌಲಭ್ಯಗಳು ಸೇರಿದಂತೆ, ಸರ್ಕಾರಿ ವಿಮಾ ಸೌಲಭ್ಯಗಳ ಲಭ್ಯವಿದೆ. ಕ್ಯಾನ್ಸರ್ ಬರುವುದನ್ನು ತಡೆಯಲು ಸಾಧ್ಯವಿಲ್ಲ. ಆದರೆ, ಬರುವ ಪ್ರಮಾಣವನ್ನು ಆರೋಗ್ಯಕರ ಆಹಾರ, ಧ್ಯಾನ, ಮಿತವಾದ ವ್ಯಾಯಾಮ ಸೇರಿದಂತೆ ಉತ್ತಮ ಅಭ್ಯಾಸಗಳಿಂದ ಕಡಿಮೆ ಮಾಡಿಕೊಳ್ಳಬಹುದು. ಮುಂಜಾಗ್ರತಾ ಆರೋಗ್ಯ ತಪಾಸಣೆ ಮಾಡಿಸುವುದರಿಂದ ಮೊದಲ ಹಂತದಲ್ಲೇ ರೋಗವನ್ನು ಪತ್ತೆಹಚ್ಚಿ ಗುಣಪಡಿಸಬಹುದು. ಕ್ಯಾನ್ಸರ್ ಒಬ್ಬರಿಂದ ಒಬ್ಬರಿಗೆ ಹರಡುವ ರೋಗವಲ್ಲ ಎಂದು ತಿಳಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರುಳಿಧರ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಶೈಕ್ಷಣಿಕ ಸಲಹೆಗಾರ ಡಾ.ಎಸ್. ಆರ್. ರಮೇಶ್, ಶೈಕ್ಷಣಿಕ ಡೀನ್ ಡಾ. ಶ್ರೀಧರ ಹೆಚ್, ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್‌ನ ಅಧ್ಯಕ್ಷೆ ಶ್ರೀಮತಿ ಶಶಿಕಲಾ ಸುರೇಶ್, ಕಾರ್ಯದರ್ಶಿ ಶ್ರೀಮತಿ ಭವಾನಿ ಚಂದ್ರ, ಸ್ಪರ್ಶ ಮತ್ತು ಫೋರಮ್ ಫಾರ್ ವುಮೆನ್ ಎಂಪವರ್‌ಮೆಂಟ್ ಸಂಯೋಜಕರಾದ ಶ್ರೀಮತಿ ರಾಧಿಕಾ ರಾಣಿ, ವೆಲ್ನೆಸ್ ಸೆಂಟರ್ ಮತ್ತು ಹೈಜೀನ್ ಸಂಯೋಜಕರಾದ ಡಾ.ಪೂರ್ಣಿಮಾ .ಎಸ್, ಅಧ್ಯಾಪಕರು, ಅಧ್ಯಾಪಕೇತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಸೇಂಟ್ ಜೋಸೆಫ್ ಕ್ಯಾಥೆಡ್ರಲ್‌ನಲ್ಲಿ ಹೊಸ ಪ್ರವೇಶ ದ್ವಾರಕ್ಕೆ ಶಂಕುಸ್ಥಾಪನೆ



ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್‌ನಲ್ಲಿ ನೂತನ ಪ್ರವೇಶ ದ್ವಾರಕ್ಕೆ ಮೈಸೂರು ಧರ್ಮಪ್ರಾಂತ್ಯದ ಆರ್ಚ್ ಬಿಷಪ್ ಎಮಿರಿಟಸ್, ಅಪೋಸ್ಟೋಲಿಕ್ ಆಡಳಿತಾಧಿಕಾರಿ ಡಾ.ಬರ್ನಾಡ್ ಮೊರಾಸ್ ಶಂಕುಸ್ಥಾಪನೆ ನೆರವೇರಿಸಿದರು.

ಮೈಸೂರು,ಅ.23–ಸೇಂಟ್ ಜೋಸೆಫ್ ಕ್ಯಾಥೆಡ್ರಲ್ (ಸೇಂಟ್ ಫಿಲೋಮಿನಾ ಚರ್ಚ್) ನಲ್ಲಿ ನೂತನ ಪ್ರವೇಶ ದ್ವಾರಕ್ಕೆ ಮೈಸೂರು ಧರ್ಮಪ್ರಾಂತ್ಯದ ಆರ್ಚ್ ಬಿಷಪ್ ಎಮಿರಿಟಸ್ ಹಾಗೂ ಅಪೋಸ್ಟೋಲಿಕ್ ಆಡಳಿತಾಧಿಕಾರಿ ಡಾ.ಬರ್ನಾಡ್ ಮೊರಾಸ್ ಶಂಕುಸ್ಥಾಪನೆ ನೆರವೇರಿಸಿದರು.

ಭಾರತದ ಅತ್ಯಂತ ಎತ್ತರದ ಚರ್ಚ್ ಮತ್ತು ಏಷ್ಯಾದಲ್ಲಿ 2ನೇ ಅತಿ ಎತ್ತರದ ಚರ್ಚ್ ಎಂದು ಹೆಸರುವಾಸಿಯಾಗಿದೆ. ಸೇಂಟ್ ಜೋಸೆಫ್ ಕ್ಯಾಥೆಡ್ರಲ್ ಗಮನಾರ್ಹ ಹೆಗ್ಗುರುತಾಗಿದೆ.

ಅದರ ಜಾಗತಿಕ ಖ್ಯಾತಿಯ ಹೊರತಾಗಿಯೂ, ಕ್ಯಾಥೆಡ್ರಲ್ ಸರಿಯಾದ ಮತ್ತು ಕಲಾತ್ಮಕವಾಗಿ ಆಹ್ಲಾದಕರವಾದ ಪ್ರವೇಶದ್ವಾರವನ್ನು ಹೊಂದಿಲ್ಲ. ಚರ್ಚ್‌ಗೆ ನೇರವಾಗಿ ಎದುರಾಗಿರುವ ಅಸ್ತಿತ್ವದಲ್ಲಿರುವ ಸಣ್ಣ ಗೇಟ್ ಪ್ರವಾಸಿಗರು ಮತ್ತು ಯಾತ್ರಿಕರ ಒಳಹರಿವಿಗೆ ಅಸಮರ್ಪಕವಾಗಿದೆ ಎಂದು ಸಾಬೀತಾಗಿದೆ. ಹೆಚ್ಚು ಸ್ವಾಗತಾರ್ಹ ಪ್ರವೇಶ ಮಾರ್ಗದ ಅಗತ್ಯವನ್ನು ಗುರುತಿಸಿ, ಹೊಸ ಗೇಟ್‌ನ ಯೋಜನೆಗಳು ವರ್ಧಿತ ಭದ್ರತಾ ವೈಶಿಷ್ಟ್ಯಗಳು ಮತ್ತು ಕ್ಯಾಥೆಡ್ರಲ್‌ನ ಭವ್ಯತೆಗೆ ಪೂರಕವಾದ ಅಲಂಕಾರಿಕ ಅಂಶಗಳನ್ನು ಒಳಗೊಂಡಿವೆ.

ಪ್ರವೇಶ ದ್ವಾರದ ನಿರ್ಮಾಣವು ಡಿಸೆಂಬರ್ 2024 ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಆಲ್ಪ್ರೆಡ್ ಜಾನ್ ಮೆಂಡೋನ್ಸಾ, ಮೈಸೂರು ಧರ್ಮ ಪ್ರಾಂತ್ಯದ ವಿಕಾರ್ ಜನರಲ್ ಡಾ.ರೆ.ಫಾ. ಸೆಬಾಸ್ಟಿಯನ್ ಅಲೆಕ್ಸಾಂಡರ್, ಹಣಕಾಸು ನಿರ್ವಾಹಕರು; ರೆ.ಫಾ. ಜೋಸೆಫ್ ಪ್ಯಾಕಿಯರಾಜ್, ಕುಲಪತಿ; ರೆ.ಫಾ. ಸ್ಟೇನಿ ಡಿ'ಅಲ್ಮೆಡಾ, ಪ್ಯಾರಿಷ್ ಪ್ರೀಸ್ಟ್; ಮತ್ತು ಲೈಟ್ ಹೌಸ್ ಪೋಲ್ಸ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ನೆಪೋಲಿಯನ್ ಎಂ.ಎ. ಲಿಮಿಟೆಡ್, ಗೇಟ್ ತಯಾರಿಕೆ ಕಂಪನಿ ಯವರು ಉಪಸ್ಥಿತರಿದ್ದರು. ಈ ಯೋಜನೆಯು ಸೇಂಟ್ ಜೋಸೆಫ್ ಕ್ಯಾಥೆಡ್ರಲ್‌ನ ಸೌಂದರ್ಯದ ಆಕರ್ಷಣೆ ಮತ್ತು ಸುರಕ್ಷತೆ ಎರಡನ್ನೂ ಹೆಚ್ಚಿಸುವ ಗುರಿಯನ್ನು ಹೊಂದಿದೆ. ಈ ಐತಿಹಾಸಿಕ ತಾಣಕ್ಕೆ ಭೇಟಿ ನೀಡುವ ಎಲ್ಲರ ಅನುಭವವನ್ನು ಮತ್ತಷ್ಟು ಶ್ರೀಮಂತಗೊಳಿಸುತ್ತದೆ.

ಅ.26, ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ ಜಯಂತ್ಯುತ್ಸವ



ಮೈಸೂರು, ಅ. 23–ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜದ ವತಿಯಿಂದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 109ನೇ ಜಯಂತ್ಯುತ್ಸವ ಸಮಾರಂಭವನ್ನು ಅ.26 ರಂದು ಸಂಜೆ 4 ಗಂಟೆಗೆ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜು ಹಾಸ್ಟೆಲ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಹುಣಸೂರು ತಾಲೂಕು ಗಾವಡಗೆರೆ ಗುರುಲಿಂಗದೇವರ ಮಠದ ಶ್ರೀ ನಟರಾಜ ಸ್ವಾಮಿಗಳ ಸಾನ್ನಿಧ್ಯದಲ್ಲಿ ಮೈಸೂರು ಜಿಲ್ಲಾ ವೀರಶೈವ ಲಿಂಗಾಯಿತ ಮಹಾಸಭಾದ ಅಧ್ಯಕ್ಷ ಹಿನಕಲ್ ಬಸವರಾಜು ಕಾರ್ಯಕ್ರಮ ಉದ್ಘಾಟಿಸುವರು. ಚುಟುಕು ಯುಗಾಚಾರ್ಯ ಡಾ.ಎಂ.ಜಿ.ಆರ್. ಅರಸ್ ಅಧ್ಯಕ್ಷತೆ ವಹಿಸುವರು.

ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಅವರು ಪೂಜ್ಯರ ಕೊಡುಗೆಗಳ ಬಗ್ಗೆ ಉಪನ್ಯಾಸ ನೀಡುವರು. ಸಂಸ್ಥೆಯ ಅಧ್ಯಕ್ಷರಾದ ಚುಟುಕು ಸಿರಿ ಡಾ.ರತ್ನ ಹಾಲಪ್ಪಗೌಡ, ಶರಣ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಎಂ. ಚಂದ್ರಶೇಖರ್, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಪೊಲೀಸ್ ಬಡಾವಣೆಯಲ್ಲಿ ಪೊಲೀಸರಿಗೇ ರಕ್ಷಣೆ ಇಲ್ಲ



ಪೊಲೀಸ್ ಬಡಾವಣೆಯಲ್ಲಿ ಪೊಲೀಸರಿಗೇ ರಕ್ಷಣೆ ಇಲ್ಲ ಎಂದು ಮೈಸೂರಿನ ಸರ್ದಾರ್ ವಲ್ಲಭಬಾಯ್‌ಪಟೇಲ್ ನಗರದ ನಿವೃತ್ತ ಪೊಲೀಸ್ ಅಧಿಕಾರಿಗಳು ಬುಧವಾರ ಮೈಸೂರು ನಗರ ಪೊಲೀಸ್ ಆಯುಕ್ತರಲ್ಲಿ ಮನವಿ ಮಾಡಿದ್ದಾರೆ.

ಮೈಸೂರು, ಅ.23(ಬಿಎಲ್‌ಯು)–ಪೊಲೀಸ್ ಬಡಾವಣೆಯಲ್ಲಿ ಪೊಲೀಸರಿಗೇ ರಕ್ಷಣೆ ಇಲ್ಲ ಎಂದು ಮೈಸೂರಿನ ಸರ್ದಾರ್ ವಲ್ಲಭಬಾಯ್‌ಪಟೇಲ್ ನಗರದ ನಿವೃತ್ತ ಪೊಲೀಸ್ ಅಧಿಕಾರಿಗಳು ಗೋಳು ತೋಡಿಕೊಂಡಿದ್ದು, ಅಪರಾಧ ಕೃತ್ಯಗಳ ತಡೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಇಂದು ನಗರ ಪೊಲೀಸ್ ಆಯುಕ್ತರಲ್ಲಿ ಮನವಿ ಮಾಡಿದ್ದಾರೆ.

ಸರ್ದಾರ್ ವಲ್ಲಭಬಾಯ್‌ಪಟೇಲ್ ನಗರ ಹಾಗೂ ಜೆಎಸ್‌ಎಸ್ ನಗರ ಬಡಾವಣೆಯಲ್ಲಿ ಮನೆಗಳ್ಳತನ, ಸರಗಳ್ಳತನ ಕೃತ್ಯಗಳು ನಡೆಯುತ್ತಿದ್ದು, 80 ಅಡಿ ರಸ್ತೆಯಲ್ಲಿ ನಿರಂತರವಾಗಿ ರಸ್ತೆ ಅಪಘಾತಗಳು ಸಂಭವಿಸುತ್ತಿವೆ ಎಂದು ದೂರಿದ್ದಾರೆ.

ಈ ಹಿನ್ನೆಲೆಯಲ್ಲಿ ಎರಡೂ ಬಡಾವಣೆಯಲ್ಲಿ ರಾತ್ರಿ ವೇಳೆ ಪೊಲೀಸ್ ಗಸ್ತು ವ್ಯವಸ್ಥೆ ಮಾಡಬೇಕು, ರಸ್ತೆ ಅಪಘಾತ ತಡೆಯುವ ನಿಟ್ಟಿನಲ್ಲಿ ರಸ್ತೆ ಡುಬ್ಬಗಳನ್ನು ನಿರ್ಮಿಸಬೇಕು ಎಂದು ಪೊಲೀಸ್ ಆಯುಕ್ತರಲ್ಲಿ ಮನವಿ ಮಾಡಿದ್ದಾರೆ. ನಿವೃತ್ತ ಪೊಲೀಸ್ ಅಧಿಕಾರಿಗಳಾದ ದೇವಪ್ಪಾಜಿ, ಬಿ.ದೊರೆಸ್ವಾಮಿ, ಗುರುಸ್ವಾಮಿ, ಬಿಜೆಪಿ ನಗರ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಿ.ಲೋಹಿತ್, ಪುಟ್ಟನಂಜಪ್ಪ, ಮಲ್ಲಿಕಾರ್ಜುನ, ಪುಟ್ಟನಂಜಪ್ಪ, ನೀಲಪ್ಪ, ಮಲ್ಲಣ್ಣ ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಹಾಜರಿದ್ದರು.

ಕಾಂಗ್ರೆಸ್‌ನವರು ಗನ್ ತಗೊಂಡು ಹೋದರು ಬುಲೆಟ್‌ಗಳು ಬಿಜೆಪಿ–ಜೆಡಿಎಸ್‌ನಲ್ಲಿವೆ!

ಜೆಡಿಎಸ್ ನಾಯಕ ಸುರೇಶ್ ಬಾಬು ವ್ಯಂಗ್ಯೋಕ್ತಿ



ಸುರೇಶ್ ಬಾಬು

ಬೆಂಗಳೂರು, ಅ.23– ಸೈನಿಕ ಹೋದ್ರು ನಮಗೆ ಚಿಂತೆ ಇಲ್ಲ. ಕಾಂಗ್ರೆಸ್‌ನವರು ಗನ್ ತೆಗೆದುಕೊಂಡು ಹೋದ್ರು, ಬುಲೆಟ್‌ಗಳು ಬಿಜೆಪಿ–ಜೆಡಿಎಸ್‌ನಲ್ಲೇ ಇವೆ ಎಂದು ಜೆಡಿಎಸ್ ನಾಯಕ ಸುರೇಶ್ ಬಾಬು ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯೋಗೇಶ್ವರ್ ಕಾಂಗ್ರೆಸ್ ಸೇರ್ಪಡೆಯಿಂದ ಮೈತ್ರಿಗೆ ಹಿನ್ನಡೆ ಆಗಿಲ್ಲ. ಯೋಗೇಶ್ವರ್ ಕಾಂಗ್ರೆಸ್ ಸೇರುತ್ತಾರೆ ಎಂದು ನಮಗೆ ಮುಂಚೆಯೇ ಗೊತ್ತಿತ್ತು. ಮೈತ್ರಿಗೆ ಧಕ್ಕೆ ಬರಬಾರದು ಎಂದು ಕುಮಾರಸ್ವಾಮಿ ಅವರು ಕಾದು ನೋಡುವ ತಂತ್ರ ಮಾಡಿದ್ದರು ಎಂದು ತಿಳಿಸಿದ್ದಾರೆ.

ಯೋಗೇಶ್ವರ್ ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಾಗಲೇ ಎಲ್ಲರಿಗೂ ಅವರ ಒಳ ಮರ್ಮ ಏನು ಎಂದು ಗೊತ್ತಾಯ್ತು. ಯೋಗೇಶ್ವರ್ 5–6 ಪಕ್ಷದ ಬಿ ಫಾರ್ಮ್ ತೆಗೆದುಕೊಂಡಿದ್ದರು. ಬಿಜೆಪಿ ಅಥವಾ ಜೆಡಿಎಸ್‌ನಿಂದ ನಿಂತಿದ್ರೆ ಅವರೇನು ಎಂಎಲ್‌ಸಿಗೆ ರಾಜೀನಾಮೆ ಕೊಡುವ ಅವಶ್ಯಕತೆ ಇರಲಿಲ್ಲ. ಅವರು ರಾಜೀನಾಮೆ ಕೊಟ್ಟಾಗಲೇ ವಾಮಮಾರ್ಗ ಹಿಡಿದಿದ್ದಾರೆ ಎಂದು ಗೊತ್ತಿತ್ತು ಎಂದಿದ್ದಾರೆ. ಅವರು ಹೋಗಿದ್ದಕ್ಕೆ ನಾವ್ಯಾರು ಆತಂಕ ಪಡುವುದಿಲ್ಲ. ನಾವು ಉತ್ತಮವಾದ ಅಭ್ಯರ್ಥಿಯನ್ನು ನಿರ್ಧಾರ ಮಾಡಿ ಎನ್‌ಡಿಎಯಿಂದ ನಿಲ್ಲಿಸುತ್ತೇವೆ. ಬೇರೆ ಸಮುದಾಯದ ಮತ ಬರುತ್ತೆ, ಮುಸ್ಲಿಂ ಮತ ಬರುತ್ತೆ ಎಂದು ಹೋಗಿದ್ದಾರೆ. ಯೋಗೇಶ್ವರ್ ಮುಸ್ಲಿಮರ 4 ಎಕರೆ ಜಾಗ ಹೇಗೆ ಕಬಳಿಸಿದರು ಎಂದು ಮುಸ್ಲಿಮರು ನಮ್ಮ ಬಳಿ ಮಾತಾಡಿದ್ದಾರೆ. ಇನ್ನು ಚನ್ನಪಟ್ಟಣದಲ್ಲಿ ಎನ್‌ಡಿಎ ಅಭ್ಯರ್ಥಿಯನ್ನು ಗೆಲ್ಲುಸುತ್ತೇವೆ ಎಂದು ಸುರೇಶ್ ಬಾಬು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ಹಗರಣ

ಚುನಾವಣೆ ವೇಳೆಯೇ ಸಿದ್ದರಾಮಯ್ಯರಿಗೆ ನೋಟಿಸ್ ನೀಡುವ ವ್ಯವಸ್ಥಿತ ತಂತ್ರ

- ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪ
- ಮುಡಾ ಅಧಿಕಾರಿಗಳಿಗೆ ಗನ್ ಪಾಯಿಂಟ್ ಬೆದರಿಕೆ!!
- ತನಿಖೆ ವೇಳೆ ನಕಲಿ ದಾಖಲಾತಿ, ಸಾಕ್ಷ್ಯ ಸೃಷ್ಟಿ
- ಸಿದ್ದರಾಮಯ್ಯರ ಬೆನ್ನಿಗೆ ಕಾಂಗ್ರೆಸ್ ಬಂಡೆಯಂತೆ ನಿಂತಿದೆ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿದರು.

ಮೈಸೂರು, ಅ.23(ಬಿಎಲ್‌ಯು)–ಮುಡಾ ಪ್ರಕರಣದಲ್ಲಿ ಯಾವುದೇ ಹಣಕಾಸಿನ ವ್ಯವಹಾರ ನಡೆಯದಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹಗರಣದಲ್ಲಿ ಸಿಲುಕಿಸಲು ಇಡಿ (ಜಾರಿ ನಿರ್ದೇಶನಾಲಯ) ವ್ಯವಸ್ಥಿತ ತಂತ್ರ ರೂಪಿಸಿದ್ದು, ಸಮನ್ಸ್ ನೀಡುವ ಸಾಧ್ಯತೆ ಇದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ದೂರಿದರು.

ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರನ್ನು ಹಗರಣದಲ್ಲಿ ಸಿಲುಕಿಸಲು ಇಡಿ ವ್ಯವಸ್ಥಿತ ಪಟ್ಟಿಯೊಂದನ್ನು ತಯಾರು ಮಾಡಿಕೊಂಡಿದೆ ಎಂದು ಹೇಳಿದರು.

ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂರು ದಾಖಲಾತಿ ಮಾತ್ರ ಅವಶ್ಯವಿದ್ದರೂ 32 ಗಂಟೆಗಳ ಕಾಲ ಮುಡಾದಲ್ಲಿ ತನಿಖೆ ನಡೆಸಿ ದಾಖಲಾತಿಗಾಗಿ ಜಾಲಾಡಿದ್ದಾರೆ. ಸಿದ್ದರಾಮಯ್ಯ ವಿರುದ್ಧ ನಕಲಿ ದಾಖಲಾತಿ ಹಾಗೂ ಸಾಕ್ಷ್ಯ ಸೃಷ್ಟಿ ಮಾಡಿದ್ದಾರೆ. ಮುಡಾ ಅಧಿಕಾರಿಗಳಿಗೆ ಗನ್ ಪಾಯಿಂಟ್ ಇಟ್ಟು ಬಲವಂತವಾಗಿ ದಾಖಲಾತಿ ಹಾಗೂ ಹೇಳಿಕೆ ಪಡೆದಿದ್ದಾರೆ ಎಂದು ಲಕ್ಷ್ಮಣ್ ಆಪಾದಿಸಿದರು.

ಮುಡಾ ಪ್ರಕರಣದಲ್ಲಿ ಹಣದ ವ್ಯವಹಾರ ನಡೆದಿದ್ದರೆ ಇಡಿ ತನಿಖೆ ಮಾಡಬಹುದಿತ್ತು ಆದರೆ ಇಲ್ಲಿ ಯಾವುದೇ ಹಣದ ವ್ಯವಹಾರ ನಡೆದಿಲ್ಲ. ಹೇಗಾದರೂ ಮಾಡಿ ಹಗರಣದಲ್ಲಿ ಸಿಲುಕಿಸಲು ವ್ಯವಸ್ಥಿತವಾದ ತಂತ್ರ ರೂಪಿಸಿದ್ದಾರೆ ಎಂದು ದೂರಿದರು.

ಒಂದು ತನಿಖಾ ಸಂಸ್ಥೆ ತನಿಖೆ ನಡೆಸುವಾಗ ಮತ್ತೊಂದು ತನಿಖಾ ಸಂಸ್ಥೆ ತನಿಖೆ ನಡೆಸುವಂತಿಲ್ಲ. ಒಂದು ವೇಳೆ ಅಗತ್ಯವಿದ್ದರೆ ಈ ಸಂಬಂಧ ರಾಷ್ಟ್ರಪತಿ ಮತ್ತು ಸುಪ್ರೀಂಕೋರ್ಟ್‌ಗೆ ಮಾತ್ರ ಆದೇಶಿಸುವ ಅವಕಾಶವಿದೆ. ಆದರೆ ಮುಡಾ ಬಗ್ಗೆ ಈಗಾಗಲೇ ನ್ಯಾಯಾಂಗ ತನಿಖೆ ನಡೆಯುತ್ತಿರುವ ಸಂದರ್ಭದಲ್ಲಿ ಇಡಿ ತನಿಖೆ ನಡೆಸುತ್ತಿದೆ. ಇದನ್ನು ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್ ಗಮನಕ್ಕೆ ತರುತ್ತೇವೆ ಎಂದರು.

ಮಹಾರಾಷ್ಟ್ರದಲ್ಲಿ ಸಾರ್ವತ್ರಿಕ ಚುನಾವಣೆ ಜೊತೆಗೆ ರಾಜ್ಯದ ಮೂರು ಕ್ಷೇತ್ರದಲ್ಲಿ ಉಪ ಚುನಾವಣೆ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ವಿಚಾರಣೆಗೆ ಹಾಜರಾಗುವಂತೆ ಸಿದ್ದರಾಮಯ್ಯರಿಗೆ ನೋಟಿಸ್ ಜಾರಿ ಮಾಡುವ ಸಾಧ್ಯತೆ ಇದೆ. ಇದು ಬಿಜೆಪಿ ಮನಸ್ಥಿತಿ ಏನೆಂದು ತೋರಿಸುತ್ತದೆ ಎಂದು ಟೀಕಿಸಿದರು.

10 ಸಾವಿರ ಕೋಟಿ ಆಸ್ತಿ ಮಾಡಬಹುದಿತ್ತು: ಸಿದ್ದರಾಮಯ್ಯ ಮನಸು ಮಾಡಿದ್ದರೆ ಹತ್ತು ಸಾವಿರ ಕೋಟಿ ಆಸ್ತಿ ಮಾಡಬಹುದಿತ್ತು. ನನಗೆ ಸ್ವಂತ ಮನೆ ಇಲ್ಲ ಎಂದು ಭಾವನಾತ್ಮಕವಾಗಿ ಹೇಳಿದ್ದಾರೆ. ಇಂತಹ ವ್ಯಕ್ತಿ ಮೇಲೆ ನಿರಾಧಾರ ಆರೋಪ ಮಾಡುತ್ತಾರಲ್ಲ, ಇದು ಸರಿಯೇ ಎಂದು ಪ್ರಶ್ನಿಸಿದರು. ಬಿಜೆಪಿಯವರು ಯಾವುದೇ ತಂತ್ರ, ಕುತಂತ್ರ ರೂಪಿಸಲಿ. ಕಾಂಗ್ರೆಸ್ ಪಕ್ಷ ಮಾತ್ರ ಸಿದ್ದರಾಮಯ್ಯ ಬೆನ್ನಿಗೆ ಬಂಡೆಯಂತೆ ನಿಲ್ಲಲಿದೆ. ಉಪ ಚುನಾವಣೆಯಲ್ಲಿ ಬಿಜೆಪಿಗೆ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಸಿದ್ದರಾಮಯ್ಯ ವಿರುದ್ಧ ಕುಮಾರಸ್ವಾಮಿ ಯಾವುದೇ ದಾಖಲೆ ಇಲ್ಲದೆ ಆರೋಪ ಹೊರಿಸಿ ಹಿಟ್ ಅಂಡ್ ರನ್ ಕೆಲಸ ಮಾಡುತ್ತಾರೆ. ಕುಮಾರಸ್ವಾಮಿ ಒಕ್ಕಲಿಗ ನಾಯಕರನ್ನು ತುಳಿಯುತ್ತಾರೆ ಎಂದು ಸಿ.ಪಿ.ಯೋಗೇಶ್ವರ್ ಕೂಡ ಹೇಳಿದ್ದಾರೆ. ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸುವ ಮೂಲಕ ಚನ್ನಪಟ್ಟಣದ ಜನರು ಬಿಜೆಪಿ ಮತ್ತು ಜೆಡಿಎಸ್‌ಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಹೇಳಿದರು.

300, 400 ಕೋಟಿ ಹಗರಣ ಮಾಡಿರುವವರು ಬಿಜೆಪಿ ಸೇರಿದರೆ ಇಡಿ ಕ್ಲೀನ್ ಚಿಟ್ ನೀಡಲಿದೆ. ಚಂದ್ರಬಾಬು ನಾಯ್ಡು, ಅಜಿತ್ ಪವಾರ್, ಸುರೇಂದ್ರ ಅಧಿಕಾರಿ ಸೇರಿದಂತೆ ಬಹಳಷ್ಟು ಮಂದಿ ರಾಜಕಾರಣಿಗಳು ಬಿಜೆಪಿ ಸೇರಿದ ನಂತರ ಇಡಿ ಅವರಿಗೆ ಕ್ಲೀನ್ ಚಿಟ್ ನೀಡಿದೆ. ಬಿಜೆಪಿಯವರು ಅಧಿಕಾರಕ್ಕಾಗಿ ಯಾವ ಹಂತಕ್ಕಾದರೂ ಹೋಗುತ್ತಾರೆ ಎಂದು ಲಕ್ಷ್ಮಣ್ ಆರೋಪಿಸಿದರು.

> **“ಪಾರ್ವತಿ ಅವರು 14 ನಿವೇಶನ ವಾಪಸು ಕೊಡುವ ತನಕ ಬಿಜೆಪಿ ಮತ್ತು ಜೆಡಿಎಸ್‌ನವರು ಸಿದ್ದರಾಮಯ್ಯ ಅವರನ್ನು ಟಾರ್ಗೆಟ್ ಮಾಡಿದರು. ಆದರೆ ಈಗ ಮೌನವಾಗಿದ್ದಾರೆ. ಮುಡಾದಲ್ಲಿ ಐದು ಸಾವಿರ ಕೋಟಿ ಹಗರಣ ನಡೆದಿದ್ದರೆ, ಯಾರ್ಯಾರು ತಪ್ಪಿತಸ್ಥರು ಎಂದು ಪಟ್ಟಿ ಬಿಡುಗಡೆ ಮಾಡಲಿ.**
> **–ಎಂ.ಲಕ್ಷ್ಮಣ್, ಕೆಪಿಸಿಸಿ ವಕ್ತಾರ**

ದಾಖಲೆ ಮುಂದಿಟ್ಟು ಆರೋಪಿಸಲಿ: ಸ್ವಂತ ಮನೆ ಇಲ್ಲ ಎಂದೇಳುವ ಸಿದ್ದರಾಮಯ್ಯ ಮಗ, ಸೊಸೆ ಹೆಸರಿನಲ್ಲಿ 350 ಕೋಟಿ ಮೌಲ್ಯದ ಪಬ್ ತೆರೆದಿದ್ದಾರೆ ಎಂಬ ವಿಶ್ವನಾಥ್ ಆರೋಪಕ್ಕೆ ಕಿಡಿಕಾರಿದ ಲಕ್ಷ್ಮಣ್, ಇಂತಹ ಆರೋಪ ಮಾಡುವಾಗ ವಿಶ್ವನಾಥ್ ದಾಖಲೆ ಮುಂದಿಟ್ಟು ಮಾತನಾಡಲಿ. ಗಾಳಿಯಲ್ಲಿ ಗುಂಡು ಹೊಡೆಯುವುದು ಬೇಡ ಎಂದು ಸಲಹೆ ನೀಡಿದರು.

ಜಾತಿ ಗಣತಿ ವರದಿಯನ್ನು ಸರ್ಕಾರ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದ ಲಕ್ಷ್ಮಣ್, ವೀರಶೈವರು ಹಾಗೂ ಒಕ್ಕಲಿಗರು ಜಾತಿ ಗಣತಿ ವರದಿಯನ್ನು ಯಾವ ಕಾರಣಕ್ಕೆ ವಿರೋಧ ಮಾಡುತ್ತಿದ್ದಾರೆ ಎಂಬುದು ತಿಳಿಯುತ್ತಿಲ್ಲ. ಮೀಸಲಾತಿಯನ್ನು ಶೇಕಡ 50ಕ್ಕೆ ಮಿತಿಗೊಳಿಸಿ ಸುಪ್ರೀಂಕೋರ್ಟ್ ನೀಡಿದ ಆದೇಶಕ್ಕೆ 25 ವರ್ಷವಾಯಿತು. ಈಗ ಸರ್ಕಾರ ಮೀಸಲಾತಿಯನ್ನು ಶೇಕಡ 75ಕ್ಕೆ ಏರಿಕೆ ಮಾಡಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮಾಜಿ ಕಾರ್ಪೋರೇಟರ್ ಶಿವಣ್ಣ, ಮುಖಂಡರಾದ ಚಂದ್ರೇಗೌಡ, ಮಹೇಶ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಚನ್ನಪಟ್ಟಣದಲ್ಲಿ ಕಾಂಗ್ರೆಸ್ ದುರ್ಬಲ!



ಬೆಂಗಳೂರು,ಅ.23–(ಕೆಎಂಶಿ) ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಅವರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡು ಚನ್ನಪಟ್ಟಣದಲ್ಲಿ ತಾವು ದುರ್ಬಲವೆಂದು ಕಾಂಗ್ರೆಸ್ ಪಕ್ಷ ಒಪ್ಪಿಕೊಂಡಂತಾಗಿದೆ ಎಂದು ರಾಜ್ಯ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ವಿಶ್ಲೇಷಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯೋಗೇಶ್ವರ್ ಅವರು ಕಾಂಗ್ರೆಸ್ಸಿಗೆ ಹೋದುದರಿಂದ ಒಂದಂತೂ ನಾವು ಊಹಿಸಬಹುದು. 136 ಶಾಸಕರಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರರಂಥ ಪ್ರಬಲ ನಾಯಕರನ್ನು ಹೊಂದಿರುವ ಕಾಂಗ್ರೆಸ್ ಪಕ್ಷ ಚನ್ನಪಟ್ಟಣದಲ್ಲಿ ದುರ್ಬಲ ಎಂದು ಅವರೇ ಒಪ್ಪಿಕೊಂಡಂತಾಗಿದೆ ಎಂದು ಟೀಕಿಸಿದರು.


ನಿನ್ನೆ ಮೊನ್ನೆಯವರೆಗೂ ನಾನೇ ಅಭ್ಯರ್ಥಿ ಎಂದು ಡಿ.ಕೆ.ಶಿವಕುಮಾರ್ ಹೇಳುತ್ತಿದ್ದರು. ಪೂರ್ವ ತಯಾರಿ ಮಾಡಿ ಓಡಾಡುತ್ತಿದ್ದರು. ಮಾಜಿ ಸಂಸದ ಡಿ.ಕೆ. ಸುರೇಶ್ ಅಲ್ಲಿ ಅಭ್ಯರ್ಥಿ ಎಂದು ಬಹಳ ಜನ ಅಂದುಕೊಂಡಿದ್ದರು. ಅಲ್ಲಿ ಯೋಗೇಶ್ವರ್‌ಗೇ ಟಿಕೆಟ್ ಕೊಟ್ಟು ಅಸಹಾಯಕತೆ ತೋರಿಸುತ್ತಾರೋ, ಅಥವಾ ಯೋಗೇಶ್ವರ್ ಜತೆಗಿಟ್ಟುಕೊಂಡು ಡಿ.ಕೆ.ಸುರೇಶ್ ಅಭ್ಯರ್ಥಿ ಆಗುತ್ತಾರೋ ನೋಡಬೇಕಿದೆ. ಆದರೆ, ಕಾಂಗ್ರೆಸ್ ತಾನು ಚನ್ನಪಟ್ಟಣದಲ್ಲಿ ದುರ್ಬಲ ಎಂದು ಒಪ್ಪಿಕೊಂಡಂತಾಗಿದೆ ಎಂದರು.

ಯೋಗೇಶ್ವರ್ ಅವರು ಮಹತ್ವಾಕಾಂಕ್ಷೆ ಇಟ್ಟುಕೊಂಡ ರಾಜಕಾರಣಿ. ಸುದೀರ್ಘ ಅವಧಿಯಲ್ಲಿ ಕಾಂಗ್ರೆಸ್ ಪಕ್ಷವನ್ನು ವಿರೋಧಿಸಿ ರಾಜಕಾರಣ ಮಾಡಿದವರು. ಡಿ.ಕೆ.ಶಿವಕುಮಾರ್ ಮತ್ತು ಅವರ ನಡುವಿನ ಶತ್ರುತ್ವ ಇವತ್ತು ನಿನ್ನೆಯದಲ್ಲ. ಹುಲಿ ಬೋನಿಗೆ ಹೋಗಿದ್ದಾರೆ. ಒಂದೋ ಹುಲಿಯನ್ನು ಮಣಿಸಬೇಕು, ಇಲ್ಲವೇ ಹುಲಿಗೆ ಬಲಿ ಆಗಬೇಕು ಎಂದು ತಿಳಿಸಿದರು.

ಇವತ್ತೇ ಎಲ್ಲವನ್ನೂ ಹೇಳಲು ಸಾಧ್ಯವಿಲ್ಲ. ನಮ್ಮ ರಾಜಕಾರಣ ಮತ್ತು ಯೋಗೇಶ್ವರ್ ರಾಜಕಾರಣದ ಚಿಂತನೆಯ ನಡುವೆ ಅಗಾಧವಾದ ಅಂತರವಿದೆ. ಯೋಗೇಶ್ವರ್ ಅವರು ವೈಯಕ್ತಿಕ ನೆಲೆಯಲ್ಲಿ ರಾಜಕಾರಣ ಮಾಡುತ್ತಾರೆ. ಸದಾಕಾಲ ರಾಜಕೀಯ ಕ್ಷೇತ್ರದ ಲಾಭ–ನಷ್ಟದ ಲೆಕ್ಕ ಹಾಕುತ್ತಾರೆ. ನಮ್ಮದು ಸೈದ್ಧಾಂತಿಕ ಬದ್ಧತೆಯ ರಾಜಕಾರಣ. ಲಾಭ–ನಷ್ಟದ ಲೆಕ್ಕಾಚಾರಕ್ಕೆ ಅವಕಾಶವೂ ಇಲ್ಲ. ಆ ಚಿಂತನೆಯೂ ನಮ್ಮಲ್ಲಿಲ್ಲ ಎಂದು ನುಡಿದರು.

ಯೋಗೇಶ್ವರ್ ರಾಜೀನಾಮೆ ಕೊಟ್ಟ ಮೇಲೆ ಸೋದರಿಕೆ ಸಂಬಂಧವೇನೂ ಇಲ್ಲ. ನಾವು ಎನ್‌ಡಿಎ ಆಗಿ ಚನ್ನಪಟ್ಟಣದಲ್ಲಿ ಹೋರಾಟ ಮಾಡುತ್ತೇವೆ. ನಾವು ನಿರ್ಣಯಿಸಿ ಚರ್ಚೆ ಮಾಡುವುದಿಲ್ಲ. ಚರ್ಚಿಸಿ ನಿರ್ಣಯಕ್ಕೆ ಬರುತ್ತೇವೆ. ಒಂದೂವರೆ 2 ತಿಂಗಳ ಹಿಂದೆಯೇ ನಾವು ಚನ್ನಪಟ್ಟಣದ ಕುರಿತು ಕುಮಾರಸ್ವಾಮಿಯವರ ಜೊತೆ ಚರ್ಚಿಸಿದ್ದೇವೆ. ಚನ್ನಪಟ್ಟಣ ಕುಮಾರಸ್ವಾಮಿಯವರು ಪ್ರತಿನಿಧಿಸಿದ ಕ್ಷೇತ್ರ ಏಕಪಕ್ಷೀಯ ನಿರ್ಣಯ ಹೇರುವುದು, ನಮ್ಮ ನಿರ್ಣಯ ಹೇರುವುದಾಗಲೀ ಮೈತ್ರಿ ಅನಿಸುವುದಿಲ್ಲ. ಇಬ್ಬರೂ ಸೇರಿ ನಿರ್ಣಯಿಸಬೇಕಾಗುತ್ತದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕಾಂಗ್ರೆಸ್ ಸೇರಿ ಯೋಗೇಶ್ವರ್ ರಾಜಕೀಯ ಭವಿಷ್ಯ ಹಾಳು ಮಾಡಿಕೊಂಡರು!




ಬೆಂಗಳೂರು,ಅ.23–(ಕೆಎಂಶಿ) ಮಾಜಿ ಸಚಿವ ಸಿ.ಪಿ. ಯೋಗೇಶ್ವರ್ ಕಾಂಗ್ರೆಸ್ ಸೇರುವ ಮೂಲಕ ತಮ್ಮ ರಾಜಕೀಯ ಭವಿಷ್ಯ ಹಾಳು ಮಾಡಿಕೊಂಡಿದ್ದಾರೆ. ಕಾಂಗ್ರೆಸ್‌ನಿಂದ ಚನ್ನಪಟ್ಟಣದಲ್ಲಿ ಸ್ಪರ್ಧಿಸಿದರೆ ಅವರಿಗೆ ಲೀಡ್ ದೊರೆಯುವುದಿಲ್ಲ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೆಡಿಎಸ್ ನಾಯಕರು, ಕಾರ್ಯಕರ್ತರನ್ನು ಒಪ್ಪಿಸಿದ್ದು, ಸಿ.ಪಿ.ಯೋಗೇಶ್ವರ್ ಅವರಿಗೆ ಚನ್ನಪಟ್ಟಣ ಕ್ಷೇತ್ರದ ಟಿಕೆಟ್ ನೀಡಲು ತಯಾರಾಗಿದ್ದರು. ನಾನು ಸೇರಿದಂತೆ ಎಲ್ಲ ಬಿಜೆಪಿ ನಾಯಕರು ಅವರಿಗೆ ಬೆಂಬಲ ನೀಡಿದ್ದೆವು. ಅವರಿಗೆ ಟಿಕೆಟ್ ಸಿಗಲು ಎಲ್ಲಾ ಪ್ರಯತ್ನ ಮಾಡಿದ್ದೆವು. ಅವರು ಪಕ್ಷ ತೊರೆಯುವ ಮೂಲಕ ಪಕ್ಷಕ್ಕೆ ದ್ರೋಹ ಮಾಡಿದ್ದಾರೆ ಎಂದು ಆರೋಪಿಸಿದರು.

ಈಗ ಬಿಜೆಪಿ–ಜೆಡಿಎಸ್ ಮೈತ್ರಿ ಇದೆ. ಕೋಲಾರದಲ್ಲಿ ಈ ಹಿಂದೆ ಬಿಜೆಪಿ ಗೆದ್ದಿತ್ತು. ಈ ಲೋಕಸಭಾ ಚುನಾವಣೆಯಲ್ಲಿ ಅಲ್ಲಿ ಜೆಡಿಎಸ್‌ಗೆ ಅವಕಾಶ ನೀಡಲಾಗಿದೆ. ಮಂಡ್ಯದಲ್ಲಿ ಈ ಹಿಂದೆ ಸುಮಲತಾ ಸ್ಪರ್ಧಿಸಿದ್ದರು. ಬಳಿಕ ಕುಮಾರಸ್ವಾಮಿ ಅಲ್ಲಿ ಗೆದ್ದರು. ಇಲ್ಲಿ ಬಿಜೆಪಿ, ಜೆಡಿಎಸ್ ಎಂಬುದಕ್ಕಿಂತ ಎನ್‌ಡಿಎ ಗೆಲ್ಲಬೇಕು ಎಂಬ ಉದ್ದೇಶ ಇತ್ತು. ಆದರೆ, ಇವೆಲ್ಲ ಮೈತ್ರಿಯ ಒಗ್ಗಟ್ಟನ್ನು ಬದಿಗೆ ಸರಿಸಿ ಕಾಂಗ್ರೆಸ್‌ಗೆ ಸೇರಿರುವುದರಿಂದ ಅವರ ರಾಜಕೀಯ ಭವಿಷ್ಯ ಹಾಳಾಗಿದೆ. ಎನ್‌ಡಿಎನಲ್ಲಿ ಯೋಗೇಶ್ವರ್ ಅವರಿಗೆ ಹಿರಿತನವಿತ್ತು. ಈಗ ಕಾಂಗ್ರೆಸ್‌ಗೆ ಸೇರಿ ಕೊನೆಯ ಸಾಲಿನಲ್ಲಿ ನಿಂತಿದ್ದಾರೆ. ಅವರು ಕಾಂಗ್ರೆಸ್‌ಗೆ ಹೋದ ಕೂಡಲೇ ಮಣೆ ಹಾಕಿ ಕೂರಿಸುವುದಿಲ್ಲ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಯೋಗೇಶ್ವರನ್ನು ಕರೆಸಿಕೊಂಡಿದ್ದಾರೆ. ಇನ್ನು ಹೇಗೆ ತುಳಿಯಬೇಕೆಂದು ಡಿ.ಕೆ.ಶಿವಕುಮಾರ್ ಅವರೇ ಯೋಜನೆ ರೂಪಿಸಿರುತ್ತಾರೆ. ಇವರು ಮುಂದೆ ಬರಲು ಕಾಂಗ್ರೆಸ್‌ನ ಯಾರೂ ಬಿಡುವುದಿಲ್ಲ ಎಂದರು.

ಇದರಲ್ಲಿ ಯಾವುದೇ ತಂತ್ರಗಾರಿಕೆ ಇಲ್ಲ. ಇದು ಜೆಡಿಎಸ್‌ಗೆ ಸೇರಿದ್ದ ಕ್ಷೇತ್ರ ಅಂತಿಮ ತೀರ್ಮಾನ ತೆಗೆದುಕೊಳ್ಳುವುದು ಜೆಡಿಎಸ್‌ಗೆ ಬಿಟ್ಟಿದ್ದು ಎಂದು ಬಿಜೆಪಿಯ ಹಿರಿಯ ನಾಯಕರು ಸೂಚನೆ ನೀಡಿದ್ದಾರೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ನನ್ನೊಡನೆ ಈ ಬಗ್ಗೆ ಮಾತಾಡಿದ್ದಾರೆ. ನಿನ್ನೆಯೇ ಈ ಬಗ್ಗೆ ನಮಗೆ ಸುಳಿವು ಸಿಕ್ಕಿತ್ತು. ಅವರನ್ನು ಇಲ್ಲಿಯೇ ಉಳಿಸಿಕೊಳ್ಳಬೇಕೆಂದು ಎಲ್ಲಾ ಪ್ರಯತ್ನ ಮಾಡಲಾಗಿತ್ತು. ಆದರೆ ಅವರೇ ಅವರ ಭವಿಷ್ಯಕ್ಕೆ ಕಲ್ಲು ಹಾಕಿಕೊಂಡಿದ್ದಾರೆ. ಕಾಂಗ್ರೆಸ್‌ನಿಂದ ಸ್ಪರ್ಧೆ ಮಾಡಿದರೆ ಅವರಿಗೆ ಗೆಲ್ಲಲು ಸಾಧ್ಯವೇ ಇಲ್ಲ ಎಂದು ಅಶೋಕ ಹೇಳಿದರು.

ಚಾಮುಂಡೇಶ್ವರಿ ಬಿಜೆಪಿ ಸದಸ್ಯತ್ವ ಅಭಿಯಾನ



ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಹೂಟಗಳ್ಳಿ ಮಹಾಶಕ್ತಿ ಕೇಂದ್ರದಲ್ಲಿ ಸದಸ್ಯತ್ವ ಅಭಿಯಾನವನ್ನು ಮಂಡಲದ ಅಧ್ಯಕ್ಷ ವೈ.ಟಿ.ರವಿ ಲಕ್ಷ್ಮೀಪುರ ಹಾಗೂ ಮಾಜಿ ಅಧ್ಯಕ್ಷ ಎಸ್.ಆರ್.ಗೋಪಾಲರಾವ್ ನೇತೃತ್ವದಲ್ಲಿ ನಡೆಸಲಾಯಿತು. ಮಹಿಳಾ ಮೋರ್ಚಾ ಅಧ್ಯಕ್ಷರಾದ ಸವಿತಾ ಗೌಡ, ಕಾರ್ಯದರ್ಶಿ ಶೃತಿ, ರೈತ ಮೋರ್ಚಾ ಅಧ್ಯಕ್ಷ ಹೂಟಗಳ್ಳಿ ದೇವರಾಜು, ಕಾರ್ಯದರ್ಶಿ ಕೂರ್ಗಳ್ಳಿ ರೇವಣ್ಣ, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಕುಮಾರ್, ಶಾಲಿನಿ ಕುಮಾರ್, ರವಿ, ಶರತ್, ಪ್ರಭು ಹಾಜರಿದ್ದರು.

ಎರಡು ಆನೆ, ಎರಡು ಹುಲಿ ದತ್ತು ಸ್ವೀಕಾರ

ಮೈಸೂರು,ಅ.23– ಅದ್ವೈತ್ ಮೋಟಾರ್ಸ್ ಪ್ರೈವೇಟ್ ಲಿಮಿಟೆಡ್ ಅವರು ರೂ.7,00,000ಗಳ ದೇಣಿಗೆಯನ್ನು ಪಾವತಿಸಿ ಮೈಸೂರು ಮೃಗಾಲಯದ ಎರಡು ಆನೆಗಳನ್ನು ಮತ್ತು ಎರಡು ಹುಲಿಗಳನ್ನು 2024–25ನೇ ಸಾಲಿಗೆ ಒಂದು ವರ್ಷದ ಅವಧಿಗೆ ದತ್ತು ಸ್ವೀಕರಿಸಿದ್ದಾರೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಕನ್ನಡ ನಾಡಿನ ಹೆಸರನ್ನು ಅವಿಸ್ಮರಣೀಯಗೊಳಿಸಿದ ವೀರ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ

ಮೈಸೂರಲ್ಲಿ ವೀರ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮ ಉದ್ಘಾಟಿಸಿದ ಡಾ.ಪುಷ್ಪಾ ಅಮರನಾಥ್ ಬಣ್ಣನೆ



ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಲಾಮಂದಿರದಲ್ಲಿ ಹಮ್ಮಿಕೊಂಡಿದ್ದ, ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮದಲ್ಲಿ ಚೆನ್ನಮ್ಮ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ಮೈಸೂರು,ಅ.23(ಆರ್‌ಕೆ)–ರಾಣಿ ಚೆನ್ನಮ್ಮ ಅವರು ಕನ್ನಡ ನಾಡಿನ ಹೆಸರನ್ನು ಇತಿಹಾಸದಲ್ಲಿ ಅವಿಸ್ಮರಣೀಯಗೊಳಿಸಿದ ಮಾಡಿದ ವೀರ ಮಹಿಳೆ ಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಹೇಳಿದರು.

ಬುಧವಾರ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಲಾಮಂದಿರದಲ್ಲಿ ಹಮ್ಮಿಕೊಂಡಿದ್ದ, ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂದು ನಾವು ಇತಿಹಾಸವನ್ನು ನೆನಪಿಸಿಕೊಳ್ಳುವ ಪ್ರಮುಖವಾದ ದಿನ. ಚೆನ್ನಮ್ಮ ಎಂಬ ಹೆಸರನ್ನು ಕೇಳಿದಾಕ್ಷಣ ಎಲ್ಲರಲ್ಲೂ ಮೈ ರೋಮಾಂಚನಗೊಳಿಸುವಂತಹ ಶಕ್ತಿ ಎಂದರು.

ರಾಣಿ ಚೆನ್ನಮ್ಮ ಭಾರತ ದೇಶದಲ್ಲಿ ಎಲ್ಲರ ಮನಸನ್ನು ಗೆದ್ದಂತಹ ಅಪ್ರತಿಮ ಹೋರಾಟಗಾರ್ತಿ, ಇತಿಹಾಸದಲ್ಲಿಯೇ ಮಹಿಳೆಯರಲ್ಲಿ ಮಂಚೂಣಿಯಲ್ಲಿರುವ ಹೆಸರು ಇವರದು. ಚೆನ್ನಮ್ಮ ಅವರು ಬ್ರಿಟಿಷರಿಗೆ 'ನಿಮಗೇಕೆ ಕೊಡಬೇಕು ಕಪ್ಪ' ಸವಾಲಿನ ಮಾತನ್ನು ನೆನಪಿಸುತ್ತಾ ನಮ್ಮ ನಾಡಿನ ಮಹಿಳೆಯರು ಹಾಗೂ ಪುರುಷರಲ್ಲಿ ದೇಶಭಕ್ತಿಯನ್ನು ಹಚ್ಚಿ, 128 ವರ್ಷಗಳ ಮುಂಚೆಯೇ ಸ್ವಾತಂತ್ರ್ಯದ ಕಿಚ್ಚನ್ನು ಬೆಳಗಿಸಿದರು. ಯಾವುದೇ ಒಂದು ಕೆಲಸ ಅಥವಾ ಸವಾಲನ್ನು ತೆಗೆದುಕೊಳ್ಳುವಾಗ ಹೆಣ್ಣು ಮಕ್ಕಳಿಗೆ ಸ್ಫೂರ್ತಿ ಕೊಡುವಂತಹ ಶಕ್ತಿ ಈಕೆಯದ್ದು. ಬುದ್ಧ, ಬಸವಣ್ಣನವರ ಹಾದಿಯಲ್ಲಿ ನಮ್ಮ ದೇಶದ ಕೀರ್ತಿ ಪತಾಕೆಯನ್ನು ಆರಿಸುವಲ್ಲಿ ಇವರ ಕೊಡುಗೆಯನ್ನು ಅಪಾರ ಎಂದರು.

ವಿಧಾನಪರಿಷತ್ತಿನ ಶಾಸಕ ಸಿ.ಎನ್. ಮಂಜೇಗೌಡ ಮಾತನಾಡಿ, ಪ್ರಸ್ತುತ ಕಾಲಮಾನದಲ್ಲಿ ಇತಿಹಾಸವನ್ನು ತಿಳಿದುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಏಕೆಂದರೆ ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಒನಕೆ ಓಬವ್ವ, ಕಿತ್ತೂರು ರಾಣಿ ಚೆನ್ನಮ್ಮ, ಬಸವಣ್ಣ ಇವರೆಲ್ಲರೂ ತಮ್ಮ ಪ್ರಾಣವನ್ನು ದೇಶದ ಏಳಿಗೆಗೆ, ಸ್ವಾತಂತ್ರ್ಯಕ್ಕಾಗಿ ಹಾಗೂ ನಾಡಿನ ರಕ್ಷಣೆಗಾಗಿ ಬಲಿದಾನ ಮಾಡಿದಂತಹ ಮಹಾನ್ ವ್ಯಕ್ತಿಗಳಾಗಿರುತ್ತಾರೆ. ಇಂತಹ ಮಹಾನ್ ದಾರ್ಶನಿಕರನ್ನು ನಾವು ಸ್ಮರಿಸಿಕೊಳ್ಳುವ ಮೂಲಕ ಅವರ ಆದರ್ಶಗಳನ್ನು ಪಾಲಿಸಬೇಕು. ಬದುಕು ಬದುಕಾಗಬೇಕಾದರೆ, ಬದುಕಿಹೋದಂತಹವರ ಇತಿಹಾಸವನ್ನು ನಾವು ತಿಳಿದುಕೊಳ್ಳಬೇಕು ಎಂದು ಆಗ ನಮ್ಮ ಬದುಕಿಗೆ ಒಂದು ಸಾರ್ಥಕತೆ ಎಂದು ಹೇಳಿದರು.

ಮಂಡ್ಯ ಜಿಲ್ಲೆಯ ಹಿರಿಯ ಸಾಹಿತಿ ಡಾ.ಪ್ರದೀಪ್‌ಕುಮಾರ್ ಹೆಬ್ರಿ ಮಾತನಾಡಿ, ನಾವೆಷ್ಟು ನಮ್ಮ ದೇಶ, ಭಾಷೆಯ ಬಗ್ಗೆ ಪ್ರಾಮಾಣಿಕತೆ ಹಾಗೂ ಛಲವನ್ನು ಅಳವಡಿಸಿಕೊಂಡಿದ್ದೇವೆ ಎಂಬ ಚಿಂತೆಯು ಕಿತ್ತೂರು ರಾಣಿ ಚೆನ್ನಮ್ಮನ ವಿಜಯೋತ್ಸವದ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕು. ಈ ನಾಡು ಅನ್ಯರ ಪಾಲಾಗದೆ ನಮಗೇ ಉಳಿಯಬೇಕೆಂಬ ದಿಟ್ಟ ಕನಸನ್ನು ಇಟ್ಟುಕೊಂಡು ಹೋರಾಟ ನಡೆಸಿದ ವೀರ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ. ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದ ಈಕೆಯ ಬದುಕು, ಹೋರಾಟ ಅನನ್ಯ. ಅವರ ದೇಶಪ್ರೇಮ ಎಲ್ಲರಿಗೂ ಅನುಕರಣೀಯವಾಗಿದ್ದು ಎಂದರು.

ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದ ಬಸವ ಜ್ಞಾನಮಂದಿರದ ಪೀಠಾಧ್ಯಕ್ಷರಾದ ಡಾ.ಮಾತೆ ಬಸವಾಂಜಲಿ ದೇವಿ ಅವರು ಮಾತನಾಡಿ, ಮಹಿಳೆಯರ ಶಕ್ತಿ ಅಪಾರವಾಗಿದ್ದು, ಅದು ಸುಪ್ತವಾಗಿ ಅಡಗಿರುತ್ತದೆ. ಅದು ವ್ಯಕ್ತವಾಗಬೇಕಾದರೆ ಅವಕಾಶಗಳು ಅವಶ್ಯಕ. ಬ್ರಿಟಿಷರ ರಾಜ ನೀತಿಯನ್ನು ಪ್ರತಿಭಟನೆ ಮಾಡಿದಂತಹ ದೊಡ್ಡ ಹೋರಾಟಗಾರ್ತಿ ಚೆನ್ನಮ್ಮ ಎಂದರು.

ಮಹಿಳೆಯರು ಶೈಕ್ಷಣಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಧನೆಯನ್ನು ಮಾಡಿದ್ದಾರೆ. ಮಹಾತ್ಮ ಗಾಂಧೀಜಿ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವಾತಂತ್ರ್ಯದ ಹೋರಾಟಕ್ಕೆ ಕರೆಯನ್ನು ಕೊಟ್ಟಾಗ ಸಾಕಷ್ಟು ಮಹಿಳೆಯರು ಭಾಗವಹಿಸಿದಂತಹ ಕೀರ್ತಿ ಭಾರತಕ್ಕಿದೆ ಎಂದರು.

ಚೆನ್ನಮ್ಮನವರ 200 ವರ್ಷಗಳ ಸಾಧನೆಯು ನಮ್ಮ ಮಕ್ಕಳಿಗೆ ಹಾಗೂ ಪ್ರತಿಯೊಬ್ಬರಿಗೂ ಸ್ಫೂರ್ತಿಯಾಗಬೇಕು ಮತ್ತು ದೇಶವನ್ನು ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಧೈರ್ಯವನ್ನು ತಂದುಕೊಡುವಂತಹ ಸ್ಫೂರ್ತಿ ಕಿತ್ತೂರು ಚೆನ್ನಮ್ಮ ಎಂದರು.

12ನೇ ಶತಮಾನದಲ್ಲಿ ಧರ್ಮ ಮತ್ತು ವಚನ ಸಾಹಿತ್ಯದ ರಕ್ಷಣೆಗಾಗಿ ಮಹಿಳೆಯರು ಹಲವಾರು ಹೋರಾಟವನ್ನು ಮಾಡಿರುವುದು ನಿಜಕ್ಕೂ ಅಭಿನಂದನೀಯವಾಗಿದೆ ಎಂದರು. ನಮ್ಮ ನಾಡು, ನುಡಿ ಧರ್ಮಕ್ಕಾಗಿ ಇಂಥ ಕಾರ್ಯಕ್ರಮಗಳು ಹೆಚ್ಚೆಚ್ಚು ಆಯೋಜನೆಗೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಹಾಗೂ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಬಿ.ಎಸ್.ಸೋಮಶೇಖರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಗುರುವಾರ 24 ಅಕ್ಟೋಬರ್ 2024

ಅಪ್ರಾಪ್ತೆ ಮೇಲೆ ಅತ್ಯಾಚಾರಕ್ಕೆ ಯತ್ನ: ಆರೋಪಿ ಬಂಧನ

ಶ್ರೀರಂಗಪಟ್ಟಣ ಬಳಿ ಅಮಾನವೀಯ ಘಟನೆ

ಶ್ರೀರಂಗಪಟ್ಟಣ, ಅ.23– ಅನ್ಯಕೋಮಿನ ಯುವಕ ನೋರ್ವ ಮತ್ತೊಂದು ಕೋಮಿನ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿರುವ ಘಟನೆ ತಾಲೂಕಿನ ಹೊಸ ಆನಂದೂರು ಗ್ರಾಮದಲ್ಲಿ ಸಂಭವಿಸಿದೆ. ಈ ಸಂಬಂಧ ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲೂಕಿನ ಹೊಸ ಆನಂದೂರು ಗ್ರಾಮದ 25 ವರ್ಷದ ಯುವಕ ಅತ್ಯಾಚಾರಕ್ಕೆ ಯತ್ನಿಸಿ ಬಂಧಿತನಾದ ಆರೋಪಿ.

ಬುಧವಾರ ಮಧ್ಯಾಹ್ನ 3 ಗಂಟೆಯಲ್ಲಿ ತನ್ನ ಮನೆಯ ಮೇಲೆ ಒಣಗಲು ಹಾಕಿದ್ದ ಬಟ್ಟೆಗಳನ್ನು ತೆಗೆದುಕೊಳ್ಳುತ್ತಿದ್ದ 17 ವರ್ಷದ ಬಾಲಕಿ ಮೇಲೆ ಏಕಾಏಕಿ ದಾಳಿ ನಡೆಸಿದ ಈತ ಆಕೆಯನ್ನು ಅಡುಗೆ ಮನೆಗೆ ಎಳೆದೊಯ್ದು ಅತ್ಯಾಚಾರಕ್ಕೆ ಯತ್ನಿಸಿದ್ದಾನೆ. ಈ ವೇಳೆ ಬಾಲಕಿ ತೀವ್ರ ವಿರೋಧ ವ್ಯಕ್ತಪಡಿಸಿ ಜೋರಾಗಿ ಕಿರುಚಿ ಕೊಂಡಿದ್ದರಿಂದ ಆರೋಪಿ ಪರಾರಿಯಾಗಿದ್ದಾನೆ. ಆರೋಪಿ ಕೇರಳದಲ್ಲಿ ಕೆಲಸ ಮಾಡಿಕೊಂಡಿದ್ದು, ರಜೆಯ ಮೇಲೆ ಊರಿಗೆ ಬಂದಿದ್ದ. ಗಾಂಜಾ ವ್ಯಸನಿಯಾದ ಈತ ಈ ಕೃತ್ಯ ಎಸಗಲು ಯತ್ನಿಸಿದ್ದಾನೆ ಎಂದು ಗ್ರಾಮಸ್ಥರು ಪೊಲೀಸರಿಗೆ ತಿಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕೂಡಲೆ ಸ್ಥಳಕ್ಕೆ ಆಗಮಿಸಿದ ಪೊಲೀಸರು ಆರೋಪಿಯನ್ನು ಬಂಧಿಸಿ, ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕನ್ನಡ ಮನಸ್ಸುಗಳೆಲ್ಲಾ ಒಂದಾಗಿ ಸಾಹಿತ್ಯ ಸಮ್ಮೇಳನದ ಯಶಸ್ವಿಗೊಳಿಸಿ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮಿತಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಕರೆ

ಮಂಡ್ಯ,ಅ.23– ಮಂಡ್ಯ ಜಿಲ್ಲೆಯಲ್ಲಿ ಡಿ.20 ರಿಂದ 22ರವರೆಗೆ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನಡೆಯಲು ಕನ್ನಡದ ಎಲ್ಲಾ ಮನಸ್ಸುಗಳು ಒಂದಾಗಿ ಶ್ರಮಿಸಬೇಕಿದೆ ಎಂದು ಕೃಷಿ ಸಚಿವರಾದ ಎನ್.ಚಲುವರಾಯ ಸ್ವಾಮಿ ಮನವಿ ಮಾಡಿದರು.

ಬೆಂಗಳೂರಿನ ವಿಕಾಸ ಸೌಧದ ತಮ್ಮ ಕೊಠಡಿಯಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮಂಡ್ಯ ಜಿಲ್ಲೆಯ ಸೊಗಡಿನ ಜೊತೆಗೆ ರಾಜ್ಯದ ಬದುಕನ್ನು ಬೆಸೆಯುವ ಸ್ವರೂಪದಲ್ಲಿ ಕಾರ್ಯಕ್ರಮ ಆಯೋಜಿಸಬೇಕಿದೆ ಇದರಲ್ಲಿ ಜಿಲ್ಲೆಯ ಎಲ್ಲಾ ಜನ ಪ್ರತಿನಿಧಿಗಳು ಸಂಘ ಸಂಸ್ಥೆಗಳು, ಸಾಹಿತಿಗಳು, ಚಿಂತಕರು, ಅಧಿಕಾರಿ ಸಿಬ್ಬಂದಿ ಹೆಚ್ಚಿನ ಕಾಳಜಿ, ಪರಿಶ್ರಮ ವಹಿಸಬೇಕು ಎಂದರು.

ಮಂಡ್ಯದಲ್ಲಿ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆರ್ಥಿಕ ಇಲಾಖೆಯಿಂದ 25 ಕೋಟಿ ರೂ ಬಿಡುಗಡೆಗೆ ಶಿಫಾರಸು ಮಾಡಿದೆ. ಆದಷ್ಟು ಅದರ ಇತಿ ಮಿತಿಯೊಳಗೆ ವೆಚ್ಚ ನಿಯಂತ್ರಣ ಮಾಡಿಕೊಳ್ಳುವುದು ಸೂಕ್ತ ಎಂದು ಚಲುವರಾಯ ಸ್ವಾಮಿ ಅವರು ಸಲಹೆ ನೀಡಿದರು.

ಸಭೆಯಲ್ಲಿ ವಿವಿಧ ಉಪ ಸಮಿತಿಗಳ ಅಧ್ಯಕ್ಷರಾದ ಶಾಸಕರು, ವಿಧಾನ ಪರಿಷತ್ ಸದಸ್ಯರು, ಅಧಿಕಾರಿಗಳ ಅಭಿಪ್ರಾಯ, ಸಮಿತಿಗಳ ತೀರ್ಮಾನಗಳನ್ನು ಆಲಿಸಿದ ಸಚಿವರು ಸಾಹಿತ್ಯ-ಸಂಭ್ರಮಕ್ಕೆ ಯಾವುದೇ ಕೊರತೆಯಾಗದಂತೆ ಸಂಘಟನೆ ಮಾಡಲು ಕರೆ ನೀಡಿದರು.

ಮಂಡ್ಯ ಜಿಲ್ಲೆಯಾದ್ಯಂತ ಹಬ್ಬದ ವಾತಾವರಣ ನಿರ್ಮಾಣವಾಗಬೇಕು. ವ್ಯಾಪಕ ಪ್ರಚಾರ, ಉತ್ತಮ ಅಲಂಕಾರ ಮಾಡಬೇಕು. ಆಕರ್ಷಕ ಮೆರವಣಿಗೆ, ಅರ್ಥಪೂರ್ಣ ವಿಚಾರಗೋಷ್ಠಿ, ಕಾರ್ಯಕ್ರಮಗಳು, ಮುದ್ದೆ ಬಸ್ಸಾರು ಸೇರಿದಂತೆ ಸ್ಥಳೀಯ ಆಹಾರ ಹಾಗೂ ಉತ್ತರ ಕರ್ನಾಟಕದ ತಿನಿಸುಗಳ ಸಮ್ಮಿಶ್ರಗೊಂಡ ಊಟೋಪಚಾರ ವ್ಯವಸ್ಥೆ ಮಾಡುವಂತೆ ಸಚಿವ ಚಲುವರಾಯಸ್ವಾಮಿ ಸಲಹೆ ನೀಡಿದರು.

ಸಾಹಿತ್ಯ ಸಮ್ಮೇಳನದ ಮೊದಲೆರಡು ದಿನ ಸಂಜೆಯ ನಂತರ ಅತ್ಯುತ್ತಮ ಸಾಂಸ್ಕೃತಿಕ ಕಾರ್ಯಮಗಳನ್ನು ಆಯೋಜಿಸಬೇಕು. ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಸಮ್ಮೇಳನಕ್ಕೆ ವಿಶೇಷ ಬಸ್ ಸಂಪರ್ಕ ವ್ಯವಸ್ಥೆ ಮಾಡಬೇಕು ಎಂದು ಸಚಿವ ಚಲುವರಾಯಸ್ವಾಮಿ ನಿರ್ದೇಶನ ನೀಡಿದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಯ ಅಧ್ಯಕ್ಷರಾದ ಶಾಸಕ ರಮೇಶ ಬಂಡಿಸಿದ್ದೇಗೌಡ, ಶಾಸಕರಾದ ನರೇಂದ್ರ ಸ್ವಾಮಿ, ರವಿಕುಮಾರ್ (ಗಣಿಗ), ಉದಯ್ ಗೌಡ, ದರ್ಶನ್ ಪುಟ್ಟಣ್ಣಯ್ಯ, ವಿಧಾನಸಭಾ ಪರಿಷತ್ ಸದಸ್ಯರಾದ ಮಧು ಜಿ ಮಾದೇಗೌಡ, ದಿನೇಶ್ ಗೂಳಿಗೌಡ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ ಸದಸ್ಯರಾದ ನಾಡೋಜ ಮಹೇಶ್ ಜೋಷಿ, ಮಂಡ್ಯ ಜಿಲ್ಲಾಧಿಕಾರಿ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶೇಖ್ ತನ್ವೀರ್ ಆಸಿಫ್, ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಂಚಾಲಕರಾದ ಮೀರಾ ಶಿವಲಿಂಗಯ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದು, ಸಮ್ಮೇಳನದ ಯಶಸ್ವಿ ಸಂಘಟನೆ ಕುರಿತು ಅಮೂಲ್ಯ ಸಲಹೆಗಳನ್ನು ನೀಡಿದರು.



ಸಮ್ಮೇಳನದ ಬ್ಯಾಡ್ಜ್‌ಗಳನ್ನು ಬಿಡುಗಡೆ ಮಾಡಿದ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ.

ವಿವಿಧೆಡೆ ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಮೂವರ ಸಾವು

ನಾಗಮಂಗಲ: ತಾಲೂಕಿನಲ್ಲಿ ಸಂಭವಿಸಿದ ಮೂರು ಪ್ರತ್ಯೇಕ ಘಟನೆಗಳಲ್ಲಿ ಮೂವರು ಮೃತಪಟ್ಟಿರುವ ಘಟನೆ ವರದಿಯಾಗಿದೆ.

ಬುಧವಾರ ಮುಂಜಾನೆ ಕಾರಿನಲ್ಲಿ ನಾಗಮಂಗಲದಿಂದ ಯಡಿಯೂರಿಗೆ ಹೋಗುತ್ತಿದ್ದಾಗ ಬೆಳ್ಳೂರು ಕ್ರಾಸ್‌ನ ಟೋಲ್ ಬಳಿ ನಿಲ್ಲಿಸಿದ್ದ ಟ್ಯಾಂಕರ್‌ಗೆ ಡಿಕ್ಕಿ ಹೊಡೆದು ತೀವ್ರ ಗಾಯಗೊಂಡು ಆಸ್ಪತ್ರೆಗೆ ಸೇರಿಸಿದ್ದ ಬಿಂಡಿಗನವಿಲೆ ಹೋಬಳಿಯ ಹೆಚ್.ಕೋಡಹಳ್ಳಿ ಗ್ರಾಮದ ಅಶ್ವತ್ ಎಂಬ ಯುವಕ ಸಾವನ್ನಪ್ಪಿದ್ದು ಪ್ರತಾಪ್ ಮತ್ತು ಇನ್ನೊಬ್ಬರು ಗಾಯಗೊಂಡಿದ್ದಾರೆ. ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಪ್ರಕರಣ ಬೆಳ್ಳೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಮತ್ತೊಂದು ಘಟನೆಯಲ್ಲಿ ಮಂಗಳವಾರ ರಾತ್ರಿ ಸುರಿದ ಭಾರಿ ಮಳೆಯಿಂದ ಅಣೆಚೆನ್ನಾಪುರ ಕೆರೆ ಕೋಡಿ ಬಿದ್ದಿದ್ದು ಅಣೆಯ ಮೇಲೆ ನಡೆದು ಹೋಗುತ್ತಿದ್ದ ಬಿಂಡಿಗನವಿಲೆ ಹೋಬಳಿಯ ಕಂಬದಹಳ್ಳಿ ಗ್ರಾಮದ ರಾಮಚಂದ್ರ ಎಂಬ ಯುವಕ ನೀರಿನಲ್ಲಿ ಕೊಚ್ಚಿ ಹೋಗಿದ್ದು ಶವ ಇಂದು ಪತ್ತೆಯಾಗಿದೆ.ಈ ಪ್ರಕರಣ ಬಿಂಡಿಗನವಿಲೆ ಠಾಣೆಯಲ್ಲಿ ದಾಖಲಾಗಿದೆ.

ಮಹಿಳೆಯ ಸಾವು: ಕಳೆದ ಎರಡು ದಿನಗಳ ಹಿಂದೆ ಲಕ್ಷ್ಮಿ ವೆಂಕಟೇಶ್ವರ ನರ್ಸಿಂಗ್ ಹೋಂ ಬಳಿ ಡಿವೈಎಸ್‌ಪಿ ವಾಹನ ಮತ್ತು ಬೈಕ್ ನಡುವೆ ಡಿಕ್ಕಿ ಸಂಭವಿಸಿ ತೀವ್ರವಾಗಿ ಗಾಯಗೊಂಡಿದ್ದ ಮೂಡಲ ಕೊಪ್ಪಲು ಗ್ರಾಮದ ಸಾಕಮ್ಮ (68) ಸಾವನ್ನಪ್ಪಿದಾರೆ. ಪ್ರಕರಣ ಪಟ್ಟಣ ಠಾಣೆಯಲ್ಲಿ ದಾಖಲಾಗಿದೆ.

ಅ.26 ರಂದು ಕೆಲವೆಡೆ ವಿದ್ಯುತ್ ವ್ಯತ್ಯಯ

ಮಂಡ್ಯ,ಅ.23– ಹೊಸಹಳ್ಳಿ ಅರ್ಬನ್ ಫೀಡರ್ ಮತ್ತು ಎಫ್ 4 –ಹೆಬ್ಬಕವಾಡಿ ಎನ್.ಜೆ.ವೈ ಫೀಡರ್‌ಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೆಲಸ ಹಮ್ಮಿಕೊಂಡಿರುವುದರಿಂದ ಅ.26ರಂದು ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ನಗರ ಪ್ರದೇಶಗಳಾದ ಸುಭಾಷನಗರ, ಅಶೋಕ ನಗರ, ವಿದ್ಯಾನಗರ, ವಿ.ವಿ. ರೋಡ್, ಹೊಸಹಳ್ಳಿ, ವಿನಾಯಕ ಬಡಾವಣೆ, ನೂರು ಅಡಿ ರೋಡ್, ನೆಹರುನಗರ, ಹಾಲಹಳ್ಳಿ, ಹೌಸಿಂಗ್ ಬೋರ್ಡ್ 1 ಹಾಗೂ 2ನೇ ಹಂತ, ದ್ವಾರಕನಗರ, ಗಾಂಧಿನಗರ, ಎನ್ ಜಿ ಲೆಔಟ್, ಶ್ರೀ ರಾಮನಗರ, ಕಾವೇರಿ ನಗರ 1 & 2 ನೇ ಹಂತ, ಚಂದ್ರ ದರ್ಶನ, ಚಾಮುಂಡೇಶ್ವರಿ ನಗರ, ಅನ್ನಪೂರ್ಣೇಶ್ವರಿ ನಗರ ಎರಡನೇ ಹಂತ, ಶಂಕರ ನಗರ, ಕ್ಯಾತುಂಗೆರೆ ಬಡಾವಣೆ, ಶಂಕರಪ್ಪ ಬಡಾವಣೆ, ಮಿಮ್ಸ್ ಆಸ್ಪತ್ರೆ ಹಾಗೂ ಗ್ರಾಮಾಂತರ ಪ್ರದೇಶಗಳಾದ ಕಾರಸವಾಡಿ, ಮಂಗಲ, ಹನಿಯಂಬಾಡಿ, ಚೀರನಹಳ್ಳಿ, ಹೆಬ್ಬಕವಾಡಿ, ಕೊತ್ತತ್ತಿ, ಮೊತ್ತಹಳ್ಳಿ, ಬೇವಿನಹಳ್ಳಿ, ಹುಲ್ಲುಕೆರೆ, ಎ.ಹುಲಿಕೆರೆ, ಬಿ.ಹುಲಿಕೆರೆ, ಮತ್ತು ಐಪಿ ಮಾರ್ಗಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಿರವಾದ ಮನಸ್ಸಿನಿಂದ ಯುವ ಜನತೆಯ ಸಾಮಾಜಿಕ ಬೆಳವಣಿಗೆ ಸಾಧ್ಯ

ಮಂಡ್ಯ: ಜಿಲ್ಲೆಯ ಯುವಜನತೆ ಸ್ಥಿರವಾದ ಮನಸ್ಸು ಹಾಗೂ ಆಸಕ್ತಿಯಿಂದ ಎಲ್ಲಾ ಕ್ಷೇತ್ರದಲ್ಲಿಯೂ ಪರಿಣಿತಿ ಪಡೆದುಕೊಂಡು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಳ್ಳುವಂತೆ ಸಾಧನೆ ಮಾಡುವ ಮೂಲಕ ಸಾಮಾಜಿಕ ಬೆಳವಣಿಗೆಗೆ ಅಡಿಪಾಯ ಹಾಕಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಮಂಡ್ಯ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ ಹಾಗೂ ಎನ್‌ಎಸ್‌ಎಸ್ ಘಟಕ, ಮಂಡ್ಯ ವಿಶ್ವ ವಿದ್ಯಾಲಯ, ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ) ಇವರ ಸಹಯೋಗದಲ್ಲಿ ಜಿಲ್ಲಾ ಮಟ್ಟದ ಯುವಜನೋತ್ಸವ 2024–25ರ ಕಾರ್ಯಕ್ರಮವನ್ನು ಉದ್ಘಾಟಿಸಿ, ಸ್ವಾಮಿ ವಿವೇಕಾನಂದ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಅವರು, ಸ್ವಾಮಿ ವಿವೇಕಾನಂದರವರು ನಮ್ಮ ರಾಷ್ಟ್ರದ ನಿಜವಾದ ಸತ್ವವನ್ನು ಜಗತ್ತಿಗೆ ಸಾರಿ ಭಾರತೀಯ ಸಂಸ್ಕೃತಿಯ ಹೆಗ್ಗುರುತನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಎತ್ತಿಹಿಡಿದ ಮಹಾನ್ ಚೇತನ. ಅವರ ಧ್ಯೇಯ, ಗುರಿ, ಉದ್ದೇಶಗಳನ್ನು ಅನುಸರಿಸಬೇಕು ಎಂದರು.

ಮಂಡ್ಯ ಜಿಲ್ಲೆಯ ಯುವಜನರು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವಿಕೆಯೂ ಕಡಿಮೆಯಾಗುತ್ತಿದೆ. ಸಮಾಜದಲ್ಲಿ ಅಭಿವೃದ್ಧಿ ಕೆಲಸ ಮಾಡಲು ನಿರಾಸಕ್ತಿ ಇರುವುದು ಕಂಡುಬಂದಿದೆ. ಈ ಬಗ್ಗೆ ನನಗೆ ವಿಷಾದವಿದೆ. ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನ ನೀಡಿ ಜಿಲ್ಲೆಗೆ ಕೀರ್ತಿ ತಂದ ಸಾಕಷ್ಟು ಯುವಜನರಿದ್ದು, ಅವರನ್ನು ಆದರ್ಶವಾಗಿ ಇಟ್ಟುಕೊಳ್ಳಬೇಕು. ಜೊತೆಗೆ ಯುವ ಜನರು ಶ್ರಮದಾನ ಚಟುವಟಿಕೆ, ಸಾಂಸ್ಕೃತಿಕ ಚಟುವಟಿಕೆ, ಚಿಂತನ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ಹಾಗೂ ಸಮಾಜವನ್ನು ಕಟ್ಟುವಲ್ಲಿ ಮುಂದಾಗಬೇಕು ಎಂದು ಹೇಳಿದರು.

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ ಮಾತನಾಡಿದರು. ಕಾರ್ಯಕ್ರಮದಲ್ಲಿ ಎಎಸ್ಪಿ ಸಿ.ಈ.ತಿಮ್ಮಯ್ಯ, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಓಂಪ್ರಕಾಶ್, ರವಿಚಂದ್ರ್, ಡಾ.ಶಿವರಾಜು, ಡಾ.ಲೋಕೇಶ್ ಸೇರಿದಂತೆ ಇನ್ನಿತರಿದ್ದರು.



ಯುವಜನೋತ್ಸವ ಉದ್ಘಾಟಿಸುತ್ತಿರುವ ಎಡಿಸಿ ಡಾ.ಹೆಚ್.ಎಲ್.ನಾಗರಾಜು.

ಉಚಿತ ಹೃದಯ, ಕ್ಯಾನ್ಸರ್ ತಪಾಸಣಾ ಶಿಬಿರ



ಪಾಂಡವಪುರ,ಅ.23–ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಆರೋಗ್ಯ ಇಲಾಖೆ, ವೋಲ್ವೋ ಕಂಪನಿ, ನಾರಾಯಣ ಹೃದಯಾಲಯ (ಬೆಂಗಳೂರು) ಸಹಯೋಗದಲ್ಲಿ ಉಚಿತ ಹೃದಯ ಹಾಗೂ ಕ್ಯಾನ್ಸರ್ ತಪಾಸಣೆ ಶಿಬಿರ ನಡೆಯಿತು.

ಬೆಳಿಗ್ಗೆ ಆರಂಭಗೊಂಡ ಆರೋಗ್ಯ ತಪಾಸಣೆ ಶಿಬಿರವು ಸಂಜೆಯವರೆಗೂ ನಡೆಯಿತು. ಸಂಚಾರಿ ಸಮುದಾಯ ಆರೋಗ್ಯ ಕೇಂದ್ರದ ವಾಹನದಲ್ಲಿ ಹೃದಯಕ್ಕೆ ಸಂಬಂಧಿಸಿದ ಎಕೋ, ಇಸಿಜಿ, ಕ್ಯಾನ್ಸ್‌ಗೆ ಸಂಬಂಧಿಸಿದಂತೆ ಬ್ರಸ್ಟ್ ಕ್ಯಾನ್ಸರ್, ರಕ್ತ ಪರೀಕ್ಷೆಯನ್ನು ನಡೆಸಲಾಯಿತು. 100ಕ್ಕೂ ಅಧಿಕ ಮಂದಿ ಹೃದಯಕ್ಕೆ ಸಂಬಂಧಿಸಿದಂತೆ ಚಿಕಿತ್ಸೆ ನಡೆಸಲಾಯಿತು.

ಶಿಬಿರಕ್ಕೆ ತಾಲೂಕು ಆರೋಗ್ಯಾಧಿಕಾರಿ ಡಾ.ಸಿ.ಎ.ಅರವಿಂದ್ ಮಾತನಾಡಿ, ನಡೆಯುತ್ತಿರುವ ಉಚಿತವಾಗಿ ಆರೋಗ್ಯ ತಪಾಸಣೆ ಶಿಬಿರವು ಸಾರ್ವಜನಿಕರಿಗೆ ಬಹಳಷ್ಟು ಉಪಯುಕ್ತವಾಗಿದೆ. ಹೃದಯಕ್ಕೆ ಸಂಬಂಧಿಸಿದಂತೆ ಎಕೋ, ಇಸಿಜಿ ತಪಾಸಣೆ ಹಾಗೂ ಕ್ಯಾನ್ಸರ್ ಸಂಬಂಧಿಸಿಂತೆ ತಪಾಸಣೆಗಳನ್ನು ಮಾಡಿಸಿಕೊಂಡು ಸಾರ್ವಜನಿಕರು ಶಿಬಿರದ ಉಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಶಿಬಿರದ ವ್ಯವಸ್ಥಾಪಕ ಜಿ.ಎಂ.ದೇವರಾಜನಾಯಕ ಮಾತನಾಡಿ ಶಿಬಿರಕ್ಕೆ ತಗಲುವ ವೆಚ್ಚವನ್ನು ವೋಲ್ವೋ ಹಾಗೂ ನಾರಾಯಣ ಹೃದಯಾಲ ಆಸ್ಪತ್ರೆಯ ಭರಿಸುತ್ತಿದೆ. ರಕ್ತ ಪರೀಕ್ಷೆ ನಡೆಸಿ ನಂತರ ನಾರಾಯಣ ಆಸ್ಪತ್ರೆಯಿಂದ ರಿಪೋರ್ಟ್ ನೀಡಲಾಗುವುದು. ಹೆಚ್ಚಿನ ಸಂಖ್ಯೆಗೆ ಹೋಗುವಂತಹ ಎಲ್ಲಾ ಆಸ್ಪತ್ರೆಗಳಲ್ಲೂ ಇಲ್ಲಿನ ವರದಿ ಮಾನ್ಯತೆ ನೀಡಲಿದೆ ಎಂದರು.

ಸಂದರ್ಭದಲ್ಲಿ ವೋಲ್ವೋ ಕಂಪನಿಯ ರಘು, ಆರೋಗ್ಯ ಶಿಕ್ಷಣಾಧಿಕಾರಿ ಪುಟ್ಟಸ್ವಾಮಿ, ಆಶಾಕಾರ್ಯಕರ್ತೆ ಸಂಘದ ಜಿಲ್ಲಾಧ್ಯಕ್ಷೆ ಎಂ.ಬಿ.ಪುಷ್ಪಾವತಿ ಸೇರಿದಂತೆ ಹಲವರು ಭಾಗವಹಿಸಿದ್ದರು.

ಒಂದನೇ ಪುಟದಿಂದ

350 ಕೋಟಿ ಎಲ್ಲಿಂದ ಬಂತು!

ಸಿದ್ದರಾಮಯ್ಯ ಸೇರಿದಂತೆ ಜೊತೆಗಿರುವವರೆಲ್ಲಾ ಮೋಸಗಾರರು, ಫ್ರಾಡ್‌ಗಳ ಸಂತೆಯಾಗಿದೆ. ಇಷ್ಟೆಲ್ಲ ಹುಳುಕು ಇದ್ದರೂ ನಾನು ಸತ್ಯವಂತ ಎಂದೇಳಿಕೊಳ್ಳುತ್ತಾರೆ. ಮೈಸೂರಿನ ವರುಣ ಕ್ಷೇತ್ರದಲ್ಲಿ ನಿನ್ನೆ ಹೆಸರಿಗಷ್ಟೆ ಸರ್ಕಾರದ ಸಮಾರಂಭ. ಆದರೆ ತಾನು ಸತ್ಯವಂತ ಎಂದೇಳಿಕೊಳ್ಳಲು ಆಯೋಜಿಸಿದ್ದ ಸ್ಪಷ್ಟೀಕರಣ ಕಾರ್ಯಕ್ರಮವಾಗಿತ್ತು. ಸಿದ್ದರಾಮಯ್ಯ ಏನೇ ಸ್ಪಷ್ಟೀಕರಣ ನೀಡಿದರೂ ರಾಜ್ಯದ ಜನರು ಇವರ ಮಾತು ನಂಬುವುದಿಲ್ಲ ಎಂದು ಅಭಿಪ್ರಾಯಪಟ್ಟರು. ಸಿದ್ದರಾಮಯ್ಯ ನಾನು ಬೆಳ್ಳಗಿದ್ದೇನೆ ಎಂಬ ಭ್ರಮೆಯಲ್ಲಿದ್ದಾರೆ. ಆದರೆ ಅವರಿಗೆ ಅಂಟಿರುವ ಕಪ್ಪು ಬಣ್ಣದ ಭ್ರಷ್ಟತೆಯನ್ನು ತೊಳೆದುಕೊಳ್ಳಲು ಎಂದಿಗೂ ಸಾಧ್ಯವಿಲ್ಲ ಎಂದು ಹೇಳಿದರು.

ಮೈಸೂರು ಪೇಟ ಗೌರವ ಹಾಳು: ವಾಲ್ಮೀಕಿ ನಿಗಮದ ಹಣ ಲೂಟಿ ಮಾಡಿ ಜೈಲಿಗೆ ಹೋಗಿ ಬಂದ ನಾಗೇಂದ್ರನಿಗೆ ಸಿದ್ದರಾಮಯ್ಯ ಮೈಸೂರು ಪೇಟ ತೊಡಿಸಿ ಸನ್ಮಾನ ಮಾಡಿದ್ದಾರೆ. ಈ ಮೂಲಕ ಮೈಸೂರು ಪೇಟದ ಗೌರವ ಕಳೆದಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದು, ವೃದ್ಧಾಪ್ಯ ವೇತನ ನೀಡಲು ಕೂಡ ಸರ್ಕಾರದ ಖಜಾನೆಯಲ್ಲಿ ಹಣವಿಲ್ಲ. ಆದರೂ ಗ್ಯಾರಂಟಿ ಹೆಸರಿನಲ್ಲಿ ಮರುಳು ಮಾಡಿ ಪ್ರಚಾರ ಪಡೆಯುತ್ತಿದ್ದಾರೆ ಎಂದು ವಿಶ್ವನಾಥ್ ವಾಗ್ದಾಳಿ ನಡೆಸಿದರು.

ಇಂದಿನಿಂದ ಹಾಸನಾಂಬೆಯ ದರ್ಶನ

ಕಾರ್ಯಗಳು ಆರಂಭವಾಗುವ ಕಾರಣ ಸಾರ್ವಜನಿಕ ದರ್ಶನಕ್ಕೆ ಅವಕಾಶ ಇರುವುದಿಲ್ಲ. ನ.3 ರಂದು ಮಧ್ಯಾಹ್ನ 12 ಗಂಟೆಗೆ ಮುಚ್ಚಲಾಗುವ ಬಾಗಿಲು ಮತ್ತೆ ತೆರೆಯುವುದು ಮುಂದಿನ ವರ್ಷವೇ.

ಜಗಮಗಿಸುತ್ತಿದೆ ಹಾಸನ: ಹಾಸನಾಂಬ ದರ್ಶನೋತ್ಸವದ ಪ್ರಯುಕ್ತ ದೇವಸ್ಥಾನ ಆವರಣ ಸೇರಿದಂತೆ ನಗರದ ಪ್ರಮುಖ ರಸ್ತೆಗಳು, ವೃತ್ತಗಳು, ಸರ್ಕಾರಿ ಕಚೇರಿಗಳನ್ನು ವರ್ಣರಂಜಿತ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದ್ದು, ಇಡೀ ನಗರವೇ ಜಗಮಗಿಸುತ್ತಿದೆ. ಇದಕ್ಕಾಗಿ ಮೈಸೂರು ದಸರಾ ಮಹೋತ್ಸವದಲ್ಲಿ ಕೆಲಸ ಮಾಡಿದ ತಂತ್ರಜ್ಞರ ಸಹಕಾರ ಪಡೆಯಲಾಗಿದೆ. ಈ ಸುಂದರ ದೃಶ್ಯಗಳನ್ನು ಸಾರ್ವಜನಿಕರು ಕಣ್ತುಂಬಿಕೊಳ್ಳಲು ಅನುವಾಗುವಂತೆ ಡಬಲ್ ಡಕ್ಕರ್ ಬಸ್‌ಗಳನ್ನು ತರಿಸಲಾಗುತ್ತಿದೆ.

ದೇವಸ್ಥಾನ ಆವರಣದಲ್ಲಿ ಬೃಹತ್ ಸ್ವಾಗತ ಕಮಾನುಗಳನ್ನು ಅಳವಡಿಸಿದ್ದು, ಲಾಲ್‌ಬಾಗ್ ಮಾದರಿಯಲ್ಲಿ ಹೂವಿನ ಅಲಂಕಾರ ಮಾಡಲಾಗಿದೆ. 2 ದಿನಗಳಿಗೊಮ್ಮೆ ಹೂವಿನ ಅಲಂಕಾರದ ಮಾದರಿಯನ್ನು ಬದಲಿಸಬೇಕು ಎಂದು ಈಗಾಗಲೇ ಸೂಚಿಸಲಾಗಿದೆ. ಇಸ್ಕಾನ್ ದೇವಸ್ಥಾನದ ಪಾಕ ಪ್ರವೀಣರು ಸಿದ್ಧಪಡಿಸಿರುವ ಲಡ್ಡು ಪ್ರಸಾದ ವಿತರಣೆಗೆ 24 ಕೌಂಟರ್ ಹಾಗೂ ದೊನ್ನೆ ಪ್ರಸಾದ ವಿತರಣೆಗೆ 2 ಕೌಂಟರ್‌ಗಳನ್ನು ತೆರೆಯಲಾಗಿದೆ.

ದೊನ್ನೆ ಪ್ರಸಾದ ಮತ್ತು ಲಾಡು ಪ್ರಸಾದ ವಿತರಣೆಗೆ ಈ ಬಾರಿ ಸುರಕ್ಷತಾ ಸ್ಥಳದಲ್ಲಿ ಪ್ರತ್ಯೇಕ ಸ್ಥಳಾವಕಾಶ ಕಲ್ಪಿಸಲಾಗಿದೆ. 60 ರೂಪಾಯಿಗೆ 2 ಲಡ್ಡುಗಳಿರುವ ಒಂದು ಪೊಟ್ಟಣ ಸಿಗಲಿದೆ. ಸಾವಿರ ರೂಪಾಯಿಯ ನೇರ ದರ್ಶನ ಟಿಕೆಟ್ ಪಡೆದವರಿಗೆ 2 ಹಾಗೂ 300 ರೂಪಾಯಿಯ ಟಿಕೆಟ್ ಪಡೆದವರಿಗೆ ಒಂದು ಲಾಡು ಉಚಿತವಾಗಿ ನೀಡಲಾಗುವುದು. ಕುಡಿಯುವ ನೀರು ಮತ್ತು ಮಜ್ಜಿಗೆಯ ಉಚಿತ ವಿತರಣೆ, 80 ಸುಲಭ ಶೌಚಾಲಯ, ಮ್ಯಾನೇಜ್ಮೆಂಟ್ ಕೌಂಟರ್‌ಗಳು, ವಾರ್ ರೂಂ, ಸೆಲ್ಫಿ ಸ್ಪಾಟ್‌ಗಳ ಅಳವಡಿಕೆ, ಪ್ಯಾರಮೋಟರಿಂಗ್, ರಾಜ್ಯ ಮಟ್ಟದ ನೃತ್ಯ ಸ್ಪರ್ಧೆ, ಫಲ–ಪುಷ್ಪ ಪ್ರದರ್ಶನ ಮೊದಲಾದ ವಿಶೇಷತೆಗಳನ್ನು ಈ ಬಾರಿಯ ಜಾತ್ರಾ ಮಹೋತ್ಸವದಲ್ಲಿ ಕಾಣಬಹುದಾಗಿದೆ.

ಪ್ರಿಯಾಂಕಾ ಗಾಂಧಿ ನಾಮಪತ್ರ ಸಲ್ಲಿಕೆ

ಅವರೊಂದಿಗೆ ಪ್ರಿಯಾಂಕಾ ಗಾಂಧಿ ಬೃಹತ್ ರೋಡ್ ಶೋ ನಡೆಸಿದರು.

ವಯನಾಡ್ ಲೋಕಸಭಾ ಉಪ ಚುನಾವಣೆಗೆ ಕಾಂಗ್ರೆಸ್ ಪ್ರಿಯಾಂಕಾ ಗಾಂಧಿ ಅವರನ್ನು ಕಣಕ್ಕಿಳಿಸಿದರೆ, ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ನವ್ಯಾ ಹರಿದಾಸ್ ಅವರನ್ನು ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದೆ. ಸಿಪಿಐನಿಂದ ಸತ್ಯೇನ್ ಮೊಕೇರಿ ಅಖಾಡದಲ್ಲಿದ್ದು, ತ್ರಿಕೋನ ಸ್ಪರ್ಧೆ ಏರ್ಪಡಲಿದೆ.

ಪ್ರಿಯಾಂಕಾ ಗಾಂಧಿ ಉಮೇದುವಾರಿಕೆ ಕುರಿತು ಮಾತನಾಡಿದ ರಾಹುಲ್ ಗಾಂಧಿ, ವಯನಾಡಿನ ಜನರು ನನ್ನ ಹೃದಯದಲ್ಲಿ ವಿಶೇಷ ಸ್ಥಾನವನ್ನು ಹೊಂದಿದ್ದಾರೆ. ನನ್ನ ಸಹೋದರಿ ಪ್ರಿಯಾಂಕಾ ಗಾಂಧಿಗಿಂತ ಉತ್ತಮ ಪ್ರತಿನಿಧಿಯನ್ನು ನಾನು ಊಹಿಸಲು ಸಾಧ್ಯವಿಲ್ಲ. ವಯನಾಡಿನ ಅಗತ್ಯತೆಗಳು ಮತ್ತು ಸಂಸತ್ತಿನಲ್ಲಿ ಪ್ರಬಲ ಧ್ವನಿಯಾಗಲಿದ್ದು, ಚಾಂಪಿಯನ್ ಆಗುತ್ತಾರೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

ಪ್ರಿಯಾಂಕಾ ಗಾಂಧಿ ಅವರು ಅತ್ಯಂತ ಬಹುಮತದಿಂದ ಈ ಕ್ಷೇತ್ರದಲ್ಲಿ ಜಯಗಳಿಸುವುದು ಶತಸಿದ್ಧ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಬಿಜೆಪಿ ನಮ್ಮ ವಿರೋಧಿ. ಬಿಜೆಪಿ ಸೋಲಿಸಲು ಎಲ್ಲಾ ಜಾತ್ಯತೀತ ಶಕ್ತಿ ಮತ್ತು ಮೌಲ್ಯಗಳೊಂದಿಗೆ ನಾವು ಜೊತೆ ಸೇರುತ್ತೇವೆ. ಬಿಜೆಪಿ ಸೋಲಿಸಿ ದೇಶ ಉಳಿಸುವುದು ನಮ್ಮ ಮೊದಲ ಗುರಿ ಎಂದರು.

ಇಂದು ನಾಮಪತ್ರ ಸಲ್ಲಿಕೆ

ಪ್ರಿಯಾಂಕಾ ಗಾಂಧಿ ನಾಮಪತ್ರ ಸಲ್ಲಿಕೆ ವೇಳೆ ವಯನಾಡ್‌ನಲ್ಲಿ ಹಾಜರಿರಲು ಮೈಸೂರಿನಿಂದ ಅಲ್ಲಿಗೆ ತೆರಳಬೇಕಿದ್ದ ಸಿದ್ದರಾಮಯ್ಯ, ಯೋಗೇಶ್ವರ್‌ಗಾಗಿಯೇ ಬೆಂಗಳೂರಿಗೆ ಆಗಮಿಸಿ, ಯೋಗೇಶ್ವರ್ ಭೇಟಿ ನಂತರ ವಯನಾಡ್‌ಗೆ ತೆರಳಿದರು. ಪಕ್ಷದ ವರಿಷ್ಠರು ಹಾಗೂ ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಡಿ.ಕೆ.ಶಿವಕುಮಾರ್ ವಯನಾಡು ಕಾರ್ಯಕ್ರಮ ರದ್ದುಪಡಿಸಿ, ಕೆಪಿಸಿಸಿ ಕಚೇರಿಗೆ ತೆರಳಿ ಯೋಗೇಶ್ವರ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು. ನಾಳೆ (ಅ. 24) ಯೋಗೇಶ್ವರ್ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಲಿದ್ದಾರೆ.

ಯೋಗೇಶ್ವರ್ ಬಿಜೆಪಿ ತೊರೆದದ್ದೇಕೆ?: ಯೋಗೇಶ್ವರ್ ಅವರು ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರವನ್ನು ಉರುಳಿಸಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬರಲು ಕಾರಣರಾದವರಲ್ಲಿ ಪ್ರಮುಖರು. ಇದೇ ಕಾರಣಕ್ಕಾಗಿ ಅವರು 2023ರ ವಿಧಾನಸಭಾ ಚುನಾವಣೆಯಲ್ಲಿ ಸೋತರೂ ಕೂಡ ಅವರನ್ನು ಬಿಜೆಪಿ ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿತ್ತು. ಕಳೆದ ಲೋಕಸಭಾ ಚುನಾವಣೆಯಲ್ಲಿ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್. ಮಂಜುನಾಥ್ ಅವರಿಗೆ 25 ಸಾವಿರಕ್ಕೂ ಹೆಚ್ಚು ಮತ ಲೀಡ್ ತಂದು ಕೊಟ್ಟು, ಡಿ.ಕೆ. ಸುರೇಶ್ ಸೋಲಿಗೂ ಕಾರಣಕರ್ತರಾಗಿದ್ದರು. ಡಿ.ಕೆ. ಶಿವಕುಮಾರ್ ಮತ್ತು ಯೋಗೇಶ್ವರ್ ರಾಜಕಾರಣದಲ್ಲಿ ಹಾವು–ಮುಂಗೂಸಿಯಂತಿದ್ದರು. ಹೀಗಿದ್ದರೂ, ಯೋಗೇಶ್ವರ್ ಬಿಜೆಪಿ ತೊರೆದು ಡಿ.ಕೆ. ಶಿವಕುಮಾರ್ ನೇತೃತ್ವದಲ್ಲೇ ಕಾಂಗ್ರೆಸ್ ಸೇರ್ಪಡೆಗೊಳ್ಳಲು ಬಲವಾದ ರಾಜಕೀಯ ಕಾರಣವಿದೆ ಎಂದು ಹೇಳಲಾಗಿದೆ.

ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರ ಪತನವಾಗಿ ಯಡಿಯೂರಪ್ಪ ಸಿಎಂ ಆಗಲು ಯೋಗೇಶ್ವರ್ ಕೂಡ ಕಾರಣರಾಗಿದ್ದರೂ ಸಹ ವಿಜಯೇಂದ್ರ ಪಕ್ಷದ ರಾಜ್ಯಾಧ್ಯಕ್ಷರಾದ ನಂತರ ಯಡಿಯೂರಪ್ಪ ಹಾಗೂ ಬೆಂಬಲಿಗರು ಯೋಗೇಶ್ವರ್ ವಿರುದ್ಧ ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ. ಇದೇ ಕಾರಣಕ್ಕೋ ಏನೋ ಬಿಜೆಪಿಯ ಒಂದು ಬಣ ಯೋಗೇಶ್ವರ್‌ಗೆ ಬೆಂಬಲ ವ್ಯಕ್ತಪಡಿಸಿತ್ತು. ಯೋಗೇಶ್ವರ್ ಒಮ್ಮೆ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಅನಿತಾ ಕುಮಾರಸ್ವಾಮಿಯವರನ್ನು ಸೋಲಿಸಿದ್ದರೆ, ನಂತರದ ಎರಡು ಚುನಾವಣೆಗಳಲ್ಲಿ ಕುಮಾರಸ್ವಾಮಿ ವಿರುದ್ಧ ಸೋತಿದ್ದರು. ಅಲ್ಲದೇ, ಒಮ್ಮೆ ಲೋಕಸಭಾ ಚುನಾವಣೆಯಲ್ಲೂ ಕುಮಾರಸ್ವಾಮಿ ವಿರುದ್ಧ ಸೋಲನನುಭವಿಸಿದ್ದರು. ಚನ್ನಪಟ್ಟಣ ಕ್ಷೇತ್ರದಲ್ಲಿ ಕಳೆದ 13 ವರ್ಷದಿಂದಲೂ ಕಾಂಗ್ರೆಸ್ ಬಲ ಕಳೆದುಕೊಂಡಿದ್ದು, ಯೋಗೇಶ್ವರ್ ಮತ್ತು ಜೆಡಿಎಸ್ ನಡುವೆಯೇ ಜಿದ್ದಾಜಿದ್ದಿ ನಡೆಯುತ್ತಿತ್ತು. ಕ್ಷೇತ್ರವನ್ನು ಜೆಡಿಎಸ್‌ಗೆ ಬಿಜೆಪಿ ಬಿಟ್ಟುಕೊಟ್ಟಾಗ ಯೋಗೇಶ್ವರ್ ಅವರಿಗೆ ರಾಜಕೀಯ ಅಸ್ತಿತ್ವದ ಪ್ರಶ್ನೆ ಉದ್ಭವಿಸಿತು ಎಂದು ಹೇಳಲಾಗಿದೆ. ಅದೇ ರೀತಿ ಈ ಕ್ಷೇತ್ರ ಕುಮಾರಸ್ವಾಮಿಯವರಿಗೂ ಪ್ರತಿಷ್ಠೆ ಆಗಿತ್ತು. ಈ ಕಾರಣದಿಂದಲೇ ಬಿಜೆಪಿ ಅಭ್ಯರ್ಥಿಯಾಗಿ ತಾನು ಸ್ಪರ್ಧಿಸಬೇಕೆಂದು ಯೋಗೇಶ್ವರ್ ಹಠ ಹಿಡಿದಿದ್ದರು. ಆದರೆ, ಏಕಾಏಕಿ ಬಿಜೆಪಿ ವರಿಷ್ಠರು ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿದ್ದು. ಕುಮಾರಸ್ವಾಮಿ ಅಭ್ಯರ್ಥಿ ಘೋಷಣೆ ಮಾಡುತ್ತಾರೆ ಎಂದು ಯಡಿಯೂರಪ್ಪನವರು ನೀಡಿದ ಹೇಳಿಕೆ ನೀಡಿದ್ದರು. ಹಾಗಾಗಿ ಯೋಗೇಶ್ವರ್ ಕಾಂಗ್ರೆಸ್ ಜೊತೆ ಸಂಪರ್ಕ ಸಾಧಿಸಿದ್ದರು. ಈ ಮಧ್ಯೆ ರಹಸ್ಯವಾಗಿ ಡಿ.ಕೆ.ಶಿವಕುಮಾರ್ ಭೇಟಿಯಾಗಿದ್ದಾರೆ ಎಂದು ಕುಮಾರಸ್ವಾಮಿ ಹೇಳಿಕೆ ನೀಡಿದ್ದು, ಯೋಗೇಶ್ವರ್ ಅವರನ್ನು ಕೆರಳಿಸಿತ್ತು. ಅದೇ ವೇಳೆ ಕಾಂಗ್ರೆಸ್‌ನ ಮಾಗಡಿ ಶಾಸಕ ಬಾಲಕೃಷ್ಣ ಮತ್ತು ಮದ್ದೂರು ಶಾಸಕ ಉದಯ್ ಅವರುಗಳು ಯೋಗೇಶ್ವರ್ ಸಂಪರ್ಕಕ್ಕೆ ಬಂದಿದ್ದರು.

ಅಂತಿಮವಾಗಿ ಕಾಂಗ್ರೆಸ್ ಸೇರ್ಪಡೆ ನಿರ್ಧಾರ ಕೈಗೊಂಡ ಯೋಗೇಶ್ವರ್, ನಿನ್ನೆ ಕಾರ್ಯಕರ್ತರ ಸಭೆ ನಡೆಸಿ, ಚನ್ನಪಟ್ಟಣ ಕ್ಷೇತ್ರದಲ್ಲಿ ತನ್ನ ಹಿಡಿತದ ಬಗ್ಗೆ ವಿವರಿಸಿದರು. ಪಕ್ಷೇತರ ಹಾಗೂ ಸಮಾಜವಾದಿ ಪಕ್ಷದಿಂದಲೂ ಗೆದ್ದಿದ್ದ ತಾವು ಬಿಜೆಪಿಯಿಂದ ಐದು ಬಾರಿ ಸ್ಪರ್ಧಿಸಿದ್ದರೂ ಗೆದ್ದದ್ದು ಮಾತ್ರ ಒಂದು ಬಾರಿ. ತಮಗೆ ವಿರುದ್ಧವಾಗಿ ನಿಂತದ್ದು ದೇವೇಗೌಡರ ಕುಟುಂಬ ಎಂದು ಹೇಳುವ ಮೂಲಕ ಕಾಂಗ್ರೆಸ್ ಸೇರ್ಪಡೆ ಬಗ್ಗೆ ಪರೋಕ್ಷವಾಗಿ ಸಂದೇಶ ರವಾನಿಸಿ ಇಂದು ಕಾಂಗ್ರೆಸ್ ಸೇರಿ, ನಾಳೆ ಆ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತಿದ್ದಾರೆ.

ವಿಶೇಷ ಸಾಫ್ಟ್‌ವೇರ್ ಬಳಕೆ

ಶೇ. 50:50ರ ಅನುಪಾತದಲ್ಲಿ ಮುಡಾ ನಿವೇಶನ ಪಡೆದಿರುವ ಫಲಾನುಭವಿಗಳ ಮಾಹಿತಿಯನ್ನು ಸಾಫ್ಟ್‌ವೇರ್ ಮೂಲಕ ಸೆಟಲೈಟ್ ಇಮೇಜ್‌ನಲ್ಲಿ ಸುಲಭವಾಗಿ ಪತ್ತೆ ಮಾಡುವ ಕಾರ್ಯಕ್ಕೆ ಕೈ ಹಾಕಿದೆ.

ಮುಡಾದ ಬಹುತೇಕ ಆಸ್ತಿಗಳು ಡಿಜಿಟಲೈಸ್ ಆಗಿರುವುದರಿಂದ ಅನಧಿಕೃತವಾಗಿ ಪರಭಾರೆಯಾಗಿರುವ ನಿವೇಶನಗಳನ್ನೂ ಸಹ ಸುಲಭವಾಗಿ ಗುರುತಿಸಬಹುದಾಗಿದೆ. ಆಸ್ತಿಗಳ ಖಾತಾ, ಹೆಸರು, ಫೋನ್ ನಂಬರ್, ಅಧಿಕಾರಿಗಳ ಪದನಾಮ, ಖಾಸಗಿ ಮಾಹಿತಿಗಳೂ ಹೊಸ ಸಾಫ್ಟ್‌ವೇರ್‌ನಲ್ಲಿ ಪತ್ತೆಯಾಗಲಿವೆ ಎಂಬ ಮಾಹಿತಿ ಮುಡಾ ಕಚೇರಿ ವಲಯದಲ್ಲಿ ಹರಿದಾಡುತ್ತಿದೆ.

ಯಾವ ಜನಪ್ರತಿನಿಧಿ, ಅಧಿಕಾರಿಗೆ ನಿವೇಶನ ಕೊಡಿಸಲು ಶಿಫಾರಸು ಮಾಡಿದ್ದಾರೆ, ಸಂಬಂಧಿಕರು, ಆಪ್ತರುಗಳ ಬೇನಾಮಿ ಹೆಸರಲ್ಲಿ ಮುಡಾ ನಿವೇಶನ ನೋಂದಣಿ ಮಾಡಿಸಿದ್ದಾರೆ, ಯಾವ ದಿನ ಯಾವ ಉಪನೋಂದಣಾಧಿಕಾರಿ ಕಚೇರಿಯಲ್ಲಿ ದಸ್ತಾವೇಜುಗಳು ನೋಂದಣಿಯಾಗಿವೆ ಎಂದು ಈ ಸಾಫ್ಟ್‌ವೇರ್‌ನಲ್ಲಿ ಪತ್ತೆಯಾಗಲಿದೆ ಎಂದು ಹೇಳಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯರ ಪತ್ನಿ ಪಾರ್ವತಿ ಹೆಸರಿಗೆ 14 ನಿವೇಶನ ಸೇರಿದಂತೆ ಮುಡಾದಿಂದ ಶೇ. 50:50ರಡಿ, ಪ್ರೋತ್ಸಾಹದಾಯಕ ಯೋಜನೆ ಹಾಗೂ ಬದಲಿಯಾಗಿ ಮಂಜೂರಾಗಿರುವ ಎಲ್ಲಾ ನಿವೇಶನಗಳ ಪರಭಾರೆ ಮಾಹಿತಿಗಳು ಬೆರಳ ತುದಿಯಲ್ಲಿ ಕಂಡುಹಿಡಿಯಬಹುದಾದ ಸೌಲಭ್ಯ ಇಡಿಯಲ್ಲಿ ರುವ ತಂತ್ರಾಂಶದಲ್ಲಿದೆ ಎಂದು ಮೂಲಗಳು ತಿಳಿಸಿವೆ.

ಆನ್‌ಲೈನ್ ಟ್ರ್ಯಾಕಿಂಗ್: ಈ ಸಾಫ್ಟ್‌ವೇರ್‌ನಿಂದ ಇಡಿ ಅಧಿಕಾರಿಗಳು ಆನ್‌ಲೈನ್ ಶೋಧ ಮಾಡುತ್ತಿದ್ದು, ಪ್ರತಿಯೊಬ್ಬರ ವಹಿವಾಟು, ಪ್ರಕರಣಗಳು, ಪೂರಕ ದಾಖಲೆಗಳು, ಡೇಟಾಬೇಸ್ ಮಾಹಿತಿ ಕಲೆ ಹಾಕುತ್ತಿದ್ದು, ಬ್ಯಾಂಕ್ ಖಾತೆ, ಪಾನ್, ಆಧಾರ್ ಸಂಖ್ಯೆಗಳ ಲಿಂಕಿಂಗ್ ಮೂಲಕ ಆಸ್ತಿಗಳನ್ನು ಪತ್ತೆ ಮಾಡುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮುಡಾದಿಂದ ಹಂಚಿಕೆಯಾದ ನಿವೇಶನಗಳನ್ನು ಜಿಪಿಎ ಆಧಾರ ದಲ್ಲಿ ಕ್ರಯ ನೋಂದಣಿ, ನಂತರ ಬೇರೆಯವರಿಗೆ ಮಾರಾಟ, ಮುಂದೆ ಎಷ್ಟು ಮಂದಿಗೆ ಆಸ್ತಿ ನೋಂದಣಿಯಾಗಿದ್ದರೂ ಅದರ ಪೂರ್ಣ ಹಾಗೂ ನಿಖರ ಮಾಹಿತಿಯನ್ನು ಇಡಿ ಅಧಿಕಾರಿಗಳು ಪತ್ತೆ ಮಾಡುತ್ತಿದ್ದಾರೆ ಎಂದು ಹೇಳಲಾಗುತ್ತಿದೆ.

ಈಗಾಗಲೇ ನಿವೇಶನ ನೋಂದಣಿ ಮಾಡಿಸಿಕೊಂಡಿರುವವರ ಬಹುತೇಕ ಮಂದಿಯ ಹೆಸರು ಪತ್ತೆಯಾಗಿದ್ದು, ಆ ಪೈಕಿ ಅತೀ ಗಣ್ಯರು, ಗಣ್ಯರು, ಹಿರಿಯ ಅಧಿಕಾರಿಗಳು, ಸರ್ಕಾರಿ ನೌಕರರು, ಮುಡಾ ಸಿಬ್ಬಂದಿ ಹೆಸರಿವೆ ಎಂದು ಹೇಳಲಾಗಿದ್ದು, ಈ ಸುಳಿವಿನ ಆಧಾರದಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಮೈಸೂರು ಮತ್ತು ಬೆಂಗಳೂರಿನಲ್ಲಿರುವ ಗಣ್ಯ ವ್ಯಕ್ತಿಗಳ ಮನೆಗಳ ಮೇಲೆ ಯಾವುದೇ ಸಂದರ್ಭ ದಾಳಿ ಮಾಡುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ ಎಂದು ನಂಬಲರ್ಹ ಮೂಲಗಳು ತಿಳಿಸಿವೆ.

ಯೋಗೇಶ್ವರ್‌ರಲ್ಲಿ ಕಾಂಗ್ರೆಸ್ ರಕ್ತ ಹರೀತಿದೆ!: ಡಿಕೆಶಿ

ಪಕ್ಷದಿಂದಲೇ ರಾಜಕಾರಣ ಪ್ರಾರಂಭ ಮಾಡಬೇಕು ಎಂದು ಸಿ.ಪಿ.ಯೋಗೇಶ್ವರ್ ಅವರು ಬೆಳಿಗ್ಗೆ ಭೇಟಿ ಮಾಡಿ ತಮ್ಮ ಅಭಿಪ್ರಾಯ ತಿಳಿಸಿದರು. ಇಷ್ಟು ದಿನ ಎನ್‌ಡಿಎಯಲ್ಲಿದ್ದೂ, ಮತ್ತೆ ಕಾಂಗ್ರೆಸ್ಸಿಗನಾಗಿ ಮುಂದುವರೆಯಬೇಕು ಎಂದು ಪಕ್ಷ ಸೇರ್ಪಡೆಯಾಗುತ್ತಿದ್ದಾರೆ ಎಂದರು.

ಯೋಗೇಶ್ವರ್ ಅವರ ಪಕ್ಷ ಸೇರ್ಪಡೆ ವಿಚಾರವನ್ನು ಮುಖ್ಯಮಂತ್ರಿಗಳ ಬಳಿ ದೂರವಾಣಿಯಲ್ಲಿ ಚರ್ಚೆ ಮಾಡಿದ್ದೆ. ನಂತರ ಪಕ್ಷದ ಎಲ್ಲ ಮುಖಂಡರ ಬಳಿ ಸಮಾಲೋಚನೆ ನಡೆಸಿದೆ. ನಮ್ಮ ಬಳಿ ಹೆಚ್ಚು ಸಮಯವಿಲ್ಲದೇ ಇರುವ ಕಾರಣಕ್ಕೆ ಇಂದು ಬೆಳಿಗ್ಗೆಯೇ ಮುಖ್ಯಮಂತ್ರಿಗಳ ನಿವಾಸದಲ್ಲಿ ಮತ್ತೊಂದು ಸುತ್ತಿನ ಚರ್ಚೆ ನಡೆಸಿದೆ. ಇವರ ಪಕ್ಷ ಸೇರ್ಪಡೆ ಬಗ್ಗೆ ವರಿಷ್ಠರ ಗಮನಕ್ಕೂ ತಂದು ಎಲ್ಲರ ಒಪ್ಪಿಗೆ ಮೇರೆಗೆ ಕಾಂಗ್ರೆಸ್ ಪಕ್ಷದ ಸದಸ್ಯತ್ವ ನೀಡಲಾಗಿದೆ ಎಂದು ಹೇಳಿದರು. ರಾಜಕಾರಣ ಸಾಧ್ಯತೆಗಳ ಕಲೆ. ಮತ್ತೆ ಯೋಗೇಶ್ವರ್ ಅವರು ಮರಳಿ ಗೂಡಿಗೆ ಬಂದಿದ್ದಾರೆ. ಎಸ್‌ಪಿ, ಬಿಜೆಪಿ, ಸ್ವತಂತ್ರ ಅಭ್ಯರ್ಥಿಯಾಗಿ ಕೆಲಸ ಮಾಡಿದ್ದಾರೆ. ಜೆಡಿಎಸ್ ಜೊತೆಗೂ ಜಿಲ್ಲೆಯಲ್ಲಿ ಮೈತ್ರಿ ಮಾಡಿಕೊಂಡು ಎನ್‌ಡಿಎ ಅಭ್ಯರ್ಥಿಯನ್ನು ಗೆಲ್ಲಿಸಿ ದ್ದರು. ರಾಜಕೀಯ ಸನ್ನಿವೇಶ ಬದಲಾದ ಕಾರಣಕ್ಕೆ ಮತ್ತೆ ನಮ್ಮೊಡನೆ ಕೈಜೋಡಿಸಿದ್ದಾರೆ ಎಂದರು. ವಿಧಾನಸಭಾ ಚುನಾವಣೆಯಲ್ಲಿ ಚನ್ನಪಟ್ಟಣದಿಂದ ಕುಮಾರಸ್ವಾಮಿ ಅವರು ಗೆದ್ದಿದ್ದರು. ನಮ್ಮ ಪಕ್ಷ 16 ಸಾವಿರ ಮತಗಳನ್ನು ಚನ್ನಪಟ್ಟಣ ದಲ್ಲಿ ಗಳಿಸಿತ್ತು. ಲೋಕಸಭಾ ಚುನಾವಣೆಯಲ್ಲಿ ಸುರೇಶ್ ಅವರು 85 ಸಾವಿರ ಮತಗಳನ್ನು ಪಡೆದಿದ್ದರು. ಅನೇಕ ಮಂದಿ ಜನತಾದಳದಿಂದ ಬಂದು ನಮಗೆ ಸಹಾಯ ಮಾಡಿದ್ದರು. ನಂತರ ಸ್ಥಾನ ತೆರವುಗೊಂಡ ನಂತರ ಸುಮಾರು 15ಕ್ಕೂ ಹೆಚ್ಚು ಬಾರಿ ಕ್ಷೇತ್ರಕ್ಕೆ ಭೇಟಿ ನೀಡಿದ್ದೆ ಎಂದು ಅವರು ತಿಳಿಸಿದರು. ನಮ್ಮ ಕಾರ್ಯಕರ್ತರು ಕ್ಷೇತ್ರದಲ್ಲಿ ಪಕ್ಷವನ್ನು ತಳಮಟ್ಟದಿಂದ ಗಟ್ಟಿ ಮಾಡಲು ಶ್ರಮವಹಿಸಿದ್ದರು. ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಯಾವುದೇ ಕಾರಣಕ್ಕೂ ಮುಜುಗರಕ್ಕೆ ಒಳಗಾಗುವ ಪ್ರಮೇಯವನ್ನು ನಾವು ಉಂಟುಮಾಡುವುದಿಲ್ಲ. ನಿಮ್ಮ ಜೊತೆ ನಾನು ಹಾಗೂ ಡಿ.ಕೆ. ಸುರೇಶ್ ಇದ್ದೇವೆ. ನಿಮ್ಮನ್ನು ಉತ್ತಮವಾದ ರೀತಿಯಲ್ಲಿ ನಡೆಸಿಕೊಳ್ಳುತ್ತೇವೆ. ಇದೇ ಮಾತನ್ನು ಯೋಗೇಶ್ವರ್ ಅವರಿಗೂ ಹೇಳಿದ್ದೇವೆ. ಅವರೂ ಸಹ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಟ್ಟಿಗೆ ಕೆಲಸ ಮಾಡುತ್ತಾರೆ. ಚನ್ನಪಟ್ಟಣಕ್ಕೆ ವಿಶೇಷ ಸ್ಥಾನಮಾನ ನೀಡುತ್ತೇವೆ. ಕಾರ್ಯಕರ್ತರು ಎಲ್ಲಾ ಭಿನ್ನಾಭಿಪ್ರಾಯಗಳನ್ನು ಮರೆತು ಕೆಲಸ ಮಾಡಬೇಕು ಎಂದು ಸೂಚನೆ ನೀಡಿದ್ದೇನೆ ಎಂದರು.


ಸ್ಪರ್ಧೆ ಪಟ್ಟಿ ಅಂತಿಮ: ಇಂದೇ ಹೈಕಮಾಂಡ್‌ಗೆ ಸ್ಪರ್ಧಿಸುವವರ ಪಟ್ಟಿಯನ್ನು ಕಳುಹಿಸಲಾಗುವುದು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಟ್ಟಿ ಅಂತಿಮ ಮಾಡುತ್ತಾರೆ. ಚನ್ನಪಟ್ಟಣದ ಅಭ್ಯರ್ಥಿ ಆಯ್ಕೆ ಮಾಡುವ ವಿಚಾರವನ್ನು ಡಿ.ಕೆ.ಸುರೇಶ್ ಅವರ ಜವಾಬ್ದಾರಿಗೆ ವಹಿಸಲಾಗಿತ್ತು. ಅವರು ಈಗಾಗಲೇ ಖರ್ಗೆ ಅವರ ಬಳಿ ಮಾತನಾಡಿದ್ದಾರೆ. ಗುರುವಾರ ಬೆಳಿಗ್ಗೆ 11 ಗಂಟೆಗೆ ನಡೆಯುವ ನಾಮಪತ್ರ ಸಲ್ಲಿಕೆ ವೇಳೆ ಎಲ್ಲರೂ ಭಾಗವಹಿಸಬೇಕು ಎಂದು ಮನವಿ ಮಾಡಿದರು. ಅಭ್ಯರ್ಥಿ ಕೊರತೆಯಿಂದ ಯೋಗೇಶ್ವರ್ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಲಾಯಿತೇ ಎಂದು ಕೇಳಿದಾಗ ಕಾಂಗ್ರೆಸ್ ಪಕ್ಷಕ್ಕೆ ಎಂದಿಗೂ ಅಭ್ಯರ್ಥಿಗಳ ಕೊರತೆ ಕಾಣುವುದಿಲ್ಲ. ನಾನು ಇಲ್ಲದಿದ್ದರೂ ಪಕ್ಷ ನಡೆಯುತ್ತದೆ ಎಂದರು.

ಸೋಲಿಸೋದು ರಾಜಕೀಯ ವಿದ್ಯಮಾನ: ಡಿ.ಕೆ.ಸುರೇಶ್ ಅವರನ್ನು ಸೋಲಿಸಿದವರನ್ನು ಪಕ್ಷಕ್ಕೆ ಸೇರಿಸಿಕೊಂಡಿದ್ದೀರಿ ಎಂದು ಕೇಳಿದಾಗ, ಇದರ ಬಗ್ಗೆ ನಮ್ಮ ಕಾರ್ಯಕರ್ತರ ಬಳಿ ಚರ್ಚೆ ನಡೆಸಿದ್ದೇವೆ. ಇದು ಎಲ್ಲಾ ಪಕ್ಷದಲ್ಲಿಯೂ ಇದ್ದಿದ್ದೇ. ನಮ್ಮಲ್ಲಿ ಮಾತ್ರ ಇದು ನಡೆದಿಲ್ಲ. ಇದೊಂದು ರಾಜಕೀಯ ವಿದ್ಯಮಾನವಷ್ಟೇ ಎಂದರು. ಬಿಜೆಪಿ ಅಭ್ಯರ್ಥಿಗೆ ಕ್ಷೇತ್ರ ಬಿಟ್ಟುಕೊಡಲು ಕುಮಾರಸ್ವಾಮಿ ಅವರು ಮುಂದಾಗಿದ್ದರು ಎನ್ನುವ ಬಗ್ಗೆ ಕೇಳಿದಾಗ, ತಮ್ಮ ಸ್ವಂತ ಕ್ಷೇತ್ರವನ್ನೇ ಬಿಜೆಪಿಗೆ ಬಿಟ್ಟುಕೊಡಲು ಕುಮಾರಸ್ವಾಮಿ ಸಿದ್ಧರಾಗಿದ್ದರು. ಎರಡು ಬಾರಿ ಸಿಎಂ, ಪ್ರಸ್ತುತ ಕೇಂದ್ರ ಸಚಿವರಾಗಿರುವ ಅವರು ಎಷ್ಟು ದುರ್ಬಲರಾಗಿದ್ದಾರೆ ಎಂಬುದು ಇದರಿಂದ ತಿಳಿಯುತ್ತದೆ. ಅವರು ಚನ್ನಪಟ್ಟಣವನ್ನು ಗೆಲ್ಲುತ್ತೇವೆ ಎಂದು ಹೇಳಲು ಸಾಧ್ಯವೇ ಎಂದರು. ಪ್ರಿಯಾಂಕ ಗಾಂಧಿ ಅವರು ವಯನಾಡಿನಲ್ಲಿ ನಾಮಪತ್ರ ಸಲ್ಲಿಸುತ್ತಿದ್ದು, ಈ ಕಾರ್ಯಕ್ರಮಕ್ಕೆ ತೆರಳಬೇಕಾಗಿತ್ತು. ಪಕ್ಷ ಸೇರ್ಪಡೆ ಕಾರ್ಯಕ್ರಮ ತುರ್ತಾಗಿ ನಡೆದ ಕಾರಣಕ್ಕೆ ಮುಖ್ಯಮಂತ್ರಿಗಳು ಅಲ್ಲಿ ಭಾಗವಹಿಸುತ್ತಿದ್ದು, ನಾನು ತೆರಳಲಿಲ್ಲ. ಅಲ್ಲದೇ ಬೆಂಗಳೂರು ನಗರದಲ್ಲಿ ಉಂಟಾಗಿರುವ ಮಳೆ ಹಾನಿ ವೀಕ್ಷಣೆಗೆ ಒಂದಷ್ಟು ಕಡೆ ಭೇಟಿ ನೀಡುವ ಕಾರಣಕ್ಕೆ ವಯನಾಡಿಗೆ ತೆರಳುವುದನ್ನು ರದ್ದು ಮಾಡಿದೆ ಎಂದರು.

ಮಳೆಯಿಂದ ಮನೆ ಕುಸಿದಿಲ್ಲ: ಬೆಂಗಳೂರಿನಲ್ಲಿ ಸುರಿಯುತ್ತಿರುವ ಮಳೆಗೆ ಬಾಬುಸಾಬ್ ಪಾಳ್ಯದಲ್ಲಿನ ಕಟ್ಟಡ ಕುಸಿತವಾಗಿಲ್ಲ. ಅವೈಜ್ಞಾನಿಕ ಹಾಗೂ ಕಳಪೆ ಕಾಮಗಾರಿಯಿಂದ ಈ ಘಟನೆ ನಡೆದಿದೆ. ಈ ಘಟನೆಗೆ ಕಾರಣರಾದ ಮನೆ ಮಾಲೀಕ, ನಿರ್ಮಾಣ ಗುತ್ತಿಗೆದಾರ, ಅಧಿಕಾರಿಗಳು ಸೇರಿದಂತೆ ಎಲ್ಲರ ಮೇಲೂ ಪ್ರಕರಣ ದಾಖಲಿಸಲಾಗುವುದು. ಸಣ್ಣ ಜಾಗದಲ್ಲಿ ಎತ್ತರದ ಕಟ್ಟಡ ಕಟ್ಟಿದ್ದೇ ಇದಕ್ಕೆ ಕಾರಣ ಎಂದರು.

ಕಂಜನ್ ಮೇಲೆ ಮತ್ತೆ ಧನಂಜಯ ದಾಳಿ!

ಮಾವುತರ ಸಮಯಪ್ರಜ್ಞೆಯಿಂದ ತಪ್ಪಿದ ಭಾರಿ ಅನಾಹುತ



ಕುಶಾಲನಗರ, ಅ.23– ದಸರಾ ವೇಳೆ ಮೈಸೂರು ಅರಮನೆ ಆವರಣದಲ್ಲೇ ಕಂಜನ್ ಮೇಲೆ ದಾಳಿ ನಡೆಸಿದ್ದ ಧನಂಜಯ ಆನೆ ಮತ್ತೆ ಶಿಬಿರದಲ್ಲಿ ದಾಳಿ ನಡೆಸಿರುವ ಬಗ್ಗೆ ವರದಿಯಾಗಿದೆ.


ಧನಂಜಯ ಶಿಬಿರದಲ್ಲಿ ಕಂಜನ್‌ನ ಮೇಲೆ ದಾಳಿ ಮಾಡಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ಸ್ಥಳದಲ್ಲಿದ್ದ ಮಾವುತರ ಸಮಯಪ್ರಜ್ಞೆಯಿಂದ ಸಂಭವಿಸಬಹುದಾಗಿದ್ದ ಭಾರಿ ಅನಾಹುತ ತಪ್ಪಿದೆ. ಪ್ರಸ್ತುತ ಕೊಡಗಿನ ದುಬಾರೆ ಆನೆ ಶಿಬಿರದಲ್ಲಿರುವ ಧನಂಜಯ ಮತ್ತು ಕಂಜನ್ ಪರಸ್ಪರ ಕಾದಾಡಿಕೊಂಡಿವೆ.

ಸ್ಥಳೀಯರ ಪ್ರಕಾರ ಕಂಜನ್, ಸುಮ್ಮನೆ ನಿಂತಿದ್ದ ವೇಳೆ ಏಕಾಏಕಿ ಧನಂಜಯ ದಾಳಿಗೆ ಮುಂದಾಗಿದೆ. ಈ ವೇಳೆ ಆನೆ ಕೊಂಚ ಮುಂದೆ ಓಡಿದ್ದು ಆಗಲೂ ಬಿಡದ ಧನಂಜಯ ಅದು ಹಿಂಭಾಗ ದಾಳಿ ಮಾಡಿದೆ.

ಈ ವೇಳೆ ಸ್ಥಳದಲ್ಲೇ ಇದ್ದ ಮಾವುತರು ಧನಂಜಯನನ್ನು ಸಮಾಧಾನಪಡಿಸುವಲ್ಲಿ ಯಶಸ್ವಿಯಾಗಿದ್ದು, ಬಳಿಕ ಆನೆಗಳು ತಮ್ಮ ತಮ್ಮ ಜಾಗದಲ್ಲಿ ಬಂದು ನಿಂತಿವೆ. ಘಟನೆಯಲ್ಲಿ ಕಂಜನ್‌ಗೆ ಯಾವುದೇ ಗಂಭೀರ ಪೆಟ್ಟುಗಳಾಗಿಲ್ಲ ಎಂದು ಮಾವುತರು ಸ್ಪಷ್ಟಪಡಿಸಿದ್ದಾರೆ. ಈ ಕಾದಾಟದ ಬಳಿಕ ಎರಡೂ ಆನೆಗಳನ್ನು ವೈದ್ಯರು ಪರೀಕ್ಷೆ ನಡೆಸಿದ್ದು ಅವು ಆರೋಗ್ಯವಾಗಿವೆ ಎಂದು ವೈದ್ಯರು ತಿಳಿಸಿದ್ದಾರೆ.

ಕಂಜನ್ ಮೇಲೆ ಸತತ ದಾಳಿ: ಧನಂಜಯ, ಕಂಜನ್ ಮೇಲೆ ದಾಳಿ ಮಾಡುತ್ತಿರುವುದು ಇದೇ ಮೊದಲೇನಲ್ಲ. ಈ ಬಾರಿಯ ದಸರಾ ಸಂದರ್ಭದಲ್ಲೂ ಧನಂಜಯ, ಕಂಜನ್ ಮೇಲೆ ದಾಳಿ ಮಾಡಿತ್ತು ಮೈಸೂರು ಅರಮನೆ ಆವರಣದಲ್ಲೇ ಕಂಜನ್‌ನನ್ನು ಧನಂಜಯ ಅಟ್ಟಾಡಿಸಿದ್ದ. ಈ ವೇಳೆ ರಸ್ತೆಗೆ ಓಡಿ ಹೋಗಿದ್ದ ಕಂಜನ್ ಬಳಿಕ ಅರಮನೆ ಆವರಣಕ್ಕೆ ಮಾವುತರು ಕರೆತಂದಿದ್ದರು.

ಶ್ರೀಗಳಿಂದ ಆಶೀರ್ವಾದ...



ಮೈಸೂರಿಗೆ ಆಗಮಿಸಿದ ಯದುಗಿರಿ ಯತಿರಾಜ ಮಠದ ಶ್ರೀ ಶ್ರೀ ನಾರಾಯಣ ರಾಮಾನುಜ ಜೀಯರ್ ಅವರನ್ನು ಕಾಳಿದಾಸ ರಸ್ತೆಯಲ್ಲಿರುವ ಲಕ್ಷ್ಮಿ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್‌ನ ನೂತನ ನಿರ್ದೇಶಕ ಎಂ.ಡಿ.ಪಾರ್ಥಸಾರಥಿ ಅಭಿನಂದಿಸಿ, ಆಶೀರ್ವಾದ ಪಡೆದರು. ಈ ವೇಳೆ ಮೈಸೂರು ಯದುಗಿರಿ ಯತಿರಾಜ ಮಠದ ಯೋಗ ನರಸಿಂಹನ್ (ಮುರುಳಿ), ರಾಮಾನುಜ ಸಹಕಾರ ಸಂಘದ ನಿರ್ದೇಶಕ ಟಿ.ಎಸ್.ಅರುಣ್ ಉಪಸ್ಥಿತರಿದ್ದರು.

ಅ.27, ಮೈಸೂರಲ್ಲಿ ಮ್ಯಾರಥಾನ್

ಮೈಸೂರು, ಅ.23(ಜಿಎ)–ಟೋಸ್ಟ್ ಮಾಸ್ಟರ್ ಅಂತಾರಾಷ್ಟ್ರೀಯ ಸಂಸ್ಥೆ ಶತಮಾನೋತ್ಸವ ಅಂಗವಾಗಿ ಅ.27ರಂದು ಬೆಳಗ್ಗೆ 6 ಗಂಟೆಗೆ ಮೈಸೂರಿನ ಎಸ್‌ಜೆಸಿಇ ಕ್ಯಾಂಪಸ್‌ನಿಂದ ಮ್ಯಾರಥಾನ್ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಮುಖ್ಯಸ್ಥ ಎಲ್.ಶ್ರೀಹರಿ, ಈ ವಿಷಯ ತಿಳಿಸಿ, ಇದು ಕೇವಲ ಮ್ಯಾರಥಾನ್ ಆಗಿರದೇ ಆರೋಗ್ಯ, ಸೌಹಾರ್ದತೆ, ವೈಯಕ್ತಿಕ ಸಾಧನೆ, ಸಮುದಾಯ ಮನೋಭಾವ, ನೆಟ್‌ವರ್ಕಿಂಗ್ ಅವಕಾಶಗಳಿಗೆ ಉತ್ತೇಜನ ನೀಡುವ ಉದ್ದೇಶ ಹೊಂದಿದೆ ಎಂದರು.

ಸಂಸ್ಥೆಯು ಪ್ರಮುಖವಾಗಿ ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಅಭಿವೃದ್ಧಿಗೆ ಸೂಕ್ತ ತರಬೇತಿ, ಅವಕಾಶ ಒದಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಆಸಕ್ತ ವಿದ್ಯಾರ್ಥಿಗಳು ಟೋಸ್ಟ್ ಮಾಸ್ಟರ್ ಕ್ಲಬ್‌ಗೆ ಸದಸ್ಯರಾಗುವ ಮೂಲಕ ಈ ಪ್ರಯೋಜನ ಪಡೆಯಬಹುದು. ವಾಕ್ಚಾತುರ್ಯ ಅತ್ಯಗತ್ಯವಾದ ಅಂಶವಾಗಿದೆ. ಈ ನಿಟ್ಟಿನಲ್ಲಿ ಸಂಸ್ಥೆ ಸೂಕ್ತ ತರಬೇತಿ ಹಾಗೂ ವೇದಿಕೆ ಒದಗಿಸುವ ಮೂಲಕ ಉತ್ತಮ ನಾಯಕರಾಗಿ ಬೆಳೆಯಲು ಅವಕಾಶ ಕಲ್ಪಿಸುತ್ತಿದೆ. ಹೀಗಾಗಿ ಯುಜನರು ಪ್ರಯೋಜನ ಪಡೆಯಬಹುದಾಗಿದೆ ಎಂದರು.

ಮ್ಯಾರಥಾನ್ 3 ಕಿಲೋ ಮೀಟರ್, 7 ಕಿಲೋಮೀಟರ್ ಅಂತರದ ಎರಡು ವಿಭಾಗಗಳಲ್ಲಿ ನಡೆಯಲಿದ್ದು, ಮಹಿಳೆಯರು ಹಾಗೂ ಪುರುಷರಿಗಾಗಿ ಪ್ರತ್ಯೇಕ ಸ್ಪರ್ಧೆಗಳು ನಡೆಯಲಿವೆ. ನೋಂದಣಿಗಾಗಿ ಮೊ.9483477887 ಅನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವಿಶೋಕ್, ಸೈಜೋಗ್ ಉಪಸ್ಥಿತರಿದ್ದರು.

ಅಂತರ ಶಾಲಾ ವೇಷಭೂಷಣ; ಜಾನಪದ, ಲಘು ಸಂಗೀತ ಸ್ಪರ್ಧೆ

ಮೈಸೂರು, ಅ. 23– ಮೈಸೂರಿನ ಕನಕದಾಸನಗರ ದಟ್ಟಗಳ್ಳಿ 3ನೇ ಹಂತದಲ್ಲಿರುವ ವಿಶ್ವಪ್ರಜ್ಞ ನರ್ಸರಿ, ಪ್ರೈಮರಿ, ಪ್ರೌಢಶಾಲೆ ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಅ.30ರಂದು ಮಹದೇವಯ್ಯ ಸ್ಮರಣಾರ್ಥ ಅಂತರ ಶಾಲಾ ವೇಷಭೂಷಣ ಮತ್ತು ಶ್ರೀಮತಿ ಲಕ್ಷ್ಮಿದೇವಮ್ಮ ಸ್ಮರಣಾರ್ಥ ಜಾನಪದ ಮತ್ತು ಲಘು ಸಂಗೀತ ಸ್ಪರ್ಧೆ ಏರ್ಪಡಿಸಲಾಗಿದೆ. ಶಾಲಾ ಶಿಕ್ಷಣ ವಿಭಾಗದ ನಿವೃತ್ತ ಡಿಡಿಪಿಐ ಶ್ರೀಮತಿ ಮಂಜುಳಾ ಮಿರ್ಲೆ, ವಿಪಿಇಐ ಟ್ರಸ್ಟಿ ಶ್ರೀಮತಿ ಎಂ.ಎಸ್.ಸುಹಾಸ್ ಪ್ರಭು ಮತ್ತು ವಿಪಿಇಐ ಕಾರ್ಯದರ್ಶಿ ಎಂ.ಎನ್.ಮಹೇಂದ್ರ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ವಿಪಿಇಐ ಟ್ರಸ್ಟಿ ಆರ್.ಕೆ.ರಾಜು ಅಧ್ಯಕ್ಷತೆ ವಹಿಸಲಿದ್ದಾರೆ.

ಯೋಗೇಶ್ವರ್ ಕಾಂಗ್ರೆಸ್ ಸೇರ್ಪಡೆ ಆಶ್ಚರ್ಯಪಡುವ ಸಂಗತಿಯೇನೂ ಅಲ್ಲ



ಬೆಂಗಳೂರು, ಅ.23–(ಕೆಎಂಶಿ) ಬಿಜೆಪಿಗೆ ಮಾಜಿ ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ರಾಜೀನಾಮೆ ಕೊಟ್ಟಿರುವುದರಲ್ಲಿ ಆಶ್ಚರ್ಯಪಡುವಂತದ್ದು ಏನೂ ಇಲ್ಲ. ಯಾವಾಗ ತರಾತುರಿಯಲ್ಲಿ ವಿಧಾನಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟರೋ ಅವತ್ತೇ ಗೊತ್ತಿತ್ತು. ಇದರಲ್ಲಿ ಆಶ್ಚರ್ಯ ಏನೂ ಇಲ್ಲ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣ ಟಿಕೆಟ್ ವಿಚಾರದಲ್ಲಿ ಕಳೆದ ಎರಡು ತಿಂಗಳಿಂದ ನಿರಂತರವಾಗಿ ನನ್ನ ಹೆಸರು ಚಾಲ್ತಿಯಲ್ಲಿದೆ. ಜೆಡಿಎಸ್ ಕಾರ್ಯಕರ್ತರು ನಿಖಿಲ್‌ಗೆ ಟಿಕೆಟ್ ಕೊಟ್ಟರೆ ನಾವು ಕೆಲಸ ಮಾಡುತ್ತೇವೆ ಅಂದಿದ್ದರು. ಇಲ್ಲಿ ಯಾವುದೇ ತೀರ್ಮಾನಗಳು ಎನ್‌ಡಿಎ ಕಡೆಯಿಂದ ಘೋಷಣೆ ಆಗಬೇಕು. ನಿನ್ನೆ ಕುಮಾರಸ್ವಾಮಿ ಅವರು ಇದನ್ನೇ ಹೇಳಿದ್ದಾರೆ. ತಾಳಿದವನು ಬಾಳಿಯಾನು ಅಂತ. ಅಂತಿಮವಾಗಿ ನಮ್ಮ ಹಾಗೂ ಬಿಜೆಪಿ ನಾಯಕರು ಅಭ್ಯರ್ಥಿಯನ್ನು ಘೋಷಣೆ ಮಾಡುತ್ತಾರೆ ಎಂದು ಹೇಳಿದರು.

ಕಾಂಗ್ರೆಸ್‌ಗೆ ಕೇಂದ್ರ ಸಚಿವ ಕುಮಾರಸ್ವಾಮಿಯೇ ಟಾರ್ಗೆಟ್. ಕಳೆದ ಲೋಕಸಭಾ ಚುನಾವಣೆಯಲ್ಲಿ ಹಳೇ ಮೈಸೂರು ಭಾಗದ 14 ಲೋಕಸಭೆ ಕ್ಷೇತ್ರಗಳಲ್ಲಿ 12 ಕ್ಷೇತ್ರವನ್ನು ಗೆದ್ದಿದ್ದೇವೆ. ಅದರಲ್ಲಿ ಪ್ರಾಮುಖ ಪಾತ್ರ ನಮ್ಮ ಕಾರ್ಯಕರ್ತರು, ಕುಮಾರಣ್ಣನ ನಾಯಕತ್ವ. ಈ ವಿಚಾರಕ್ಕೆ ಕುಮಾರಣ್ಣ ಅವರನ್ನು ಟಾರ್ಗೆಟ್ ಮಾಡುತ್ತಿದ್ದಾರೆ ಎಂದು ಹೇಳಿದರು.

ಬಿಜೆಪಿಯ ರಾಜ್ಯ ಮಟ್ಟದ ಒಕ್ಕಲಿಗರನ್ನು ಕುಮಾರಣ್ಣ ತುಳಿಯುತ್ತಾರೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಇದರ ಹಿಂದೆ ಕುಮ್ಮಕ್ಕು ಕೊಟ್ಟವರು ಯಾರು ಅನ್ನುವುದು ಪ್ರಸ್ತುತ ಬೆಳವಣಿಗೆ ನೋಡಿದರೆ ರಾಜ್ಯದ ಜನರಿಗೆ ಗೊತ್ತಾಗುತ್ತಿದೆ ಎಂದು ನಿಖಿಲ್ ಕುಮಾರಸ್ವಾಮಿ ಕಿಡಿಕಾರಿದರು.

ಬೆಂಗಳೂರಲ್ಲಿ ನಿರ್ಮಾಣ ಹಂತದ ಕಟ್ಟಡ ಕುಸಿತ

ಸಾವಿನ ಸಂಖ್ಯೆ 8ಕ್ಕೆ ಏರಿಕೆ; ಮಾಲೀಕ, ಕಂಟ್ರಾಕ್ಟರ್ ಬಂಧನ



ಬೆಂಗಳೂರು,ಅ.23–ಬೆಂಗಳೂರಿನ ಬಾಬು ಸಾಪಾಳ್ಯದಲ್ಲಿ ನಿರ್ಮಾಣ ಹಂತದ ಕಟ್ಟಡ ಕುಸಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತಪಟ್ಟವರ ಸಂಖ್ಯೆ 8ಕ್ಕೆ ಏರಿಕೆಯಾಗಿದೆ.

ಇಂದಿನ ಕಾರ್ಯಾಚರಣೆಯಲ್ಲಿ ಮತ್ತೆ 7 ಮೃತದೇಹಗಳನ್ನು ರಕ್ಷಣಾ ಸಿಬ್ಬಂದಿ ಹೊರತೆಗೆದಿದ್ದಾರೆ. ಪೊಲೀಸರ ಪ್ರಕಾರ, ಮೃತರಲ್ಲಿ ಐವರನ್ನು ಹರ್ಮನ್ (26), ತ್ರಿಪಾಲ್ (35), ಮೊಹಮ್ಮದ್ ಸಾಹಿಲ್ (19), ಸತ್ಯರಾಜು (25), ಶಂಕರ್ ಎಂದು ಗುರುತಿಸಲಾಗಿದೆ. ಒಟ್ಟು 13 ಜನರನ್ನು ರಕ್ಷಿಸಿದ್ದು, 6 ಮಂದಿ ಬೆಂಗಳೂರು ಉತ್ತರ ಮತ್ತು ಹೊಸ್ಮಾಟ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಂಗಳವಾರ ಮಧ್ಯಾಹ್ನ 3:40ರ ಸುಮಾರಿಗೆ ನಗರದಲ್ಲಿ ಸುರಿದ ಭಾರಿ ಮಳೆಯ ನಡುವೆಯೇ ಈ ಕಟ್ಟಡ ಕುಸಿತ ಸಂಭವಿಸಿತ್ತು. ದುರಂತ ನಡೆದ ಸಂದರ್ಭದಲ್ಲಿ ಬಿಹಾರ, ಆಂಧ್ರಪ್ರದೇಶದ ಚಿತ್ತೂರು ಮತ್ತು ಕರ್ನಾಟಕದ ಯಾದಗಿರಿಯ ಒಟ್ಟು 21 ಕಾರ್ಮಿಕರು ಇದ್ದರು ಎನ್ನಲಾಗಿದೆ. ಅವಶೇಷಗಳಡಿಯಲ್ಲಿ ಸಿಕ್ಕಿಬಿದ್ದಿರುವ ಕಾರ್ಮಿಕರನ್ನು ರಕ್ಷಿಸಲು ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಪೊಲೀಸ್ ಮತ್ತು ಅಗ್ನಿಶಾಮಕ ತುರ್ತು ಸೇವಾ ಸಿಬ್ಬಂದಿ ನಿರಂತರ ಕಾರ್ಯಾಚರಣೆ ನಡೆಸಿದ್ದಾರೆ.

ಕಟ್ಟಡ ಕುಸಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರ ಪೈಕಿ ಕಟ್ಟಡದ ಮಾಲೀಕ ಮತ್ತು ಕಟ್ಟಡ ನಿರ್ಮಾಣದ ಉಸ್ತುವಾರಿ ಕಂಟ್ರಾಕ್ಟರ್ ಸೇರಿದ್ದಾರೆ ಎನ್ನಲಾಗಿದೆ ಬಿಎನ್‌ಎಸ್, ಬಿಬಿಎಂಪಿ ಆರ್‌ಇಆರ್‌ಎ ಕಾಯ್ದೆ ಅಡಿಯಲ್ಲಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದು, ಕಾರ್ಮಿಕ ಮೊಹಮ್ಮದ್ ಹರ್ಷದ್ ನೀಡಿರುವ ದೂರಿನ ಮೇಲೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಕರ್ನಾಟಕ ಸಂಸ್ಕೃತ ವಿವಿ ದತ್ತಿ ನಿಧಿಗೆ ದೇಣಿಗೆ



ಮೈಸೂರಿನ ಸತ್ಯವತಿ ವಿಜಯ ರಾಘವಾಚಾರ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಕರ್ನಾಟಕ ಸಂಸ್ಕೃತ ವಿವಿ ದತ್ತಿ ನಿಧಿಗೆ 2.5 ಲಕ್ಷ ರೂ. ದೇಣಿಗೆ ನೀಡಲಾಯಿತು.

ಮೈಸೂರು: ಮೈಸೂರಿನ ಸತ್ಯವತಿ ವಿಜಯ ರಾಘವಾಚಾರ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ದತ್ತಿ ನಿಧಿಗೆ 2.5 ಲಕ್ಷ ರೂ. ಗಳನ್ನು ದೇಣಿಗೆ ರೂಪದಲ್ಲಿ ನೀಡಲಾಯಿತು.

'ಕನ್ನಡ ಸೇವೆ ದೇವರ ಸೇವೆ' ಧ್ಯೇಯದೊಂದಿಗೆ ಹಲವು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ, ಎಂದೂ, ಎಲ್ಲಿಯೂ ಗುರುತಿಸಿಕೊಳ್ಳದೇ ಎಲೆಮರೆ ಕಾಯಿಯಂತೆ ಸಮಾಜಮುಖಿ ಚಟುವಟಿಕೆಗಳಲ್ಲಿ ಕಾರ್ಯಪ್ರವೃತ್ತರಾಗಿರುವ, ಡಾ.ಎ.ಪುಷ್ಪಾ ಅಯ್ಯಂಗಾರ್ ಮತ್ತು ಎ.ವೈದೇಹಿ ಅಯ್ಯಂಗಾರ್ ಸಹೋದರಿಯರ ನೇತೃತ್ವದಲ್ಲಿ ಬುಧವಾರ ದೇಣಿಗೆಯ ಚೆಕ್ ಅನ್ನು ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯದ ಉಪ ಕುಲಪತಿ ಡಾ.ಎಸ್.ಅಹಲ್ಯಾ ಅವರಿಗೆ ಮೈಸೂರಿನ ಸರಸ್ವತಿಪುರಂನಲ್ಲಿರುವ ಅವರ ನಿವಾಸದಲ್ಲಿ ಹಸ್ತಾಂತರಿಸಲಾಯಿತು.

ಈ ವೇಳೆ ಡಾ.ಎ.ಪುಷ್ಪಾ ಅಯ್ಯಂಗಾರ್ ಮತ್ತು ಎ.ವೈದೇಹಿ ಅಯ್ಯಂಗಾರ್ ಮಾತನಾಡಿ, ಕನ್ನಡ ಸೇವೆಗೆ ನಮ್ಮ ಜೀವನ ಮುಡಿಪಾಗಿದೆ. ಈವರೆಗೂ ನಮ್ಮ ತಂದೆ–ತಾಯಿ ಸತ್ಯವತಿ ಹಾಗೂ ವಿಜಯ ರಾಘವಾಚಾರ್ ಅವರ ಹೆಸರಿನಲ್ಲಿ ಇಂತಹ ಸೇವೆಗಳನ್ನು ಮಾಡಿಕೊಂಡು ಬರಲಾಗುತ್ತಿದೆ. ಅದರಲ್ಲೂ ಆಹಾರ, ಅಕ್ಷರ ಮತ್ತು ಆರೋಗ್ಯಕ್ಕೆ ಉತ್ತೇಜನ ನೀಡುವುದೇ ನಮ್ಮ ಮೂಲ ಉದ್ದೇಶ. ಯಾವುದೇ ಜಾತಿ–ಮತ ಭೇದವಿಲ್ಲದೆ ಉತ್ತೇಜನ ನೀಡಿ, ಮುಂದಿನ ದಿನಗಳಲ್ಲೂ ಎಲ್ಲಾ ಸಂಘ ಸಂಸ್ಥೆಗಳಿಗೂ ಈ ಕಾರ್ಯವನ್ನು ವಿಸ್ತರಿಸಿಕೊಂಡು, ಮುಂದುವರೆಸಿಕೊಂಡು ಹೋಗುವುದಾಗಿ ನುಡಿದರು.

ಕರ್ನಾಟಕ ಸಂಸ್ಕೃತ ವಿವಿ ಉಪಕುಲಪತಿ ಡಾ.ಎಸ್.ಅಹಲ್ಯಾ ಮಾತನಾಡಿ, ಈ ಇಳಿ ವಯಸ್ಸಿನಲ್ಲಿಯೂ ಇವರ ಕನ್ನಡ ಪ್ರೇಮ ಹಾಗೂ ನಿಸ್ವಾರ್ಥ ಸೇವೆ ನಿಜಕ್ಕೂ ಯುವ ಪೀಳಿಗೆಗೆ ಮಾರ್ಗದರ್ಶನವಾಗಿದೆ. ಇವರಿಗೆ ಅಗತ್ಯವಿರುವ ಎಲ್ಲಾ ಸಹಕಾರಗಳನ್ನು ನೀಡುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ವಿಜಯನಗರದ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಇನ್ನಿತರರು ಹಾಜರಿದ್ದರು.

ವೀರ ವನಿತೆ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಆಚರಣೆ



ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಶ್ರೀ ಭುವನೇಶ್ವರಿ ಸೇವಾ ಟ್ರಸ್ಟ್ ವತಿಯಿಂದ ವಿವಿಧ ಜಾತಿಯ ಗಿಡಗಳನ್ನು ನೆಟ್ಟು, ಕಿತ್ತೂರು ರಾಣಿ ಚೆನ್ನಮ್ಮನವರ ಜಯಂತಿ ಆಚರಿಸಲಾಯಿತು.

ಮೈಸೂರು, ಅ. 23–ಕಿತ್ತೂರು ರಾಣಿ ಚೆನ್ನಮ್ಮನವರ ಜಯಂತಿ ಅಂಗವಾಗಿ ಶ್ರೀ ಭುವನೇಶ್ವರಿ ಸೇವಾ ಟ್ರಸ್ಟ್ ವತಿಯಿಂದ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಬುಧವಾರ ವಿವಿಧ ಜಾತಿಯ ಗಿಡಗಳನ್ನು ನೆಟ್ಟು ಸಿಹಿ ವಿತರಿಸಿ, ಜಯಂತಿ ಆಚರಿಸಲಾಯಿತು.

ಈ ವೇಳೆ ಬಿಜೆಪಿ ನಗರ ಅಧ್ಯಕ್ಷ ಎಲ್. ನಾಗೇಂದ್ರ ಮಾತನಾಡಿ, ಚೆನ್ನಮ್ಮ ಒಂದು ಜಾತಿಗೆ ಸೀಮಿತವಾಗದೆ ದೇಶದ ಪ್ರತಿಯೊಬ್ಬರು ಚೆನ್ನಮ್ಮನನ್ನು ಸ್ಮರಣೆ ಮಾಡಬೇಕು. ಹಿರಿಯ ಹೋರಾಟಗಾರರ ತ್ಯಾಗ–ಬಲಿದಾನದಿಂದ ಸ್ವಾತಂತ್ರ್ಯ ಸಿಕ್ಕಿದೆ. ಸಮಾಜಕ್ಕೆ ಕೊಡುಗೆ ನೀಡಿದ ಮಹನೀಯರನ್ನು ಸ್ಮರಿಸಬೇಕು.

ಚೆನ್ನಮ್ಮನ ಸಾಹಸ ಅಮರ : ದೇಶದ ಸ್ವಾತಂತ್ರ್ಯಕ್ಕಾಗಿ ಚೆನ್ನಮ್ಮ ಮಾಡಿದ ಹೋರಾಟ ಎಂದಿಗೂ ಮರೆಯಲು ಸಾಧ್ಯವಿಲ್ಲ. ಸಾವಿರಾರು ವೀರಯೋಧರೊಂದಿಗೆ ಬ್ರಿಟಿಷರನ್ನು ಹಿಮ್ಮೆಟ್ಟಿಸಿದ ಚೆನ್ನಮ್ಮನ ಸಾಹಸ ಎಂದೆಂದಿಗೂ ಅಮರ. ಮಕ್ಕಳಲ್ಲಿ ಚೆನ್ನಮ್ಮನ ಆದರ್ಶಗಳನ್ನು ಬೆಳೆಸಲು ಪಾಲಕರು ಮುಂದಾಗಬೇಕು ಎಂದರು.

ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ ಮಾತನಾಡಿ, ಕಿತ್ತೂರು ರಾಣಿ ಚೆನ್ನಮ್ಮ ಒಬ್ಬ ವೀರ ವನಿತೆ. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿ ಇಂದು ಚರಿತ್ರೆಯ ಪುಟಗಳಲ್ಲಿ ಅಜರಾಮರವಾಗಿದ್ದಾರೆ. ಇವರ ಸಾಧನೆ ಸ್ಮರಣೀಯ ಎಂದರು

ನಗರಪಾಲಿಕೆ ಮಾಜಿ ಸದಸ್ಯರಾದ ಪ್ರಮೀಳಾ ಭರತ್, ಜಗದೀಶ್, ಶ್ರೀ ಭುವನೇಶ್ವರಿ ಸೇವಾ ಟ್ರಸ್ಟ್ ಅಧ್ಯಕ್ಷೆ ನಾಗಶ್ರೀ ಸುಚಿಂದ್ರ, ಅಪೂರ್ವ ಸುರೇಶ್, ಅಂಬಾಭವಾನಿ ಸಮಾಜ ಮಹಿಳಾ ಅಧ್ಯಕ್ಷೆ ಸವಿತಾ ಘಾಟ್ಕೆ, ಸಮಾಜ ಸೇವಕರಾದ ವಿದ್ಯಾ, ಮಂಜುನಾಥ್, ವಿಘ್ನೇಶ್ವರ ಭಟ್, ಸುದರ್ಶನ್, ಶ್ರೀನಿವಾಸ್, ವಿನೋದ್ ಅರಸು, ಚರಣ್, ರಂಗನಾಥ, ಗೋಪಿ, ರಾಮು, ಪ್ರವೀಣ್, ಪಾಪಣ್ಣ, ಸುಕನ್ಯಾ, ಗೀತಾ, ಆದರ್ಶ್, ನಾಗೇಶ್ ಇನ್ನಿತರರಿದ್ದರು.

ರಾತ್ರೋರಾತ್ರಿ ನಟ ದರ್ಶನ್‌ನ ಆಸ್ಪತ್ರೆಗೆ ಕರೆದೊಯ್ದು ಎಂಆರ್‌ಐ, ಸಿಟಿ ಸ್ಕ್ಯಾನಿಂಗ್



ಬಳ್ಳಾರಿ, ಅ.23– ರೇಣುಕಾಸ್ವಾಮಿ ಕೊಲೆ ಕೇಸ್ ಆರೋಪಿ ನಟ ದರ್ಶನ್ ಅವರಿಗೆ ತೀವ್ರ ಬೆನ್ನು ನೋವು ಹಿನ್ನೆಲೆಯಲ್ಲಿ ಬಳ್ಳಾರಿ ಜೈಲಿನಿಂದ ರಾತ್ರೋರಾತ್ರಿ ಬಿಮ್ಸ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿ ಎಂಆರ್‌ಐ ಹಾಗೂ ಸಿಟಿ ಸ್ಕ್ಯಾನ್ ಮಾಡಲಾಗಿದ್ದು, ವೈದ್ಯರು ಅಗತ್ಯ ವರದಿಯನ್ನು ಬುಧವಾರ ಜೈಲು ಅಧಿಕಾರಿಗಳಿಗೆ ನೀಡಿದ್ದಾರೆ.

ಬಳ್ಳಾರಿ ಕಾರಾಗೃಹದ ಹೈಸೆಕ್ಯೂರಿಟಿ ಸೆಲ್‌ನಲ್ಲಿರುವ ದರ್ಶನ್ ಅವರಿಗೆ ಕಳೆದ ಕೆಲವು ದಿನಗಳಿಂದ ತೀವ್ರ ಬೆನ್ನುನೋವು ಕಾಡುತ್ತಿತ್ತು. ಬಿಮ್ಸ್ ವೈದ್ಯರ ಸೂಚನೆ ಮೇರೆಗೆ ಸೆಲ್‌ನಲ್ಲಿಯೇ ಫಿಸಿಯೋಥೆರಪಿ ಚಿಕಿತ್ಸೆ ನೀಡಲಾಗುತ್ತಿತ್ತು. ಎಂಆರ್‌ಐ ಸ್ಕ್ಯಾನಿಂಗ್‌ಗೆ ಒಳಗಾಗುವಂತೆ ವೈದ್ಯರು ಸೂಚಿಸಿದ್ದರು.

ಆರಂಭದಲ್ಲಿ ಬಳ್ಳಾರಿಯಲ್ಲಿ ಚಿಕಿತ್ಸೆ ಪಡೆಯಲು ದರ್ಶನ್ ಒಪ್ಪಿಗೆ ಸೂಚಿಸಿರಲಿಲ್ಲ. ಮಂಗಳವಾರ ಜೈಲಿಗೆ ಭೇಟಿ ನೀಡಿದ್ದ ಅವರ ಪತ್ನಿ ವಿಜಯಲಕ್ಷ್ಮಿ ಹಾಗೂ ಕುಟುಂಬದವರೊಂದಿಗೆ ಜೈಲಿನ ಅಧಿಕಾರಿಗಳು ಮಾತನಾಡಿ ದರ್ಶನ್ ಅವರನ್ನು ಸ್ಕ್ಯಾನಿಂಗ್‌ಗೆ ಮನವೊಲಿಸಲಾಯಿತು.

ಜಿಲ್ಲಾಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ನೇತೃತ್ವದ ತಂಡ ಆರೋಗ್ಯ ತಪಾಸಣೆ ಮಾಡಿತು. ಬಳಿಕ ಬಿಮ್ಸ್‌ಗೆ ಸ್ಕ್ಯಾನಿಂಗ್‌ಗೆ ಕರೆದೊಯ್ಯಲಾಯಿತು. ಬಿಮ್ಸ್ ಆಸ್ಪತ್ರೆಯಲ್ಲಿ ಎಂಆರ್‌ಐ ಸ್ಕ್ಯಾನಿಂಗ್‌ಗೆ ಹಾಜರಾದ ದರ್ಶನ್ ಅವರಿಗೆ ರೆಡಿಯೋಲಜಿಸ್ಟ್ ಡಾ.ಸದಾಶಿವ ಗೌಡ ಹಾಗೂ ನ್ಯೂರೊ ಸರ್ಜನ್ ಡಾ.ವಿಶ್ವನಾಥ್ ನೇತೃತ್ವದ ತಂಡ ಸ್ಕ್ಯಾನಿಂಗ್ ಪ್ರಕ್ರಿಯೆ ನಡೆಸಿತು. ಒಂದು ತಾಸು ನಡೆದ ಸ್ಕ್ಯಾನಿಂಗ್ ಪ್ರಕ್ರಿಯೆ ಬಳಿಕ ದರ್ಶನ್ ಅವರನ್ನು ಜೈಲಿನ ಅಧಿಕಾರಿಗಳು ವಾಪಸ್ ಕರೆತಂದರು.

ದರ್ಶನ್‌ನನ್ನು ಜೈಲಿನಿಂದ ಆಸ್ಪತ್ರೆಗೆ ಕರೆತರುತ್ತಿದ್ದಾರೆ ಎಂದು ತಿಳಿದ ಬಳಿಕ ಬಳ್ಳಾರಿ ಸುತ್ತಮುತ್ತ ಅವರ ಅಭಿಮಾನಿಗಳು ಆಸ್ಪತ್ರೆ ಮುಂದೆ ಜಮಾಯಿಸಿದ್ದರು. ಜೈಕಾರ, ಘೋಷಣೆಗಳ ಕೂಗಿದರು. ವಿಡಿಯೋ, ಫೋಟೋ ಕ್ಲಿಕ್ಕಿಸಿಕೊಂಡರು. ಮುಂಜಾಗ್ರತಾ ಕ್ರಮವಾಗಿ ಬಿಮ್ಸ್ ಆಸ್ಪತ್ರೆಯ ಬಳಿ ಹೆಚ್ಚಿನ ಪೊಲೀಸ್ ಭದ್ರತೆಯನ್ನು ನಿಯೋಜಿಸಲಾಗಿತ್ತು.

ಈ ಹಿಂದೆ ಚಿಕಿತ್ಸೆ ನೀಡಿದ್ದ ವೈದ್ಯರು ಶಸ್ತ್ರಚಿಕಿತ್ಸೆ ಅಗತ್ಯ ಇದೆ ಎಂದು ಹೇಳಿದ್ದರು. ಸದ್ಯ ಎಂಆರ್‌ಐ, ಸಿಟಿ ಸ್ಕ್ಯಾನ್ ವರದಿಯನ್ನು ಗೌಪ್ಯವಾಗಿ ಜೈಲಿನ ಅಧಿಕಾರಿಗಳಿಗೆ ಸಲ್ಲಿಸಿದ್ದಾರೆ. ಜೈಲು ಅಧಿಕಾರಿಗಳು ವರದಿ ಸಿದ್ಧಪಡಿಸಿ ಅ.28ರೊಳಗೆ ಕರ್ನಾಟಕ ಹೈಕೋರ್ಟ್‌ಗೆ ಸಲ್ಲಿಸಲಿದ್ದಾರೆ. ಆ ವರದಿ ಆಧರಿಸಿ ನಟನಿಗೆ ಜಾಮೀನು ನೀಡಬೇಕೋ, ಬಳ್ಳಾರಿಯಲ್ಲಿಯೇ ಶಸ್ತ್ರಚಿಕಿತ್ಸೆ ಮಾಡಿಸಬೇಕೋ ಅಥವಾ ಬೆಂಗಳೂರಿಗೆ ಕರೆತಂದು ಚಿಕಿತ್ಸೆ ಕೊಡಿಸಬೇಕೋ ಎಂದು ಕೋರ್ಟ್ ನಿರ್ಧರಿಸಲಿದೆ. ಒಂದು ವೇಳೆ ಜಾಮೀನು ನೀಡಿದರೆ ದೀಪಾವಳಿ ಹಬ್ಬಕ್ಕೆ ದರ್ಶನ್ ಬಿಡುಗಡೆಯಾಗಿ ಬೆಂಗಳೂರಿಗೆ ಆಗಮಿಸಲಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಿವಿಜಿ ಕುರಿತು ನಾಳೆ ನೇರ ಫೋನ್–ಇನ್ ಕಾರ್ಯಕ್ರಮ



ಭವಾನಿ ಲೋಕೇಶ್

ಮೈಸೂರು, ಅ.23– ಜೆಎಸ್‌ಎಸ್ ರೇಡಿಯೋ, ಸಮುದಾಯ ಬಾನುಲಿ ಕೇಂದ್ರವು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮೈಸೂರು ಹಾಗೂ ಆಲೂರು ವೆಂಕಟರಾವ್ ಭಾಷಾ ಕೌಶಲ ಕೇಂದ್ರದ ಸಹಯೋಗದೊಂದಿಗೆ ಕನ್ನಡ ನಾಡು ನುಡಿಗೆ ಕೀರ್ತಿ ತಂದ ಜ್ಞಾನಪೀಠ ಪ್ರಶಸ್ತಿ ಮತ್ತು ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪುರಸ್ಕೃತರ ಕೃತಿ ಮತ್ತು ಕರ್ತೃವಿನ ಪರಿಚಯಾತ್ಮಕ ಸರಣಿ ಕಾರ್ಯಕ್ರಮದಲ್ಲಿ ನಾಳೆ ಅ.25 (ಶುಕ್ರವಾರ) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಿ.ವಿ.ಗುಂಡಪ್ಪ ಮತ್ತು ಅವರ ಕೃತಿಗಳ ಕುರಿತು ನೇರ ಫೋನ್–ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಲೇಖಕಿ, ಕವಯತ್ರಿ ಹಾಗೂ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಗೆಜ್ಜಲಗೆರೆಯಲ್ಲಿರುವ ಮೊರಾರ್ಜಿ ವಸತಿ ಶಾಲೆಯ ಅಡ್ಮಿನ್ ಶ್ರೀಮತಿ ಭವಾನಿ ಲೋಕೇಶ್ ಅವರು ಭಾಗವಹಿಸಲಿದ್ದು, ಸಾಹಿತ್ಯಾಸಕ್ತರು ಮತ್ತು ವಿದ್ಯಾರ್ಥಿಗಳು ನೇರವಾಗಿ ಈ ಕಾರ್ಯಕ್ರಮವನ್ನು ಆಲಿಸಬಹುದು. ನೀವು ಕರೆ ಮಾಡಬಹುದಾದ ದೂರವಾಣಿ ಸಂಖ್ಯೆ: 8296 725912/ 0821–2546563.

ಜೆಎಸ್‌ಎಸ್ ರೇಡಿಯೋವನ್ನು ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ ಆ್ಯಪ್ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಾದರು ಆಲಿಸಬಹುದು ಹಾಗೂ ಈ ವಿಶೇಷ ಸರಣಿ ಕಾರ್ಯಕ್ರಮವನ್ನು ಜೆಎಸ್‌ಎಸ್ ರೇಡಿಯೋ ಕೇಂದ್ರದ ಯುಟ್ಯೂಬ್ ಚಾನಲ್ ಮೂಲಕವೂ ಸಹ ನೇರವಾಗಿ ವೀಕ್ಷಿಸಬಹುದು.

ದೇಶ - ವಿದೇಶ

ಬೈರುತ್ ವೈಮಾನಿಕ ದಾಳಿಯಲ್ಲಿ ನಸ್ರಲ್ಲಾ ಉತ್ತರಾಧಿಕಾರಿ ಹಶೆಮ್ ಸಫಿದ್ದೀನ್ ಹತ್ಯೆ



ಟೆಲ್ ಅವಿವ್: ಇರಾನ್ ಬೆಂಬಲಿತ ಉಗ್ರಗಾಮಿ ಗುಂಪಿನ ಕಮಾಂಡರ್‌ಗಳನ್ನು ಗುರಿಯಾಗಿಸಿಕೊಂಡು 3 ವಾರಗಳ ಹಿಂದೆ ಬೈರುತ್‌ನಲ್ಲಿ ನಡೆಸಿದ ವೈಮಾನಿಕ ದಾಳಿಯಲ್ಲಿ ಹತ್ಯೆಗೀಡಾದ ಹಿಜ್ಬುಲ್ಲಾ ನಾಯಕ ಹಸನ್ ನಸ್ರಲ್ಲಾ ಉತ್ತರಾಧಿಕಾರಿ, ಧರ್ಮಗುರುವನ್ನು ಕೊಂದಿರುವುದಾಗಿ ಇಸ್ರೇಲ್ ಸೇನೆ ಘೋಷಿಸಿದೆ.

ಆದರೆ ಇಸ್ರೇಲ್ ಸೇನೆ ಹೇಳಿರುವ ಹಶೆಮ್ ಸಫಿದ್ದೀನ್‌ನನ್ನು ಕೊಂದಿರುವ ಬಗ್ಗೆ ಹೆಜ್ಬುಲ್ಲಾ ಇಲ್ಲಿಯವರೆಗೆ ಹೇಳಿಕೆ ನೀಡಿಲ್ಲ. ಸರಿಸುಮಾರು ಮೂರು ವಾರಗಳ ಹಿಂದೆ ನಡೆದ ದಾಳಿಯಲ್ಲಿ, ಹಿಜ್ಬುಲ್ಲಾದ ಕಾರ್ಯಕಾರಿ ಮಂಡಳಿಯ ಮುಖ್ಯಸ್ಥ ಹಶೆಮ್ ಸಫೀದ್ದೀನ್ ಮತ್ತು ಹಿಜ್ಬುಲ್ಲಾದ ಗುಪ್ತಚರ ನಿರ್ದೇಶನಾಲಯದ ಮುಖ್ಯಸ್ಥ ಅಲಿ ಹುಸೇನ್ ಹಜಿಮಾ ಇತರ ಹೆಜ್ಬುಲ್ಲಾ ಕಮಾಂಡರ್‌ಗಳೊಂದಿಗೆ ಕೊಲ್ಲಲ್ಪಟ್ಟಿದ್ದಾನೆ ಎಂದು ದೃಢಪಡಿಸುತ್ತೇವೆ ಎಂದು ಇಸ್ರೇಲಿ ಸೇನೆ ಹೇಳಿದೆ.

ಲೆಬನಾನಿನ ರಾಜಧಾನಿಯಲ್ಲಿ ಹಿಜ್ಬುಲ್ಲಾದ ಭದ್ರಕೋಟೆಯಾದ ದಕ್ಷಿಣ ಬೈರುತ್ ಉಪನಗರ ದಹಿಯೆಹ್‌ನಲ್ಲಿರುವ ಹಿಜ್ಬುಲ್ಲಾದ ಮುಖ್ಯ ಗುಪ್ತಚರ ಪ್ರಧಾನ ಕಚೇರಿಯನ್ನು ವಾಯುಪಡೆಯು ಹೊಡೆದಿದೆ. ಆ ಸಮಯದಲ್ಲಿ 25ಕ್ಕೂ ಹೆಚ್ಚು ಹಿಜ್ಬುಲ್ಲಾ ಉಗ್ರಗಾಮಿಗಳು ಅಲ್ಲಿದ್ದರು ಎಂದು ಸೇನೆ ಹೇಳಿದೆ.


ಚೋಟಾ ರಾಜನ್‌ಗೆ ಜಾಮೀನು



ಮುಂಬೈ: ಮಹತ್ವದ ಬೆಳವಣಿಗೆಯಲ್ಲಿ ಭೂಗತ ಪಾತಕಿ ಚೋಟಾ ರಾಜನ್‌ಗೆ ವಿಧಿಸಲಾಗಿದ್ದ ಜೀವಾವಧಿ ಶಿಕ್ಷೆಯನ್ನು ಬಾಂಬೆ ಹೈಕೋರ್ಟ್ ಬುಧವಾರ ಅಮಾನತು ಮಾಡಿದ್ದು, ಅವನಿಗೆ ಜಾಮೀನು ಮಂಜೂರು ಮಾಡಿದೆ.

2001ರಲ್ಲಿ ನಡೆದಿದ್ದ ಹೋಟೆಲ್ ಉದ್ಯಮಿ ಜಯಶೆಟ್ಟಿ ಹತ್ಯೆ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದ ಭೂಗತ ಪಾತಕಿ ಚೋಟಾ ರಾಜನ್, ವಿಶೇಷ ಮೋಕಾ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಸಲ್ಲಿಸಿರುವ ಮೇಲ್ಮನವಿ ತೀರ್ಮಾನವಾಗುವವರೆಗೂ, ಆತನ ಜೀವಾವಧಿ ಶಿಕ್ಷೆಯನ್ನು ಅಮಾನತುಗೊಳಿಸಿರುವ ನ್ಯಾ. ರೇವತಿ ಮೋಹಿತೆ–ಡೇರೆ ಹಾಗೂ ಪೃಥ್ವಿರಾಜ್ ಚವಾಣ್ ಅವರನ್ನೊಳಗೊಂಡ ವಿಭಾಗೀಯ ನ್ಯಾಯಪೀಠವು, ಜಾಮೀನನ್ನು ಮಂಜೂರು ಮಾಡಿದೆ. ಮೇ 30, 2024ರಂದು ವಿಶೇಷ ಮೋಕಾ ನ್ಯಾಯಾಲಯವು ಛೋಟಾ ರಾಜನ್ ಹಾಗೂ ಮತ್ತಿತರರನ್ನು ಅಪರಾಧಿಗಳು ಎಂದು ಘೋಷಿಸಿತ್ತು ಹಾಗೂ ಛೋಟಾ ರಾಜನ್‌ಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಚೋಟಾ ರಾಜನ್‌ಗೆ ಜೀವಾವಧಿ ಶಿಕ್ಷೆ ವಿಧಿಸಿದ್ದ ಎರಡನೇ ಪ್ರಕರಣ ಇದಾಗಿದ್ದು, 2011ರಲ್ಲಿ ನಡೆದಿದ್ದ ಪತ್ರಕರ್ತ ಜ್ಯೋತಿರ್ಮೊಯ್ ಡೇ ಹತ್ಯೆ ಪ್ರಕರಣದಲ್ಲಿ ಆತ ಸೆರೆವಾಸ ಅನುಭವಿಸುತ್ತಿದ್ದಾನೆ.

ಟ್ರಂಪ್ ವಿರುದ್ಧ ನೀಲಿಚಿತ್ರ ತಾರೆಯರ ಅಭಿಯಾನ



ಲಾಸ್ ಏಂಜಲೀಸ್: 'ಹ್ಯಾಂಡ್ಸ್ ಆಫ್ ಮೈ ಪೋರ್ನ್' ಎಂದು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಇತ್ತೀಚಿನ ಚುನಾವಣಾ ಪ್ರಚಾರ ಶುರುವಾಗಿದೆ. ರಿಪಬ್ಲಿಕನ್ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್‌ಗೆ ಮತ ಚಲಾಯಿಸಬೇಡಿ ಎಂದು ಈ ಅಭಿಯಾನ ನಡೆಸಲಾಗುತ್ತಿದೆ. ಅಶ್ಲೀಲ ತಾರೆ ಸ್ಟಾರ್ಮಿ ಡೇನಿಯಲ್ಸ್ ಅವರೊಂದಿಗಿನ ಸಂಪರ್ಕಕ್ಕಾಗಿ ಟ್ರಂಪ್ ಕುಖ್ಯಾತವಾಗಿ ಭಾರಿ ಸದ್ದು ಮಾಡಿದ್ದರು. ಟ್ರಂಪ್ ಚುನಾವಣೆಯಲ್ಲಿ ಗೆದ್ದರೆ ಅಮೆರಿಕದ ಪೋರ್ನ್ ಉದ್ಯಮದ ಸ್ಥಗಿತಕ್ಕೆ ಕಾರಣವಾಗುತ್ತದೆ ಎಂಬ ಆತಂಕ ನೀಲಿ ಚಿತ್ರತಾರೆಯರದ್ದು. ಹೀಗಾಗಿ ತಮ್ಮ ಜೀವನೋಪಾಯಕ್ಕಾಗಿ ಅವರು ಈ ಅಭಿಯಾನವನ್ನು ಪ್ರಾರಂಭಿಸಿದ್ದಾರೆ. ಇದರ ಜಾಹೀರಾತುಗಳಿಗಾಗಿ ಇಲ್ಲಿಯವರೆಗೆ 2 ಲಕ್ಷ ಡಾಲರ್ ಖರ್ಚು ಮಾಡಿದ್ದಾರೆ.

ಅಮೇರಿಕಾದಲ್ಲಿ ಪೋರ್ನ್ ವೀಕ್ಷಿಸುವ ಜನರು ಇನ್ನು ಮುಂದೆಯೂ ಅದನ್ನು ವೀಕ್ಷಿಸಲು ನವೆಂಬರ್ 5ರಂದು ಮತ ಹಾಕುವಂತೆ ಕೇಳುವ ಜಾಹೀರಾತುಗಳನ್ನು ಹಾಕುತ್ತಿದ್ದಾರೆ. ಆದರೆ, ಇದುವರೆಗೂ ಟ್ರಂಪ್ ಪೋರ್ನ್ ಉದ್ಯಮದ ಬಗ್ಗೆ ಯಾವುದೇ ದ್ವೇಷವನ್ನು ಹೊಂದಿಲ್ಲ ಮತ್ತು ಅದನ್ನು ಮುಚ್ಚುವ ಬಗ್ಗೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ.

ಭಾರತ–ಪಾಕಿಸ್ತಾನ ಕರ್ತಾರ್‌ಪುರ ಕಾರಿಡಾರ್ ಒಪ್ಪಂದ ಇನ್ನೂ ಐದು ವರ್ಷ ವಿಸ್ತರಣೆ



ಚಂಡೀಗಢ: ಭಾರತದಿಂದ ಪಾಕಿಸ್ತಾನದ ದರ್ಬಾರ್ ಸಾಹಿಬ್ ಗುರುದ್ವಾರಕ್ಕೆ ತೆರಳುವ ಯಾತ್ರಿಕರ ಅಡೆತಡೆಯಿಲ್ಲದ ಪ್ರಯಾಣ ಖಾತ್ರಿಗೆ ಕರ್ತಾರ್‌ಪುರ– ಕಾರಿಡಾರ್‌ನ ಒಪ್ಪಂದದ ಮಾನ್ಯತೆಯನ್ನು ಐದು ವರ್ಷಗಳವರೆಗೆ ವಿಸ್ತರಿಸಲು ಭಾರತ ಮತ್ತು ಪಾಕಿಸ್ತಾನ ಒಪ್ಪಿಕೊಂಡಿವೆ. ಗುರುದ್ವಾರಕ್ಕೆ ಭೇಟಿ ನೀಡುವ ಪ್ರತಿಯೊಬ್ಬ ಭಾರತೀಯ ಯಾತ್ರಾರ್ಥಿಗಳ ಮೇಲೆ ವಿಧಿಸುವ 20 ಅಮೆರಿಕನ್ ಡಾಲರ್ ಸೇವಾ ಶುಲ್ಕವನ್ನು ಪಾಕಿಸ್ತಾನ ರದ್ದು ಮಾಡುವಂತೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಪುನರುಚ್ಚರಿಸಿದೆ. ಕರ್ತಾರ್‌ಪುರ ಸಾಹಿಬ್ ಕಾರಿಡಾರ್‌ನ ಒಪ್ಪಂದದ ಮಾನ್ಯತೆಯನ್ನು ಇನ್ನೂ 5 ವರ್ಷಗಳವರೆಗೆ ವಿಸ್ತರಿಸಲು ರಾಜತಾಂತ್ರಿಕ ಮಾರ್ಗಗಳ ಮೂಲಕ ಭಾರತ ಮತ್ತು ಪಾಕಿಸ್ತಾನದ ನಡುವೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಕರ್ತಾರ್‌ಪುರ ಸಾಹಿಬ್ ಕಾರಿಡಾರ್ ಮೂಲಕ ಪಾಕಿಸ್ತಾನದ ನರೋವಾಲ್‌ನ ಗುರುದ್ವಾರ ದರ್ಬಾರ್ ಸಾಹಿಬ್ ಕರ್ತಾರ್‌ಪುರಕ್ಕೆ ಭಾರತದಿಂದ ಯಾತ್ರಿಕರ ಭೇಟಿಗೆ ಅನುಕೂಲವಾಗುವಂತೆ ಅ.24, 2019ರಂದು 5 ವರ್ಷಗಳ ಅವಧಿಗೆ ಉಭಯ ದೇಶಗಳ ನಡುವೆ ಒಪ್ಪಂದವಾಗಿತ್ತು.

ಪಾಕ್‌ನಲ್ಲಿ ಐತಿಹಾಸಿಕ ಹಿಂದೂ ದೇಗುಲದ ಪುನರ್ ನಿರ್ಮಾಣ

ಲಾಹೋರ್ (ಪಾಕಿಸ್ತಾನ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಇರುವ ಬಾವೊಲಿ ಸಾಹಿಬ್ ಮಂದಿರವನ್ನು ಪಾಕಿಸ್ತಾನ ಸರ್ಕಾರ ಪುನರ್ ನಿರ್ಮಾಣ ಮಾಡಲು ಮುಂದಾಗಿದೆ. ಈ ದೇವಸ್ಥಾನದ ಪುನರ್ ನಿರ್ಮಾಣ ಆಗಬೇಕು ಎಂಬುದು ಇಲ್ಲಿನ ಹಿಂದೂಗಳ ಬಹುಕಾಲದ ಬೇಡಿಕೆ ಆಗಿತ್ತು. ಈ ಮಂದಿರದ ಪುನರ್ ನಿರ್ಮಾಣಕ್ಕೆ 1 ಕೋಟಿ ರೂ. ಅನುದಾನವನ್ನು ಸರ್ಕಾರ ಎತ್ತಿಟ್ಟಿದೆ. ದಿ ಇವ್ಯಾಕ್ಯೂ ಟ್ರಸ್ಟ್ ಪ್ರಾಪರ್ಟಿ ಬೋರ್ಡ್ (ಇಟಿಪಿಬಿ) ಈ ಕಾಮಗಾರಿಯ ಹೊಣೆ ಹೊತ್ತಿದೆ. ಪಾಕಿಸ್ತಾನದ ಧಾರ್ಮಿಕ ಅಲ್ಪಸಂಖ್ಯಾತರ ಪೂಜಾ ಸ್ಥಳಗಳು ಹಾಗೂ ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಹೋದವರು ಬಿಟ್ಟು ಹೋಗಿರುವ ಮಾಲೀಕತ್ವ ಇಲ್ಲದ ಆಸ್ತಿಗಳ ನಿರ್ವಹಣೆ ಹೊಣೆಯನ್ನು ಈ ಮಂಡಳಿ ಹೊತ್ತಿದೆ. ಈ ಮಂಡಳಿಯು ಪಾಕಿಸ್ತಾನದ ಸಾಂವಿಧಾನಿಕ ಸ್ಥಾನಮಾನ ಹೊಂದಿರುವ ಮಂಡಳಿ ಆಗಿದ್ದು, ತನ್ನ ಸ್ವತ್ತಿನಿಂದ ಬರುವ ಆದಾಯದಿಂದ ದೇಗುಲ ನಿರ್ಮಾಣ ಹಾಗೂ ಮಾಲೀಕತ್ವ ಇಲ್ಲದ ಆಸ್ತಿಗಳ ನಿರ್ವಹಣೆ ಮಾಡುತ್ತದೆ. ಇದೀಗ ಇದೇ ಟ್ರಸ್ಟ್ ಬಾವೊಲಿ ಸಾಹಿಬ್ ಮಂದಿರ ಪುನರ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದೆ. ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ರಾವಿ ನದಿ ಪಶ್ಚಿಮ ತೀರದಲ್ಲಿ ಇರುವ ನರೋವಾಲ್ ಜಿಲ್ಲೆಯ ಝಫರ್‌ವಾಲ್ ಪಟ್ಟಣದಲ್ಲಿ ಈ ದೇಗುಲ ಇದೆ.

ನಾಳೆಯಿಂದ ಮ್ಯಾನ್ಯುವೆಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆ

● ಕಾಲಮಿತಿಯಲ್ಲಿ ಮಾಹಿತಿ ಸಂಗ್ರಹಿಸಿ ● ಅಧಿಕಾರಿಗಳಿಗೆ ಡಿಸಿ ವೆಂಕಟ ರಾಜಾ ನಿರ್ದೇಶನ



ಮಡಿಕೇರಿ ಜಿಲ್ಲಾಧಿಕಾರಿ ವೆಂಕಟ ರಾಜಾ ಮ್ಯಾನ್ಯುವೆಲ್ ಸ್ಕ್ಯಾವೆಂಜರ್ ಸಮೀಕ್ಷೆ ಸಂಬಂಧ ಮಾಹಿತಿ ಪಡೆದರು.

> "ತಮ್ಮ ವ್ಯಾಪ್ತಿಯಲ್ಲಿ ಸ್ಥಳೀಯ ಮಟ್ಟದಲ್ಲಿ ಹೆಚ್ಚಿನ ಮಾಹಿತಿ ನೀಡುವ ಜೊತೆಗೆ ಶೌಚಾಲಯ ಹಾಗೂ ಸ್ಕ್ಯಾವೆಂಜರ್‌ಗಳ ಅರ್ಜಿಯನ್ನು ನಮಸ್ತೆ ಪೋರ್ಟಲ್‌ನಲ್ಲಿ ನಮೂದಿಸಲು ಕ್ರಮವಹಿಸಬೇಕು.
>
> –ಶೇಖರ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ

ಮಡಿಕೇರಿ, ಅ.23–ಕೊಡಗು ಜಿಲ್ಲೆಯಲ್ಲಿ ಅನೈರ್ಮಲ್ಯ ಶೌಚಾಲಯ ಹಾಗೂ ಮ್ಯಾನ್ಯುವೆಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆ ಅ.25 ರಿಂದ ನ.3ರವರೆಗೆ ನಡೆಯಲಿದ್ದು, ಸರ್ವೋಚ್ಚ ನ್ಯಾಯಾಲಯ ನಿರ್ದೇಶನ ಹಾಗೂ ಸರ್ಕಾರದ ಮಾರ್ಗಸೂಚಿಯಂತೆ ಸಮೀಕ್ಷೆ ಕಾರ್ಯವನ್ನು ವ್ಯವಸ್ಥಿತವಾಗಿ ನಡೆಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ವೆಂಕಟ ರಾಜಾ ನಿರ್ದೇಶಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಮ್ಯಾನ್ಯುವೆಲ್ ಸ್ಕ್ಯಾವೆಂಜರ್ ಸಮೀಕ್ಷೆ ಸಂಬಂಧ ಮಾಹಿತಿ ಪಡೆದು ಮಾತನಾಡಿದ ಅವರು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅನೈರ್ಮಲ್ಯ ಶೌಚಾಲಯ ಹಾಗೂ ಮ್ಯಾನ್ಯುವೆಲ್ ಸ್ಕ್ಯಾವೆಂಜರ್ ಸಮೀಕ್ಷೆ ನಡೆಸಿ ಕಾಲಮಿತಿಯಲ್ಲಿ ನಿಖರ ಮಾಹಿತಿ ಒದಗಿಸುವಂತೆ ಸೂಚಿಸಿದರು.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್ ಮಾತನಾಡಿ, ಸರ್ವೋಚ್ಚ ನ್ಯಾಯಾಲಯ ರಿಟ್ ಅರ್ಜಿ ತೀರ್ಪಿನ ಅನ್ವಯ ರಾಜ್ಯದಲ್ಲಿ ಅನೈರ್ಮಲ್ಯ ಶೌಚಾಲಯ ಹಾಗೂ ಸ್ಕ್ಯಾವೆಂಜರ್‌ಗಳ ಸಮೀಕ್ಷೆ ಕೈಗೊಂಡು ಕೇಂದ್ರ ಸರ್ಕಾರದ 'ನಮಸ್ತೆ ಪೋರ್ಟಲ್'ನ ಎಂಎಸ್ ಸರ್ವೇ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಬೇಕಿದೆ ಎಂದು ಸೂಚಿಸಿದರು.

ಅ.25ರಿಂದ ಸಮೀಕ್ಷೆ ಕಾರ್ಯ ಕೈಗೊಳ್ಳಲಾಗುವುದು. ಈ ಸಂಬಂಧ ನಗರಾಭಿವೃದ್ಧಿ, ಪೌರಾಡಳಿತ ಹಾಗೂ ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯ ಅಧಿಕಾರಿಗಳು ಸಹಕರಿಸಬೇಕು. ಸಮೀಕ್ಷೆ ಅರ್ಜಿ ಮಾನ್ಯತೆಯನ್ನು ಪರಿಶೀಲಿಸಿ ವ್ಯಾಲಿಡೇಟರ್ ಲಾಗ್‌ಇನ್‌ಗೆ ಕಳುಹಿಸಲು ಕ್ರಮವಹಿಸಬೇಕು. ಹಾಗೆಯೇ ಸಮೀಕ್ಷಾ ಲಾಗಿನ್‌ನಿಂದ ಬಂದ ಅರ್ಜಿಯನ್ನು ಕೂಲಂಕಷವಾಗಿ ಪರಿಶೀಲಿಸಿ, ಖಾತರಿಪಡಿಸಿಕೊಂಡು ಜಿಲ್ಲಾ ವ್ಯಾಲಿಡೇಟರ್ ಲಾಗಿನ್‌ಗೆ ಕಳುಹಿಸಬೇಕು. ಸಮೀಕ್ಷೆ ತಪ್ಪಾಗಿದ್ದಲ್ಲಿ ತಿರಸ್ಕರಿಸಬೇಕಿದೆ ಎಂದರು.

ನಗರ ಪ್ರದೇಶ ವ್ಯಾಪ್ತಿ ಸಮೀಕ್ಷೆಗಾರರಾಗಿ ನಗರ ಸ್ಥಳೀಯ ಸಂಸ್ಥೆ ಆರೋಗ್ಯಾಧಿಕಾರಿಗಳು ಪರಿಶೀಲನಾ ಅಧಿಕಾರಿಗಳಾಗಿ ಸಹಾಯಕ ಅಭಿಯಂತರರು, ವ್ಯಾಲಿಡೇಟರಾಗಿ ಪಟ್ಟಣ ಪಂಚಾಯಿತಿ ಹಾಗೂ ಪುರಸಭೆ ಮುಖ್ಯಾಧಿಕಾರಿಗಳು, ಜಿಲ್ಲಾ ವ್ಯಾಲಿಡೇಟರ್ ಆಗಿ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕರು ಕಾರ್ಯನಿರ್ವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಮಿತಿ ಸದಸ್ಯ ರಂಗಸ್ವಾಮಿ ಮಾತನಾಡಿ, ಶೌಚಾಲಯ ಹಾಗೂ ಸ್ಕ್ಯಾವೆಂಜರ್ ಪದ್ಧತಿ ಇನ್ನೂ ಸಹ ಜೀವಂತವಾಗಿದೆ. ಈ ಸಂಬಂಧ ಪರಿಶೀಲಿಸಿ ಅರ್ಹರನ್ನು ಗುರುತಿಸುವಂತೆ ಮನವಿ ಮಾಡಿದರು. ಮತ್ತೊಬ್ಬ ಸದಸ್ಯ ಆರ್ಮುಗಂ ಮಾತನಾಡಿ, ಶೌಚಾಲಯ ಹಾಗೂ ಸ್ಕ್ಯಾವೆಂಜರ್ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯ ನಿರ್ದೇಶನದಂತೆ ಕ್ರಮವಹಿಸಬೇಕು ಎಂದರು.

ಸದಸ್ಯ ಓಬಳಿ, ಜಿಪಂ ಉಪಕಾರ್ಯದರ್ಶಿ ಧನರಾಜ್, ನಗರಾಭಿವೃದ್ಧಿ ಯೋಜನಾ ಶಾಖೆ ನಿರ್ದೇಶಕ ಬಿ.ಬಸಪ್ಪ, ಡಿವೈಎಸ್‌ಪಿ ರವಿ, ತಾಪಂ ಇಓ ಅಪ್ಪಣ್ಣ, ಪರಮೇಶ್ ಕುಮಾರ್, ಜಿಪಂ ಸಹಾಯಕ ನಿರ್ದೇಶಕ ಶ್ರೀನಿವಾಸ್, ಪೌರಾಯುಕ್ತ ಎಚ್.ಆರ್.ರಮೇಶ್, ಪುರಸಭೆ ಮುಖ್ಯಾಧಿಕಾರಿಗಳಾದ ಕೃಷ್ಣಪ್ರಸಾದ್, ಪಿ.ಕೆ.ನಾಚಪ್ಪ, ರೀತುಸಿಂಗ್ ಇತರರು ಇದ್ದರು.

ಪೊನ್ನಂಪೇಟೆ ತಾಲೂಕು ಪತ್ರಕರ್ತರ ಸಂಘ ಅಸ್ತಿತ್ವಕ್ಕೆ

ನೂತನ ಅಧ್ಯಕ್ಷರಾಗಿ ಕಿರಿಯಮಾಡ ರಾಜ್ ಕುಶಾಲಪ್ಪ ಆಯ್ಕೆ



ಪೊನ್ನಂಪೇಟೆ ತಾಲೂಕು ಪತ್ರಕರ್ತರ ಸಂಘದ ಸ್ಥಾಪಕ ಅಧ್ಯಕ್ಷರಾಗಿ ಕಿರಿಯಮಾಡ ರಾಜ್ ಕುಶಾಲಪ್ಪ ಅವಿರೋಧ ಆಯ್ಕೆಯಾಗಿದ್ದಾರೆ.

ಗೋಣಿಕೊಪ್ಪ ಅ.23– ಪೊನ್ನಂಪೇಟೆ ತಾಲೂಕು ಪತ್ರಕರ್ತರ ಸಂಘದ ಸ್ಥಾಪಕ ಅಧ್ಯಕ್ಷರಾಗಿ ಕಿರಿಯಮಾಡ ರಾಜ್ ಕುಶಾಲಪ್ಪ ಅವಿರೋಧ ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ಪೊನ್ನಂಪೇಟೆ ತಾಲೂಕಿನ ವಿನೋದ್ ಮೂಡಗದ್ದೆ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಚಮ್ಮಟ್ಟೀರ ಪ್ರವೀಣ್ ಉತ್ತಪ್ಪ, ಖಜಾಂಚಿಯಾಗಿ ಐನಂಡ ಬೋಪಣ್ಣ ಸಹ ಕಾರ್ಯದರ್ಶಿ ಎಸ್.ಎಸ್.ಶೈಲೇಂದ್ರ, ಸಂಘಟನಾ ಕಾರ್ಯದರ್ಶಿಯಾಗಿ ಎಂ.ಕೆ.ಅರುಣ್ ಕುಮಾರ್, ನಿರ್ದೇಶಕರಾಗಿ ಟಿ.ಎನ್.ಗೋವಿಂದಪ್ಪ, ಟಿ.ಎಲ್.ಶ್ರೀನಿವಾಸ್, ಸಿ.ಡಿ.ಚಂಪಾ, ಎಸ್.ಎಲ್.ಶಿವಣ್ಣ, ವಿಜು ಆಯ್ಕೆಯಾದರು.

ಪೊನ್ನಂಪೇಟೆಯ ಗೋಲ್ಡನ್ ಗೇಟ್ ಹೋಟೇಲ್ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಕೊಡಗು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಮುರುಳೀಧರ್, ಜಿಲ್ಲಾ ಉಪಾಧ್ಯಕ್ಷ ಜಿ.ವಿ.ರವಿಕುಮಾರ್, ಸಂಘಟನಾ ಜಿಲ್ಲಾ ಕಾರ್ಯದರ್ಶಿ ಸುರೇಶ್ ಬಿಳಿಗೇರಿ, ಜಿಲ್ಲಾ ಸಂಘದ ಸಲಹೆಗಾರ ಶ್ರೀಧರ್ ನೆಲ್ಲಿತ್ತಾಯ, ಜಿಲ್ಲಾ ಸಂಘ ನಿರ್ದೇಶಕ ಪ್ರವೀಣ್ ಟಿ.ಜೆ. ಹಾಗೂ ವೀರಾಜಪೇಟೆ ತಾಲೂಕು ಅಧ್ಯಕ್ಷ ಮಧೋಶ್ ಪೂವಯ್ಯ ಸಮ್ಮುಖದಲ್ಲಿ ಪೊನ್ನಂಪೇಟೆ ತಾಲೂಕು ನೂತನ ಪತ್ರಕರ್ತರ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಕಿತ್ತೂರು ರಾಣಿ ಚೆನ್ನಮ್ಮ ಜೀವನ ಚರಿತ್ರೆ ತಿಳಿಯಿರಿ



ಮಡಿಕೇರಿ ಗಾಂಧಿ ಭವನದಲ್ಲಿ ನಡೆದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ವೆಂಕಟ ರಾಜಾ ಉದ್ಘಾಟಿಸಿದರು.

ಮಡಿಕೇರಿ: ಕಿತ್ತೂರು ರಾಣಿ ಚೆನ್ನಮ್ಮ ಸೇರಿದಂತೆ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆ ಎಲ್ಲರೂ ತಿಳಿದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ವೆಂಕಟ ರಾಜಾ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಡೆದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 1824ರಲ್ಲಿ ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿ ಈಗ 200 ವರ್ಷ ಆಗಿದೆ. ಅವರ ಜೊತೆ ಸಂಗೊಳ್ಳಿರಾಯಣ್ಣ ಸಹ ಹೋರಾಡಿದ್ದರು. ನಂತರ ಝಾನ್ಸಿ ರಾಣಿ ಲಕ್ಷ್ಮಿಬಾಯಿ ಹೋರಾಡಿದ್ದರು. ಪ್ರತಿದಿನ ಅವರ ನೆನಪಷ್ಟೇ ಅಲ್ಲದೆ ಅವರ ಜೀವನ ಸಂದೇಶ ಪಾಲಿಸಬೇಕು ಎಂದು ಹೇಳಿದರು.

ಮದೆಮಹೇಶ್ವರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಸಿದ್ದರಾಜು ಬೆಳ್ಳಯ್ಯ ಮಾತನಾಡಿ, ರಾಣಿ ಚೆನ್ನಮ್ಮ ಭರತ ಖಂಡದ ಸ್ವಾಭಿಮಾನದ ಪ್ರತೀಕ. ಅವರು ದೇಶಕ್ಕೆ ದಿಕ್ಸೂಚಿ ತೋರಿಸಿದ್ದಾರೆ. ಈ ದಿಕ್ಸೂಚಿಯಡಿ ನಾವೆಲ್ಲರೂ ನಡೆಯಬೇಕು. ಹುಟ್ಟು ಆಕಸ್ಮಿಕ, ಸಾವು ಖಚಿತ ಎಂಬಂತೆ ಬದುಕು ಹೇಗಿರಬೇಕು ಎಂದರೆ ನಮ್ಮ ಬಗ್ಗೆ ಬೇರೆಯವರು ಬರೆದಿಡಬೇಕು ಎಂದು ತಿಳಿಸಿದರು.

ಬ್ಲಾಸಂ ಶಾಲೆ ಮುಖ್ಯ ಶಿಕ್ಷಕಿ ಅನಸೂಯ ಮಾತನಾಡಿದರು. ಕಾರ್ಯಕ್ರಮದಲ್ಲಿ ಅನೂಪ್ ಮಾದಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ದೊಡ್ಡೇಗೌಡ, ಕುಮಾರ್, ಭವ್ಯ, ಮಣಜೂರು ಮಂಜುನಾಥ್ ಇದ್ದರು.

ಶೇಷಪ್ಪ ಪೂಜಾರಿ ನಿಧನ



ನಾಪೋಕ್ಲು, ಅ.23–ಸಮೀಪದ ಅಜ್ಜಿಮುಟ್ಟ ಗ್ರಾಮದ ಶೇಷಪ್ಪ ಪೂಜಾರಿ(74) ಮಂಗಳವಾರ ನಿಧನರಾದರು. ಮೃತರು ಪತ್ನಿ ಯಶೋಧಾ, ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬುಧವಾರ ನಾಪೋಕ್ಲುವಿನ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಬೃಹಸ್ಪತಿ ನಿಧನ



ನಾಪೋಕ್ಲು, ಅ.23–ಸಮೀಪದ ಬೇತು ಗ್ರಾಮದ ದಿವಂಗತ ರಾಮಣ್ಣ ಪೂಜಾರಿ ಅವರ ಪತ್ನಿ ಬೃಹಸ್ಪತಿ (81) ಮಂಗಳವಾರ ನಿಧನರಾದರು.

ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಬುಧವಾರ ಬೇತು ಗ್ರಾಮದ ಮೃತರ ಸ್ವಗೃಹ ಆವರಣದಲ್ಲಿ ಅಂತ್ಯಕ್ರಿಯೆ ನಡೆಯಿತು.

ಕೇಟೋಳಿರ ಬಾಬಿ ದೇವಯ್ಯ



ನಾಪೋಕ್ಲು, ಅ.23– ಸಮೀಪದ ಕೊಳಕೇರಿ ಗ್ರಾಮದ ಕೇಟೋಳಿರ ಬಾಬಿ ದೇವಯ್ಯ (78) ಮಂಗಳವಾರ ನಿಧನರಾದರು.

ಮೃತರು ಬಂಧು–ಬಳಗ ಅಗಲಿದ್ದಾರೆ. ಬುಧವಾರ ಕೊಳಕೇರಿ ಗ್ರಾಮದ ಕುಟುಂಬದ ಐನ್ ಮನೆಯಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.

ನ.30ರಿಂದ ಲೆಜೆಂಡ್ಸ್ ಫುಟ್‌ಬಾಲ್ ಪಂದ್ಯಾವಳಿ



ಸುದ್ದಿಗೋಷ್ಠಿಯಲ್ಲಿ ವಿ.ಲೆಜೆಂಡ್ಸ್ ಸಂಸ್ಥೆ ಅಧ್ಯಕ್ಷ ಎಲ್.ಜಿ.ಭಾಸ್ಕರ್ ಮಾತನಾಡಿದರು.

ವಿರಾಜಪೇಟೆ, ಅ.23–ಐವತ್ತು ವರ್ಷ ಮೇಲ್ಪಟ್ಟ ಹಿರಿಯ ಫುಟ್‌ಬಾಲ್ ಆಟಗಾರರಿಗೆ ನ.30 ಮತ್ತು ಡಿ.1ರಂದು ವಿ.ಲೆಜೆಂಡ್ಸ್ ಸಂಸ್ಥೆ ವತಿಯಿಂದ ವಿರಾಜಪೇಟೆ ತಾಲೂಕು ಮೈದಾನದಲ್ಲಿ ಹೊನಲು ಬೆಳಕಿನ ಲೆಜೆಂಡ್ಸ್ ಫುಟ್‌ಬಾಲ್ ಪಂದ್ಯಾವಳಿಯನ್ನು ಪ್ರಥಮ ಬಾರಿಗೆ ಆಯೋಜಿಸಲಾಗಿದೆ ಎಂದು ಸಂಸ್ಥೆ ಅಧ್ಯಕ್ಷ ಎಲ್.ಜಿ.ಭಾಸ್ಕರ್ ತಿಳಿಸಿದರು.

ಪಟ್ಟಣದ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಫುಟ್‌ಬಾಲ್ ಆಟ ಹೆಚ್ಚಾಗಿದೆ. ಹಿರಿಯ ಕ್ರೀಡಾಪಟುಗಳು ಆಟದಲ್ಲಿ ಭಾಗವಹಿಸುವ ಉತ್ಸಾಹವಿದ್ದರೂ ಅವಕಾಶ ಮತ್ತು ವಯಸ್ಸಿನ ದೃಷ್ಟಿಯಿಂದ ಕ್ರೀಡೆಯಿಂದ ವಂಚಿತರಾಗುತ್ತಿದ್ದಾರೆ. ಆದ್ದರಿಂದ 50 ವರ್ಷ ಮೇಲ್ಪಟ್ಟ ಆಟಗಾರರನ್ನು ಹುರಿದುಂಬಿಸುವ ನಿಟ್ಟಿನಲ್ಲಿ ವಿರಾಜಪೇಟೆ ಪಟ್ಟಣದ 6 ಕಿ.ಮೀ. ಪರಿಮಿತಿಯಲ್ಲಿರುವ ಆಟಗಾರರಿಗೆ ಫುಟ್‌ಬಾಲ್ ಪಂದ್ಯಾವಳಿ ನಡೆಸಲು ಉದ್ದೇಶಿಸಲಾಗಿದೆ ಎಂದರು.

ಸಂಸ್ಥೆ ಉಪಾಧ್ಯಕ್ಷ ಸಿ.ಕೆ.ಪೃಥ್ವಿನಾಥ್ ಮಾತನಾಡಿ, ವಿ.ಲೆಜೆಂಡ್ಸ್ ಸಂಸ್ಥೆಯಿಂದ ಇದೊಂದು ಪ್ರಯತ್ನವಾಗಿದೆ. ನಮ್ಮಲ್ಲಿ ಹಲವಾರು ಉತ್ತಮ ಫುಟ್‌ಬಾಲ್ ಆಟಗಾರರಿದ್ದಾರೆ. ಹಿರಿಯ ಆಟಗಾರರ ಕಾಲ್ಚಳಕ ಹೇಗಿತ್ತು ಎಂಬುದನ್ನು ಇಂದಿನ ಯುವ ಆಟಗಾರರಿಗೆ ತೋರಿಸುವ ನಿಟ್ಟಿನಲ್ಲಿ ಪಂದ್ಯಾವಳಿ ಆಯೋಜಿಸಲಾಗಿದೆ. ಕೇವಲ 8 ತಂಡಗಳಿಗೆ ಅವಕಾಶ ನೀಡಲಾಗುವುದು. ಈಗಾಗಲೇ 6 ತಂಡಗಳು ಹೆಸರು ನೋಂದಾಯಿಸಿಕೊಂಡಿದ್ದು, ಹೆಸರು ನೋಂದಾಯಿಸಲು ನ.10 ಕೊನೆ ದಿನವಾಗಿದೆ. ಹೆಚ್ಚಿನ ವಿವರಗಳಿಗೆ ಮೊ.ಸಂ: 9880502631, 9972959156 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಖಜಾಂಚಿ ಮರ್ವಿನ್ ಲೋಬೋ, ಕಾರ್ಯದರ್ಶಿ ಬಿ.ಬಿ.ಪ್ರಕಾಶ್, ಸಹಕಾರ್ಯದರ್ಶಿ ಜಿ.ಜಿ.ಮೋಹನ್, ಸಹ ಖಜಾಂಚಿ ಎಂ.ಪಿ.ಅಲ್ತಾಫ್, ನಿರ್ದೇಶಕರಾದ ವಿ.ಜನಾರ್ಧನ್, ಕೆ.ಎನ್.ಉಪೇಂದ್ರ, ಡಿ.ಜೆ.ಕೇಶವ್ ಕುಮಾರ್, ಜಿಮ್ಮಿ ಉಪಸ್ಥಿತರಿದ್ದರು.

ಕಿತ್ತೂರು ರಾಣಿ ಚೆನ್ನಮ್ಮ ಸಾಹಸ ಎಲ್ಲರಿಗೂ ಸ್ಫೂರ್ತಿ



ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಯಂತಿಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಭಾವಚಿತ್ರಕ್ಕೆ ಡಿಸಿ ಶಿಲ್ಪನಾಗ್, ಎಡಿಸಿ ಗೀತಾ ಹುಡೇದ ನಮನ ಸಲ್ಲಿಸಿದರು.

ಚಾಮರಾಜನಗರ, ಅ.23–ಬ್ರಿಟಿಷರ ವಿರುದ್ಧ ದೇಶದ ರಕ್ಷಣೆಗಾಗಿ ಕೆಚ್ಚೆದೆಯಿಂದ ಹೋರಾಡಿದ ವೀರನಾರಿ ಕಿತ್ತೂರು ರಾಣಿ ಚೆನ್ನಮ್ಮ ಅವರ ಧೈರ್ಯ, ಸಾಹಸ ಹಾಗೂ ಆದರ್ಶಗಳು ನಮ್ಮೆಲ್ಲರಿಗೂ ಸ್ಫೂರ್ತಿಯಾಗಿವೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕ ಹಾಗೂ ಕನ್ನಡಕ್ಕೆ ಕಿತ್ತೂರು ರಾಣಿ ಚೆನ್ನಮ್ಮ ಅವರ ಕೊಡುಗೆ ಅಪಾರ. ದೇಶ ಪ್ರೇಮಿಯಾಗಿದ್ದ ರಾಣಿ ಚೆನ್ನಮ್ಮನವರು ನಾಡು, ನುಡಿ ಬಗ್ಗೆ ಗೌರವ ಹೊಂದಿದ್ದರು. ಜನರ ರಕ್ಷಣೆಗಾಗಿ ತನ್ನ ಪ್ರಾಣದ ಹಂಗು ತೊರೆದು ಬ್ರಿಟಿಷರ ವಿರುದ್ಧ ಹೋರಾಡಿದ ದಿಟ್ಟ ಮಹಿಳೆ ಚೆನ್ನಮ್ಮ ಅವರ ಧೈರ್ಯ, ಶೌರ್ಯ, ಸಾಹಸಗಾಥೆ ಎಲ್ಲಾ ಮಹಿಳೆಯರಿಗೂ ಮಾದರಿಯಾಗಿದೆ ಎಂದರು.

ರಾಣಿ ಚೆನ್ನಮ್ಮ ಆದರ್ಶಗಳನ್ನು ಪ್ರತಿಯೊಬ್ಬರು ಪಾಲಿಸುವ ಮೂಲಕ ಸರ್ಕಾರಿ ನೌಕರರು ಜನಸಾಮಾನ್ಯರಿಗೆ ಸೌಲಭ್ಯ ದೊರಕಿಸುವ ನಿಟ್ಟಿನಲ್ಲಿ ಉತ್ತಮ ಆಡಳಿತದ ವಾತಾವರಣ ಕಲ್ಪಿಸಬೇಕು. ನಿಗದಿತ ಗುರಿ ಸಾಧನೆಗೆ ಎಲ್ಲರೂ ಕಾರ್ಯೋನ್ಮುಖರಾಗಬೇಕು. ಅದೇ ರಾಣಿ ಚೆನ್ನಮ್ಮ ಅವರಿಗೆ ನಾವು ಸಲ್ಲಿಸುವ ಗೌರವವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ತಹಸೀಲ್ದಾರ್ ಗಿರಿಜ, ಜಿಪಂ ಸಹಾಯಕ ಕಾರ್ಯದರ್ಶಿ ಶ್ರೀಕಂಠ ರಾಜೇ ಅರಸ್, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ರಾಜು, ಜಿಲ್ಲಾಮಟ್ಟದ ಅಧಿಕಾರಿಗಳು ಇತರರು ಉಪಸ್ಥಿತರಿದ್ದರು.

ಟಿ.ಜಯಲಕ್ಷ್ಮಿ ಅತ್ಯುತ್ತಮ ಶಿಕ್ಷಕಿ...



ಬೆಂಗಳೂರಿನ ಮಾನ್ಯತೆ ಪಡೆದ ಅನುದಾನ ರಹಿತ ಖಾಸಗಿ ಶಾಲೆಗಳ ಸಂಘದ ವತಿಯಿಂದ ಬೇಗೂರಿನ ಆಕ್ಸ್‌ಫರ್ಡ್ ಪಬ್ಲಿಕ್ ಶಾಲೆ ಮುಖ್ಯ ಶಿಕ್ಷಕಿ ಟಿ.ಜಯಲಕ್ಷ್ಮಿ ಅವರಿಗೆ ರಾಜ್ಯ ಮಟ್ಟದ ಅತ್ಯುತ್ತಮ ಖಾಸಗಿ ಶಾಲಾ ಶಿಕ್ಷಕರ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅರಿಶಿಣವನ್ನು ಲಾಭದಾಯಕ ಬೆಳೆಯಾಗಿಸಿಕೊಳ್ಳಿ

● ರೈತರಿಗೆ ಕೆಪೆಕ್ ಅಧ್ಯಕ್ಷ ಹರೀಶ್ ಸಲಹೆ ● ಹರದನಹಳ್ಳಿ ಕೆವಿಕೆಯಲ್ಲಿ ಬಲವರ್ಧನೆ ಕಾರ್ಯಕ್ರಮ



ಹರದನಹಳ್ಳಿ ಕೆವಿಕೆ ತರಬೇತಿ ಸಭಾಂಗಣದಲ್ಲಿ ಆಯೋಜಿಸಿರುವ 'ಅರಿಶಿಣ ಮೌಲ್ಯ ಹೆಚ್ಚಿಸುವುದು–ಸಂಸ್ಕರಣೆ ಹಾಗೂ ರಫ್ತು ಅವಕಾಶಗಳು' ಕುರಿತ ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮದಲ್ಲಿ ಬಿ.ಎಚ್.ಹರೀಶ್ ಮಾತನಾಡಿದರು.

ಚಾಮರಾಜನಗರ, ಅ.23–ವಾಣಿಜ್ಯ ಬೆಳೆಯಾಗಿರುವ ಅರಿಶಿಣವನ್ನು ಲಾಭದಾಯಕ ಬೆಳೆಯಾಗಿ ಪರಿವರ್ತಿಸಿಕೊಂಡು ರೈತರು ಆರ್ಥಿಕವಾಗಿ ಸಬಲರಾಗಬೇಕು ಎಂದು ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ (ಕೆಪೆಕ್) ಅಧ್ಯಕ್ಷ ಬಿ.ಎಚ್.ಹರೀಶ್ ಸಲಹೆ ನೀಡಿದರು.

ತಾಲೂಕಿನ ಹರದನಹಳ್ಳಿ ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ)ದ ತರಬೇತಿ ಸಭಾಂಗಣದಲ್ಲಿ ಬುಧವಾರ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ, ಬೆಂಗಳೂರಿನ ಭಾರತೀಯ ತೋಟಗಾರಿಕಾ ವ್ಯವಸ್ಥಾಪಕ ಸಂಸ್ಥೆ ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಸಹಯೋಗದಲ್ಲಿ ಎರಡು ದಿನ ಆಯೋಜಿಸಿರುವ 'ಅರಿಶಿಣ ಮೌಲ್ಯ ಹೆಚ್ಚಿಸುವುದು–ಸಂಸ್ಕರಣೆ ಹಾಗೂ ರಫ್ತು ಅವಕಾಶಗಳು' ಕುರಿತ ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಪ್ರಧಾನ ದೇಶವಾಗಿರುವ ಭಾರತದಲ್ಲಿ ಬೆಳೆಯುವ ವೈವಿಧ್ಯಮಯ ಬೆಳೆಗಳಲ್ಲಿ ಅರಿಶಿಣ ಸಹ ಒಂದಾಗಿದೆ. ಅಷ್ಟೇ ಮೌಲ್ಯ ವರ್ಧಿತ ಬೆಳೆಯೂ ಆಗಿದೆ. ಸೌಂದರ್ಯ ವರ್ಧಕ ತಯಾರಿಕೆಗಳಲ್ಲಿ ಹೆಚ್ಚಾಗಿ ಬಳಕೆಯಾಗುವ ಅರಿಶಿಣ ಆರೋಗ್ಯ ಸಮಸ್ಯೆಗಳಾದ ಕಫ, ಕೆಮ್ಮು ಹಾಗೂ ಇತರೆ ಕಾಯಿಲೆಗಳ ನಿವಾರಣೆಗೂ ಸಹಕಾರಿಯಾಗಿದೆ. ರೈತರಿಗೆ ಉತ್ತಮ ಆದಾಯ ತರುವ ಬೆಳೆ ಅರಿಶಿಣ ಕೃಷಿಗೆ ಪ್ರೋತ್ಸಾಹಿಸಬೇಕು ಎಂದರು.

ಅರಿಶಿಣ ಬೆಳೆಯುವಲ್ಲಿ ಕರ್ನಾಟಕ ದೇಶದಲ್ಲಿ 4ನೇ ಸ್ಥಾನ ಪಡೆದಿದೆ. ಚಾಮರಾಜನಗರ ಜಿಲ್ಲೆ ರಾಜ್ಯದಲ್ಲೇ 3ನೇ ಸ್ಥಾನದಲ್ಲಿದ್ದು, ಕರ್ನಾಟಕದ ಅರಿಶಿಣಕ್ಕೆ ಎಲ್ಲೆಡೆ ಬೇಡಿಕೆ ಇದೆ. ಇಲ್ಲಿನ ಅರಿಶಿಣ 7–8 ಹೊರದೇಶಗಳಿಗೂ ರಫ್ತಾಗುತ್ತಿದೆ. ಜಿಲ್ಲೆಯಲ್ಲಿ ಅರಿಶಿಣ ಬೆಳೆಗೆ ವಾತಾವರಣ ಅನುಕೂಲವಾಗಿದೆ. ಸಂಸ್ಕರಣೆ ಹಾಗೂ ಮಾರಾಟಕ್ಕೆ ಉತ್ತಮ ಮಾರುಕಟ್ಟೆ ಸೌಲಭ್ಯ ಕಲ್ಪಿಸಬೇಕಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಬೆಳೆಯುವ ಹೆಚ್ಚಿನ ಅರಿಶಿಣ ತಮಿಳುನಾಡಿನ ಈರೋಡ್‌ಗೆ ತಲುಪಲಿದೆ. ಅಲ್ಲಿ ಕೇಳಿದಷ್ಟು ಬೆಲೆಗೆ ನೀಡುವ ಪರಿಪಾಠ ರೈತರಿದ್ದಾಗಿದೆ. ಇದು ತಪ್ಪಬೇಕು. ಇಲ್ಲೇ ಬೆಳೆದು ಇಲ್ಲೇ ಮಾರಾಟ ಮಾಡುವಂತಾಗಬೇಕು. ಇದರಿಂದ ಸ್ಥಳೀಯವಾಗಿ ಸಾಕಷ್ಟು ಉದ್ಯೋಗವೂ ಸೃಷ್ಟಿಯಾಗಲಿದೆ. ಈ ನಿಟ್ಟಿನಲ್ಲಿ ಅರಿಶಿಣ ಸಂಸ್ಕರಣೆ ಹಾಗೂ ರಫ್ತು ಅವಕಾಶಗಳ ಕುರಿತು ಏರ್ಪಡಿಸಲಾಗಿರುವ ಕಾರ್ಯಾಗಾರವನ್ನು ರೈತರು ಸದ್ಬಳಕೆ ಮಾಡಿಕೊಳ್ಳಬೇಕು. ಜಿಲ್ಲೆಯ ರೈತರು ಆರ್ಥಿಕ ಸಬಲತೆ ಹೊಂದಬೇಕು ಎಂದು ಸಲಹೆ ನೀಡಿದರು.

ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ವ್ಯವಸ್ಥಾಪಕ ನಿರ್ದೇಶಕ ಡಾ.ಎಚ್.ಕೆ.ಶಿವಕುಮಾರ್, ಚಾಮರಾಜನಗರ ಕೃಷಿ ವಿಶ್ವವಿದ್ಯಾಲಯ ವಿಶೇಷ ಅಧಿಕಾರಿ ಡಾ.ಸಿ.ದೊರೆಸ್ವಾಮಿ, ಹರದನಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ.ಈ.ಎಸ್.ಯೋಗೇಶ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಅಬೀದ್ ಅವರು ಅರಿಶಿಣ ಮೌಲ್ಯ ಹೆಚ್ಚಿಸುವುದು, ಸಂಸ್ಕರಣೆ ಹಾಗೂ ರಫ್ತು ಅವಕಾಶಗಳ ಕುರಿತು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾರತೀಯ ತೋಟಗಾರಿಕೆ ಸಂಸ್ಥೆ ಸಹಾಯಕ ಪ್ರಾಧ್ಯಾಪಕಿ ಡಾ.ಕೆಶಿಲ್ಪ ತೋಟಗಾರಿಕೆ ವಿಜ್ಞಾನಿ ಡಾ.ಎ.ಬಿ.ಮೋಹನ್ ಕುಮಾರ್ ಉಪಸ್ಥಿತರಿದ್ದರು.

ಮನುಷ್ಯನಿಗೆ ಮಾನಸಿಕ ಆರೋಗ್ಯ ಮುಖ್ಯ



ವೈದ್ಯಾಧಿಕಾರಿಗಳಿಗೆ ಏರ್ಪಡಿಸಿದ್ದ ಕಾರ್ಯಾಗಾರವನ್ನು ಈಶ್ವರ್ ಉದ್ಘಾಟಿಸಿದರು.

ಚಾಮರಾಜನಗರ: ಮನುಷ್ಯ ಪ್ರತಿದಿನ ಆರೋಗ್ಯ ಹಾಗೂ ಉಲ್ಲಾಸಯುಕ್ತ ಜೀವನ ನಡೆಸಲು ದೈಹಿಕ ಹಾಗೂ ಮಾನಸಿಕ ಆರೋಗ್ಯ ಅತೀ ಮುಖ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಈಶ್ವರ್ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಮಾನಸಿಕ ಆರೋಗ್ಯ ಕಾರ್ಯಕ್ರಮ ಘಟಕದ ಸಂಯುಕ್ತಾಶ್ರಯದಲ್ಲಿ ವಿಶ್ವ ಮಾನಸಿಕ ದಿನಾಚರಣೆ ಅಂಗವಾಗಿ ಒತ್ತಡ ನಿರ್ವಹಣೆ ಬಗ್ಗೆ ವೈದ್ಯಾಧಿಕಾರಿಗಳಿಗೆ ಏರ್ಪಡಿಸಿದ್ದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರು ಉತ್ತಮ ಆರೋಗ್ಯ ಹೊಂದಲು ನಿತ್ಯ ಹಸಿರು ಸೊಪ್ಪು, ತರಕಾರಿ, ಕಾಳು, ವಿಟಮಿನ್ ಹೆಚ್ಚಾಗಿರುವ ಆಹಾರ ಪದಾರ್ಥಗಳನ್ನು ಸೇವಿಸಬೇಕು. ದಿನಕ್ಕೆ ಕನಿಷ್ಠ 8 ಗಂಟೆ ನಿದ್ರೆ ಮಾಡಬೇಕು. ವೈದ್ಯ ವೃತ್ತಿ ಒತ್ತಡದಾಯಕ ಕೆಲಸವಾಗಿದೆ. ರೋಗಿಗಳಿಗೆ ಚಿಕಿತ್ಸೆ ನೀಡುವಾಗ ಎಚ್ಚರದಿಂದಿರಬೇಕು ಎಂದು ಸಲಹೆ ನೀಡಿದರು.

ಮಾನಸಿಕ ರೋಗಿಗಳನ್ನು ಕೀಳಾಗಿ ಕಾಣದೆ ಮಾನವೀಯತೆಯಿಂದ ನಡೆಸಿಕೊಳ್ಳಬೇಕು. ಅವರ ಬಗ್ಗೆ ಉದಾಸೀನ ತೋರಬಾರದು. ಉತ್ತಮ ಚಿಕಿತ್ಸೆಯಿಂದ ಮಾನಸಿಕ ರೋಗಿಗಳನ್ನು ಗುಣ ಪಡಿಸಬಹುದು. ಈ ನಿಟ್ಟಿನಲ್ಲಿ ವೈದ್ಯರಿಗೆ ಸಹನೆ, ತಾಳ್ಮೆ ಅವಶ್ಯವಾಗಿದೆ. ಒತ್ತಡದಲ್ಲಿ ಕಾರ್ಯನಿರ್ವಹಿಸುವ ವೈದ್ಯರು ತಮ್ಮ ಆರೋಗ್ಯದ ಕಡೆಗೂ ಗಮನ ಹರಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ ಮಾತನಾಡಿ, ವೈದ್ಯರು ಕಣ್ಣಿಗೆ ಕಾಣುವ ದೇವರುಗಳಿದ್ದ ಹಾಗೆ, ಪ್ರತಿದಿನ ಸಾಕಷ್ಟು ಒತ್ತಡದ ಸನ್ನಿವೇಶದಲ್ಲಿ ಕಾರ್ಯನಿರ್ವಹಿಸುವ ವೈದ್ಯರು ತಮ್ಮ ವೃತ್ತಿಯಲ್ಲಿ ಸ್ವಲ್ಪ ವಿರಾಮ ತೆಗೆದುಕೊಂಡು ಆರೋಗ್ಯದ ಕಡೆಗೆ ಗಮನ ಹರಿಸಬೇಕು ಎಂದರು.

ತಿ.ನರಸೀಪುರ ತಾಲೂಕಿನ ಮಾಲಂಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಎನ್.ಮಧುಸೂದನ್ ವಿಶೇಷ ಉಪನ್ಯಾಸ ನೀಡಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಡಾ.ಚಂದ್ರಶೇಖರ್, ಮನೋರೋಗ ತಜ್ಞರಾದ ಮೇರಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ದೊರೆಸ್ವಾಮಿ ನಾಯಕ್, ಮಾನಸಿಕ ಆರೋಗ್ಯ ಕಾರ್ಯಕ್ರಮ ಸಹಾಯಕ ಸಂಜಯ್ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೇಗೂರು, ಅ.23–ಗುಂಡ್ಲುಪೇಟೆ ತಾಲೂಕಿನ ಬೇಗೂರು ಸೆಸ್ಕ್ ಉಪವಿಭಾಗದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಅ.24ರಂದು ಬೆಳಗ್ಗೆ 9 ರಿಂದ ಸಂಜೆ 6 ಗಂಟೆವರೆಗೆ ಕಮರಹಳ್ಳಿ, ಹಾಲಹಳ್ಳಿ, ತೊಂಡವಾಡಿ, ಅರೇಪುರ, ರಂಗೂಪುರ, ಚಿಕ್ಕಾಟಿ, ಹಿರೀಕಾಟ, ದೊಡ್ಡಹುಂಡಿ, ಚಿಕ್ಕಹುಂಡಿ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ವಿಶೇಷ ಪೊಲೀಸ್ ಠಾಣೆ ಸ್ಥಾಪನೆಗೆ ಮನವಿ ಸಲ್ಲಿಕೆ

ಚಾಮರಾಜನಗರ, ಅ.23–ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟಲು ಹಾಗೂ ತ್ವರಿತ ನ್ಯಾಯಕ್ಕಾಗಿ ಜಿಲ್ಲೆಗೆ ಒಂದು ವಿಶೇಷ ಪೊಲೀಸ್ ಠಾಣೆ ತೆರೆಯುವಂತೆ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ವತಿಯಿಂದ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು.

ಸಚಿವ ಸಂಪುಟ ಸಭೆಯಲ್ಲಿ ದಲಿತರ ಮೇಲಿನ ದೌರ್ಜನ್ಯ ತಡೆ, ತ್ವರಿತ ತನಿಖೆ ಹಾಗೂ ನ್ಯಾಯಕ್ಕಾಗಿ ಜಿಲ್ಲೆಗೊಂದು ಹೊಸ ಪೊಲೀಸ್ ಠಾಣೆ ತೆರೆಯಲು ಅನುಮೋದನೆ ನೀಡಬೇಕು. ಮ್ಯಾನೇಜ್‌ಮೆಂಟ್ ಕೋಟಾದಲ್ಲಿ ಓದುವ ಹಾಗೂ ಇತರೆ ತರಬೇತಿ ಪಡೆಯುತ್ತಿರುವ ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮತ್ತು ಹಾಸ್ಟೆಲ್ ಸೌಲಭ್ಯವನ್ನು ರದ್ದುಗೊಳಿಸಲಾಗಿದೆ. ಇದನ್ನು ಹಿಂಪಡೆದು ವಿದ್ಯಾರ್ಥಿವೇತನ ಹಾಗೂ ಸರ್ಕಾರದ ಎಲ್ಲಾ ಸೌಲಭ್ಯ ನೀಡಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ದಸಂಸ ಜಿಲ್ಲಾ ಸಂಚಾಲಕ ಕೆ.ವೀರು, ಸಂಘಟನಾ ಸಂಚಾಲಕರಾದ ಹಿಂಡಯ್ಯ, ಮಹದೇವಸ್ವಾಮಿ ಉಮ್ಮತ್ತೂರು, ನಾಗಣ್ಣ ಹನೂರು, ಕುಮಾರ್, ಉಪಸಂಚಾಲಕ ನಂಜುಡಯ್ಯ, ಹನೂರು ತಾಲೂಕು ಸಂಚಾಲಕ ಮಾದೇಶ್, ಯಳಂದೂರು ತಾಲೂಕು ಸಂಚಾಲಕ ರಾಜಪ್ಪ, ಗುಂಡ್ಲುಪೇಟೆ ತಾಲೂಕು ಸಂಚಾಲಕ ಶಿವಣ್ಣ, ದೊಡ್ಡಯ್ಯ, ರವಿಕುಮಾರ್, ಬಸವರಾಜು, ಮುರುಗೇಶ್, ಮಾದಯ್ಯ, ನಂಜೇಶ್ ಹಾಜರಿದ್ದರು.



ಜಿಲ್ಲೆಗೆ ಒಂದು ವಿಶೇಷ ಪೊಲೀಸ್ ಠಾಣೆ ತೆರೆಯುವಂತೆ ಒತ್ತಾಯಿಸಿ ದಸಂಸ (ಅಂಬೇಡ್ಕರ್ ವಾದ) ವತಿಯಿಂದ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆ ಬಾಡಿಗೆಗೆ ಇದೆ
4 ಬೆಡ್ ರೂಂ ಮೊದಲನೆ ಮಹಡಿ ಪೂರ್ವ ಸೋಲಾರ್, ಗೀಸರ್ UPS ನಂ.54, ಅನಿಕೇತನ ರಸ್ತೆ, 3ನೇ ಕ್ರಾಸ್, ಕುವೆಂಪುನಗರ, ಮೈಸೂರು
9900699524
7349340596

SITE FOR SALE
20X30, 30X40
Bank Loan Available
Sri Rampura Ring Road Mysore
8050345574

ಬೇಕಾಗಿದ್ದಾರೆ
ಮೈಸೂರಿನ M.N.C. ಕಂಪನಿಗೆ 27 ರಿಂದ 65 ವರ್ಷದೊಳಗಿನ ಗೃಹಿಣಿಯರು, ನಿವೃತ್ತ ವ್ಯಕ್ತಿ, ಬಿಸಿನೆಸ್ ವ್ಯಕ್ತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: ಪಿಯುಸಿ / ಯಾವುದೇ ಪದವೀಧರರು ಸಂದರ್ಶನ: ಗುರುವಾರ, ಶುಕ್ರವಾರ. ಸಂಪರ್ಕಿಸಿ: ಉಷಾ
9480177525

"ಶೋಭಾ ಡೆವಲಪರ್ಸ್"
ಸೈಟುಗಳು ಮಾರಾಟಕ್ಕಿವೆ @ "ಶೋಭ ರಿಟ್ರೀಟ್" ಲೇಔಟ್, ಬೋಗಾದಿ ರಸ್ತೆ, ಮೈಸೂರು.
Mob: 9886048471

ಕೃಷಿಭೂಮಿ ಮಾರಾಟಕ್ಕಿದೆ
ಏರ್‌ಪೋರ್ಟ್‌ನಿಂದ 18 ಕಿ.ಮೀ, ನಂಜನಗೂಡಿನಿಂದ 5 ಕಿ.ಮೀ ದೂರದಲ್ಲಿ 4.33 ಎಕರೆ ತೋಟ ಮಾರಾಟಕ್ಕಿದೆ.
Mob: 9886048471

ಮನೆ ಮಾರಾಟಕ್ಕಿದೆ
K.R. ನಗರ KSRTC ಡಿಪೋ ಮುಂಭಾಗ 17/346 A ಹುಣಸೂರು ರಸ್ತೆ, ಸುಭಾಷ್‌ನಗರ, 40x60 ಸೈಟ್, ಕಾರ್ನರ್ ಸೈಟ್. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
Mob: 9449993332

ತಕ್ಷಣ ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಪಂಪ್ ಕ್ಯಾಷಿಯರ್ ಹುದ್ದೆಗೆ ಪುರುಷರು / ಮಹಿಳೆಯರು ಅನುಭವಿಗಳಿಗೆ ಮೊದಲ ಆದ್ಯತೆ. ಖುದ್ದಾಗಿ ಸಂಪರ್ಕಿಸಿ
ಶ್ರೀ ಸರ್ವೀಸ್ ಸ್ಟೇಷನ್ ಸರಸ್ವತಿಪುರಂ ಮೈಸೂರು

AFFIDAVIT
I, Ashwini Katte Raghavendra, aged 23 years, residing at Mysuru has changed my name to Ashwini Katte vide Affidavit sworn before Notary K.M.Krishna of Mysuru on 8th October 2024. Henceforth I will be called as ASHWINI KATTE.

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹೆಲ್ಪರ್ ಮತ್ತು ಕ್ಯಾಷಿಯರ್ ಹುಡುಗರು ಬೇಕಾಗಿದ್ದಾರೆ.
ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು
6364748485

ಸೈಟುಗಳು ಮಾರಾಟಕ್ಕಿದೆ
ಮೈಸೂರು ನಗರದಲ್ಲಿ ಮುಡಾ ಅನುಮೋದಿತ ಹಾಗೂ ನೋಂದಣಿಗೆ ಸಿದ್ಧರಿರುವ ನಿವೇಶನಗಳು ಮಾರಾಟಕ್ಕಿವೆ.
ಶೋಭ ಡೆವಲಪರ್ಸ್ ಅಂಡ್ ಕನ್‌ಸ್ಟ್ರಕ್ಷನ್
9980719398, 7795863614

MUDA SITE FOR SALE
ಜೆ.ಪಿ. ನಗರ ರಿಂಗ್ ರಸ್ತೆ ಪಕ್ಕದ "ನಂಜುಂಡೇಶ್ವರ ಲೇಔಟ್"ನಲ್ಲಿ 30'x40' East ಫೇಸಿಂಗ್ ಸೈಟ್.
Mob: 9886048471

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196, 9880548596

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker
For evening: (Male only).
7.00 pm to 11.00 pm.
Salary: Rs. 8,000/- per month.
7349337469, 9448525072

Mayuri's Makeover n salon
DD Urs Road.
Beautician Class, Including, Hydrafacial Saree Drapping, Bridal makeup Nailart.
Mob: 9380705968

ಕಳೆದಿದೆ
ಪ್ರದೀಪ್ ಕೆ.ಎಂ ಇವರಿಗೆ ಸೇರಿದ ಕಣಗಾಲು ಗ್ರಾಮ ಸ.ನಂ.43ರಲ್ಲಿರುವ 3 ಎಕರೆ 38 ಗುಂಟೆ ಪೈಕಿ 3 ಗುಂಟೆ ಪಿವೈಪಿಡಿ 114 ಪಿವೈಪಿ 1–01248–2013–14 ನಂಬರಾಗಿರುವ ದಾನ ಪತ್ರ ದಿ. 15–10–2024ರಂದು ಕಳೆದಿದ್ದು ಸಿಕ್ಕವರು ಸಂಪರ್ಕಿಸಿ.
8448862707

ಬೇಕಾಗಿದ್ದಾರೆ
1) ಅನುಭವವುಳ್ಳ ಇಬ್ಬರು ಅರ್ಚಕರು ಬೇಕಾಗಿದ್ದಾರೆ.
2) ಒಬ್ಬರು ಗುಮಾಸ್ತರು ಬೇಕಾಗಿದ್ದಾರೆ
3) ಒಬ್ಬರು ದೇವಸ್ಥಾನದಲ್ಲಿ ಅರ್ಚನೆ ಚೀಟಿ ಕೊಡುವುದಕ್ಕೆ ಮತ್ತು ಸೀರೆ ಮಾರಾಟ ಮಾಡುವುದಕ್ಕೆ ಹೆಂಗಸರು/ಗಂಡಸರು ಬೇಕಾಗಿದ್ದಾರೆ.
4) ಇಬ್ಬರು ಹೆಂಗಸರುಗಳು ದೇವಸ್ಥಾನದಲ್ಲಿ ಸ್ವಚ್ಛತಾ ಕಾರ್ಯ ಮಾಡಲು ಬೇಕಾಗಿದ್ದಾರೆ.
ಸಂಪರ್ಕಿಸಬೇಕಾದ ವಿಳಾಸ
ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನ ಚಾಮುಂಡಿವನಂ, ವಿದ್ಯಾರಣ್ಯಪುರಂ, ಮೈಸೂರು–8
9448053321

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

7 BHK (G+2) HOUSE FOR RENT
Suitable for : PLAYHOME, DIAGNOSTICS, PG.
Bogadi 2nd Stage, opp. Nirmithi Kendra, MYSORE
Ph : 9845377292

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಮನೆಗಳು ಮಾರಾಟಕ್ಕಿವೆ
20X30 E/F ವಿಜಯನಗರ 3rd ಸ್ಟೇಜ್ → 1 CR - [DUPLEX]
20x30 E/F ವಿಜಯನಗರ 4th ಸ್ಟೇಜ್ → 88 LAKH - [G+1]
30X40 W/F ವಿಜಯನಗರ 3rd ಸ್ಟೇಜ್ → 1.60 CR – [DUPLEX]
30X40 N/F ವಿಜಯನಗರ 4th ಸ್ಟೇಜ್ → 2.15 CR – [G+2]
7338445401

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

ಬ್ರಾಹ್ಮಣ ವರ ಬೇಕಾಗಿದೆ
ಬ್ರಾಹ್ಮಣ ವಧು, ವಯಸ್ಸು 20, PUC ಕಲಿತಿರುವ/ವಯಸ್ಸು 26, SSLC ವಯಸ್ಸು 29, ಟೀಚರ್/ವಯಸ್ಸು 34, SSLC /ವಯಸ್ಸು 39, PUC ವಯಸ್ಸು 42, SSLC ಕಲಿತಿರುವ ವಧುವಿಗೆ ವರ ಬೇಕಾಗಿದೆ. ವಿವಾಹ ವೇದಿಕೆ
8792731562

ಬೇಕಾಗಿದ್ದಾರೆ
ಸ್ಟಾರ್ ಬಜಾಜ್ Star Bajaj (Authorised Main Dealer for Bajaj Two Wheeler-Mysore)
ಮಾರ್ಕೆಟಿಂಗ್ ಅಂಡ್ ಸೇಲ್ಸ್ ಎಕ್ಸಿಕ್ಯೂಟಿವ್
Qualification Any degree fresher or experienced
Place of work- Mysore
9743647484

ಅನುಬಂಧ ವೃದ್ಧಾಶ್ರಮ
(ಸಸ್ಯಹಾರಿಗಳಿಗೆ ಮಾತ್ರ)
ವಯಸ್ಸಾದ ಹಾಸಿಗೆ ಹಿಡಿದ ಮತ್ತು ಪಾರ್ಶ್ವವಾಯು ಪೀಡಿತ ವಯೋವೃದ್ಧರನ್ನು ಸುಸಜ್ಜಿತವಾದ ಸಸ್ಯಹಾರಿ ಊಟ ವಸತಿ ಮತ್ತು ವೈದ್ಯಕೀಯ ಸೌಲಭ್ಯಗಳೊಂದಿಗೆ ಮನೆಯಂತೆಯೇ ನೋಡಿಕೊಳ್ಳಲಾಗುವುದು.
ಸಂಪರ್ಕಿಸಿ: 9880793910

ಶೇಖರ್ಸ್ ಗೋಲ್ಡ್ ಕಂಪನಿ (ರಿ) SHEKAR'S GOLD COMPANY (R)
ಪ್ರಿಯ ಗ್ರಾಹಕರೇ ಇಂದಿನ ಚಿನ್ನದ ONLINE ದರಕ್ಕಿಂತ ಹೆಚ್ಚಿನ ಹಣ ನೀಡುತ್ತೇವೆ ಎಂದು ಹೇಳಿ ಗ್ರಾಹಕರಿಗೆ ವಂಚಿಸುತ್ತಾ ಮೈಸೂರಿನ ಘನತೆಗೆ ಧಕ್ಕೆ ಉಂಟು ಮಾಡುತ್ತಿರುವ ಕಂಪನಿಗಳಿಗೆ ಹೋಗಿ ವ್ಯವಹರಿಸಿ ಮೋಸ ಹೋಗದಿರಿ ಗ್ರಾಹಕರೇ......!!!
ನಿಮ್ಮ ಚಿನ್ನದ ಗುಣಮಟ್ಟವನ್ನು ಕರಗಿಸದೆ ಪರೀಕ್ಷಿಸಿ ಪ್ರತಿ ಗ್ರಾಂ ಚಿನ್ನಕ್ಕೆ ಇಂದಿನ ಆನ್ಲೈನ್ ದರವನ್ನು ಕೊಟ್ಟು ಖರೀದಿಸಿ ಉಳಿದ ಹಣವನ್ನು ತಕ್ಷಣ ನೀಡುತ್ತೇವೆ.
+91 8296800249 / 0821-3145928
#1306/24, F81/2, 2ND MAIN, SIH ROAD, VIDYARANYAPURAM, MYSURU - 570008

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training.
www.imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

FOR SALE
1. Properties at Kuvempu Nagar Starting @ 35L
2. 20x30 Site @Vijaya Nagar 4th stg
3. 14x100 Old Hs @ Ramavilas Rd
4. Old Hs @ Krishnamurthy Puram
5. Properties For Sale at Vidyaranyapuram
6. 20x30 Site Near SBM Lyt, Bogadhi
7. Ready to Move Apartments @ Hebbal
8. Commercial Properties @ Saraswathi Puram, Kuvempu Ngr & Hunsur Rd
PRAKRUTHI PROPERTIES
95386 90359, 90359 90359

ಮೂಡಾ ಸೈಟ್ ಮಾರಾಟಕ್ಕಿವೆ
20x40 E/F ಪಂಚಚಾರ್ಯ ಲೇಔಟ್ → 50 LAKHS
40X56 W/F ವಿಜಯನಗರ 4th ಸ್ಟೇಜ್ → 1.30 CR
40X66 W/F ಕೆ. ಹೆಚ್.ಬಿ ಹೂಟಗಳ್ಳಿ → 1.25 CR
30X40 S/F ಪಾರ್ಕ್ ಎದುರು ವಿಜಯನಗರ 4th ಸ್ಟೇಜ್ → 86 LAKHS
7338445412

SITE FOR SALE
40X40 Corner Vishwa Manava Enclave Vijayanagar 4th Stage
8050821108

ಸನ್‌ಡ್ರೈರೆಕ್ಟ್ ಡಿ.ಟಿ.ಹೆಚ್‌ನಲ್ಲಿ
ಟೆಕ್ನಿಷಿಯನ್ ಆಗಿ ಕೆಲಸ ಮಾಡಲು ದ್ವಿಚಕ್ರ ವಾಹನ ವಿರುವ ಹುಡುಗರು ಬೇಕಾಗಿದ್ದಾರೆ. ತರಬೇತಿ ನಾವೇ ಕೊಡುತ್ತೇವೆ. 14000 ಮೇಲ್ಪಟ್ಟು ಸಂಬಳ ಮತ್ತು ಇನ್‌ಸೆಂಟಿವ್ ಇರುತ್ತದೆ.
9964555920

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, Kuvempunagar, Mysuru
9611028523 9343142258

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ. (Hand Pressing Work) ವಿಳಾಸ: 788, 2nd Main, 16th Cross, B.M, Shri Nagara, Metagalli, Lakshmi
9945161738

R.V. Constructions
Rate starts from Rs. 1690/- per sq.ft.
No Advance. Billing on Stage by Stage completion.
Assist: Major Bank Loans.
Office: 0821-2002063 / 7975110915
D. Subbaiah Road, Mysore

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆ – ಜಯಲಕ್ಷ್ಮೀಪುರಂದಲ್ಲಿ 'ಉಜ್ಜೀವನ್ ಬ್ಯಾಂಕ್' ಮುಂದೆ ಇರುವ ಇರುವ ಶುದ್ಧ ಸಸ್ಯಾಹಾರಿ ಹೋಟೆಲ್‌ಗೆ ಅನುಭವ ಇರುವ ದೋಸಾ ಭಟ್ರು (Dosa Chef 2), ಕೌಂಟರ್ (Parcel packing), ಸರ್ವಿಸ್ (Waiter - supplier), & South Assistant. ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ, ಊಟ ಮತ್ತು ವಸತಿ ಸೌಲಭ್ಯ ಇದೆ. ಸಂಪರ್ಕಿಸಿ.
90199 16266

ವಾಸ್ತು ಪ್ರಕಾರ
ವಾಸ್ತುಪ್ರಕಾರ ಹೊಸಮನೆ & ಹಳೆಯ ಮನೆ ಆಲ್ಟ್ರೇಷನ್ ಮಾಡಿಕೊಡಲಾಗುವುದು
ಸ್ವಾಮಿ ಎಂ. (ಸಿವಿಲ್ ಕಂಟ್ರಾಕ್ಟರ್) ಚದರ ಒಂದಕ್ಕೆ 180000/- (ಷರತ್ತು ಅನ್ವಯ)
9945442361
9380885787

VACANCY at Reputed Hotel in Mysore
1. Assistant Cook
2. Vegetables cutting
3. Counter Job
8217737552

ಮಳಿಗೆ ಖಾಲಿ ಇದೆ
ರಿಂಗ್ ರಸ್ತೆ (ರಾಯಲ್ ಓಕ್ ಎದುರು), ರಾಜಾಜಿನಗರ.
Mob: 8105460545

ಬೇಕಾಗಿದ್ದಾರೆ
ಹೌಸ್‌ಕೀಪಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಯಸ್ಸು: 40 ವರ್ಷದ ಒಳಗಿರಬೇಕು. ಸ್ಥಳ: ಜಯನಗರ, ಇಸ್ಕಾನ್ ದೇವಸ್ಥಾನ, ಮೈಸೂರು.
Mob: 8496915162

ಮನೆ ಬಾಡಿಗೆಗೆ ಇದೆ
1 BHK ಮನೆ, 1st Floor ಚಾಮುಂಡಿ ವಿಹಾರ ಬಡಾವಣೆ, ನಜರ್‌ಬಾದ್, ಮೈಸೂರು.
9964667179, 9900124548

ಬೇಕಾಗಿದ್ದಾರೆ
ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲಾದ್ಯಂತ ದ್ವಿಚಕ್ರ ವಾಹನದ ಸಾಲ ವಸೂಲಾತಿ ಕೆಲಸ ಮಾಡಲು ಕಮಿಷನ್ ಆಧಾರದ ಮೇಲೆ ಅನುಭವವುಳ್ಳ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. (ಟೀಮ್ ಲೀಡರ್ ಬೇಕಾಗಿದ್ದಾರೆ, ಮೈಸೂರಿನವರಿಗೆ ಆದ್ಯತೆ). ಸಂದರ್ಶನಕ್ಕಾಗಿ ಸಂಪರ್ಕಿಸಿ:
Mob: 6364891413

HOUSE FOR SALE
NORTH EAST CONSTRUCTIONS "Turn your Dream into Address"
20x30 - 3 BHK, Brand New House
Pay Just 20 lakhs Down Payment & Remaining Easy EMI
Call: 98800 65122, 76193 99919

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ: 10000
ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ,
Field Executive ಬೇಕಾಗಿದ್ದಾರೆ.
Collection Field (ಸಂಬಳ 13000/–) (Work Collection in Field)
8150005111
Team Manager ಬೇಕಾಗಿದ್ದಾರೆ. (ಸಂಬಳ–20000)

ಕೆಲಸಕ್ಕೆ ಬೇಕಾಗಿದ್ದಾರೆ ಸೆಕ್ಯುರಿಟಿ ಗಾರ್ಡ್ (ಪುರುಷರು):
ಇಲವಾಲ, ಬೆಳವಾಡಿ, ಮನುಗ್ನಳ್ಳಿ ಚೆಕ್ ಪೋಸ್ಟ್, ಜಟ್ಟಿ ಹುಂಡಿ, ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ, ದಟ್ಟಗಲ್ಲಿ, ಮೇಟಗಲ್ಲಿ, ಹೆಬ್ಬಾಳ, ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ, ಮಾದಹಳ್ಳಿ, ಬೋಗಾದಿ ರೋಡ್, ಜವನಹಳ್ಳಿ, ದಾಸನಕೊಪ್ಪಲು, ರೂಪ ನಗರ.
ಆಸಕ್ತಿ ಇದ್ದವರು ಸಂಪರ್ಕಿಸಿ :
+91 8310098788

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
7411565140, 7892046990

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನೆ ದೇವಿ ಆರಾಧಕರು ಪಂ|| ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

House for sale
20/40 EAST
3 BHK & Own Borewell
MUDA with Clear Documents
Police layout 2nd Stage
Call: 9380284276

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
Ape Goods Auto Driver ಬೇಕಾಗಿದ್ದಾರೆ ಮತ್ತು Xerox ಅಂಗಡಿಯಲ್ಲಿ ಕೆಲಸ ಮಾಡಲು Computer knowledge ಇರುವವರು ಬೇಕಾಗಿದ್ದಾರೆ
9972258425

Constructiion Starts
@ Rs.1,899* per sqft.
SKANDA PROPERTIES
9379888558

Wanted female graduates or NST and NTT for pre-school in bogadi
Contact
6364227636

ಮೈಸೂರಿನಲ್ಲಿ ಉದ್ಯೋಗ
ಕುವೆಂಪುನಗರದಲ್ಲಿರುವ A.W.B.M. ಕಂಪನಿಗೆ SSLC, PUC, ITI, Diploma, any Degree ಆದಂತಹ 272 ಅಭ್ಯರ್ಥಿಗಳು ಬೇಕಾಗಿದ್ದಾರೆ. (ನೇರ ಸಂದರ್ಶನ + ನೇರ ಆಯ್ಕೆ). ವಯೋಮಿತಿ: 18 ರಿಂದ 30 ವರ್ಷಗಳು. ತಿಂಗಳಿಗೆ: 21,000 – 26,000. (ಉಚಿತ ಊಟ + ವಸತಿ ಸೌಲಭ್ಯವಿರುತ್ತದೆ).
ಸಂಪರ್ಕಿಸಿ: ಸಮಂತಾ
7406821955, 7349699460

ಬಾಡಿಗೆಗೆ ದೊರೆಯುತ್ತದೆ
ಇಲವಾಲ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಗಳು ಬಾಡಿಗೆಗೆ ದೊರೆಯುತ್ತದೆ. ಪಾರ್ಕಿಂಗ್ ಸಹ ಇರುತ್ತದೆ. ಸಂಪರ್ಕಿಸಿ:
Mob: 9845830203

FOR SALE
60x40 West facing, MUDA site, Near Arvind Hospital, Kuvempunagara, Mysore
Asking Price - 1.8 Cr.
9448759068, 7760953654

ಪ್ರಮಾಣ ಪತ್ರ
ಮೈಸೂರು ನಗರ, ಎನ್.ಆರ್. ಮೊಹಲ್ಲಾ, ರಾಜೀವ್ ನಗರ, 1ನೇ ಹಂತ, ದೇವನೂರು ಬಡಾವಣೆ, ಮನೆ ನಂ. 636ರಲ್ಲಿ ವಾಸವಾಗಿರುವ ಮುಬಾರಕ್ ಷಾ ಖಾದ್ರಿ ಆಲಿಯಾಸ್ ಸೈಯದ್ ಕಲೀಂ (Syed Mubarak Shah Qadri @ Syed Kaleem) ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ನನ್ನ ನಿಜವಾದ ಹೆಸರು ಸೈಯದ್ ಮುಬಾರಕ್ ಷಾ ಖಾದ್ರಿ (Syed Mubarak Shah Qadri) ಎಂದಿರುತ್ತದೆ. ಆದರೆ ಭಾರತ ಸರ್ಕಾರದ ಚುನಾವಣಾ ಗುರುತಿನ ಚೀಟಿಯಲ್ಲಿ ನನ್ನ ಹೆಸರು ಸೈಯದ್ ಕಲೀಂ (Syed Kaleem) ಎಂದು ಮತ್ತು ಆಧಾರ್ ಗುರುತಿನ ಚೀಟಿಯಲ್ಲಿಯೂ ಸಹ ನನ್ನ ಹೆಸರು ಸೈಯದ್ ಕಲೀಂ ಎಂದಿರುತ್ತದೆ. ಈ ಮೇಲ್ಕಂಡ ಸೈಯದ್ ಮುಬಾರಕ್ ಷಾ ಖಾದ್ರಿ (Syed Mubarak Shah Qadri) ಮತ್ತು ಸೈಯದ್ ಕಲೀಂ (Syed Kaleem) ಈ ಎರಡೂ ಹೆಸರುಗಳೂ ನನ್ನದೇ ಆಗಿರುತ್ತವೆ ಎಂದು ನೋಟರಿ ಜಯಶ್ರೀ ಸಿ.ಜಿ. ರವರ ಎದುರು ದಿನಾಂಕ 22–10–2024ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಸೈಯದ್ ಮುಬಾರಕ್ ಷಾ ಖಾದ್ರಿ

Site For Sale
20x30 West Facing Site Vijaya Nagar 4th Stage, 2nd Phase, No. 8797
Both Side House
Direct Allotted Site
Good Locality
Brokers Excuse
8892323823
9916075959

ಮನೆ ಭೋಗ್ಯ/ಬಾಡಿಗೆ/ಮಾರಾಟಕ್ಕೆ ಇದೆ
ಶ್ರೀರಾಂಪುರ ಯಾನಿವರ್ಸಿಟಿ ಲೇಔಟ್ ಎದುರು ಗಾಯಿತ್ರಿ ಬಡಾವಣೆಯಲ್ಲಿ 1ನೇ ಮಹಡಿಯಲ್ಲಿ 2 BHK 2ನೇ ಮಹಡಿಯಲ್ಲಿ 1 BHK ಮನೆ ಬಾಡಿಗೆಗೆ ಅಥವಾ ಭೋಗ್ಯಕ್ಕೆ ಇದೆ
9481041871
9448092818

ನೇರ ನೇಮಕಾತಿ
Impulse ಹೊಸ ವಿಭಾಗಕ್ಕೆ 10th, PUC ಆದ, Age (18-24) Project Trainee ಗಳಾಗಿ Earn (10,200 to 16,500) PM. Only freshers. No fee. Call & meet us @ Mysore.
Kavya: 9342827788
Time to call: 9 am to 5.30 pm

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. SSLC, PUC, ITI ಪಾಸಾದವರು.
Mob: 6361195578

ಬೇಕಾಗಿದ್ದಾರೆ
ಅನುಭವವುಳ್ಳ ಅಡುಗೆಯವರು ಬೇಕಾಗಿದ್ದಾರೆ. * ಚೈನೀಸ್ ಮತ್ತು ನಾರ್ತ್ ಇಂಡಿಯನ್ ಕುಕ್ – 1 ; * ತಂದೂರಿ ಕುಕ್ – 1 ; ದೋಸಾ ಕುಕ್ – 1. ಸಂಬಳ: 18,000. ಸ್ಥಳ: ಈಟಿ ತಿಂಡಿ, ಅಭಿಷೇಕ್ ವೃತ್ತ, ಹೆಬ್ಬಾಳು, ಮೈಸೂರು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
8147683310

ಬೇಕಾಗಿದ್ದಾರೆ
ಭುಗತಹಳ್ಳಿ ಬನ್ನೂರು ರಸ್ತೆಯ ರೆಸಾರ್ಟ್‌ನಲ್ಲಿ ಕರ್ತವ್ಯ ನಿರ್ವಹಿಸಲು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. 9 ಗಂಟೆ ಕೆಲಸ, ವಾರದ ರಜೆ, ESI/PF ಎಲ್ಲಾ ಸೇರಿ ಸಂಬಳ 17,500/– ದೊಂದಿಗೆ ಊಟ ಹಾಗು ರೂಮ್ ವ್ಯವಸ್ಥೆವಿರುತ್ತದೆ. ಮಾಹಿತಿಗಾಗಿ ಸಂಪರ್ಕಿಸಿ.
9900212487

SITES FOR SALE
30x40 measuring sites in Hale Kesare Main Road, adjacent to Army Layout from City only 6.5 kms. Bookings open. Contact:
Mob: 9535601201

ಲಾವಣ್ಯ ವಧು–ವರರ ಮಾಹಿತಿ ಕೇಂದ್ರ
BA, BSc, B.Com, MA, MSc, MBA, MCA, Doctor, Engg.
2nd Marriage Also
91647-43059

ತಕ್ಷಣ ಬೇಕಾಗಿದ್ದಾರೆ
ಕೇಂದ್ರ ಸರ್ಕಾರದ (ZED MSME) ಪ್ರೊಜೆಕ್ಟ್ ನಲ್ಲಿ ಕೆಲಸ ಮಾಡಲು ತಮಿಳ್– ತೆಲುಗು ಮಾತನಾಡಲು ಬರುವ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾಭ್ಯಾಸ ಕನಿಷ್ಠ 2 PUC, ಸಂಬಳ – 10,000-12,000 ಸ್ಥಳ – ಕುವೆಂಪು ನಗರ, ಮೈಸೂರು
9880630672

COMMERCIAL SPACE FOR RENT
For office purpose 1600 sqft, 1st floor, Near Bhaskar mane ollege Abhishek Circle Vijaynagar 2nd Stage.
8660411357, 9844182624

ಡ್ರೈವರ್ ಬೇಕಾಗಿದ್ದಾರೆ
ಆಕರ್ಷಕ ಸಂಬಳ. ಊಟ, ವಸತಿ ವ್ಯವಸ್ಥೆ ಇರುತ್ತದೆ. ಕರೆಮಾಡಿ.
Mob: 7259137119

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್ JSS ಲೇಔಟ್, ನಿರ್ಮಾಣ ನಗರ ಹಾಗೂ ಸುತ್ತ ಮುತ್ತ ಇರುವ ಲೇಔಟ್‌ಗಳಲ್ಲಿ
9844436672

ಕಳೆದಿದೆ
ಮಂಜೂರಾತಿ ಪತ್ರ ಸ್ವಾದೀನ ಪತ್ರ ದಾಖಲಾತಿಗಳು ಕಳೆದಿದೆ D.No.2777/D-34 5ನೇ ಮುಖ್ಯರಸ್ತೆ, V.V.Mohalla ಈ ಮನೆ ದಾಖಲಾತಿ ಕಳೆದಿರುತ್ತದೆ. ಸಿಕ್ಕಿದಲ್ಲಿ ಸಂಪರ್ಕಿಸಿ:
9900488837

ಬೇಕಾಗಿದ್ದಾರೆ
HP ಪೆಟ್ರೋಲ್ ಬಂಕ್‌ನಲ್ಲಿ ಮ್ಯಾನೇಜರ್ ಕೆಲಸಕ್ಕೆ ಬೇಕಾಗಿದ್ದಾರೆ ಸ್ಥಳ: ದೇವೇಗೌಡ ಸರ್ಕಲ್ ಹತ್ತಿರ ಆಲನಹಳ್ಳಿ, ಮೈಸೂರು
9845882299
9945102407

ಸದ್ಗುರು ಮ್ಯಾರೇಜಸ್
ಸುಂದರ ಶ್ರೀಮಂತ ವಿದ್ಯಾವಂತ ವಧುವರರಿಗೆ ನೇರ ಸಂಪರ್ಕಿಸಿ
9448229184
7899625268
Lady Receptionist ಬೇಕಾಗಿದ್ದಾರೆ.

S.K. CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ ನಿಮ್ಮ ಕೈಗೆಟಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elivation ಸಹಿತ ನಾವೇ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿ ಕೊಡುತ್ತೇವೆ
9620528490

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು, ಯುವಕ/ಯುವತಿಯರು, ಮಹಿಳೆಯರು, ವಿಧವೆಯರು/ವಿಚ್ಛೇದಿತೆಯರು ಹೋಮ್ ನರ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ನಮ್ಮಲ್ಲೇ ಕಡ್ಡಾಯವಾಗಿ ಉಳಿದು ಕೊಳ್ಳುವರಿಗೆ ಮಾತ್ರ ಅವಕಾಶ. ಸಂಬಳ 15,000 ರಿಂದ 20,000ವರೆಗೆ ಉಚಿತ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
8296429737
9632039123

ಮನೆ ಭೋಗ್ಯಕ್ಕೆ ಇದೆ
2BHK (30x40) ಹೊಸಮನೆ Solar independent House ಅರವಿಂದನಗರ Next to Kuvempunagar ಮೈಸೂರು
9844756558

ಮನೆ ಮಾರಾಟಕ್ಕಿದೆ
43x45 ಅಳತೆಯ ಕಟ್ಟಡದಲ್ಲಿ 3 ಅಂತಸ್ತು ಹಾಗೂ 7 ವಸ್ ಉಳ್ಳ ಕಟ್ಟಡ ವಿಳಾಸ: ತ್ಯಾಗರಾಜ ರಸ್ತೆ, 8ನೇ ಕ್ರಾಸ್, ಅಗ್ರಹಾರ, ಮೈಸೂರು
6361637505
9480291901

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಕಾಡಾನೆಗಳ ದಾಳಿಯಿಂದ ಭಾರಿ ಬೆಳೆ ಹಾನಿ

ಸ್ಥಳಕ್ಕೆ ಸಿಸಿಎಫ್ ಮನೋಜ್‌ಕುಮಾರ್ ಭೇಟಿ



ಆನೆಗಳು ದಾಳಿ ನಡೆಸಿದ್ದ ಜಮೀನಿಗೆ ಅಧಿಕಾರಿಗಳು ಭೇಟಿ ನೀಡಿರುವುದು.

ಹನಗೋಡು, ಅ.23– ಕಳೆದ ಹಲವಾರು ದಿನಗಳಿಂದ ಕಾಡಾನೆಗಳು ನಿರಂತರವಾಗಿ ದಾಳಿ ನಡೆಸುತ್ತಿದ್ದು, ವೀರನಹೊಸಹಳ್ಳಿ ಮತ್ತು ಭರತವಾಡಿ ಭಾಗದಲ್ಲಿ ಬೆಳೆ ಹಾನಿಯಾಗಿದೆ. ಆನೆಗಳ ದಾಳಿಯಿಂದ ಬೆಳೆ ಕಳೆದುಕೊಂಡ ರೈತರ ಜಮೀನಿಗೆ ಸಿಸಿಎಫ್ ಮನೋಜ್ ಕುಮಾರ್ ತ್ರಿಪಾಠಿ ಭೇಟಿ ನೀಡಿ, ರೈತರೊಂದಿಗೆ ಸಮಾಲೋಚನೆ ನಡೆಸಿದರು.

ಸ್ಥಳೀಯ ಅಧಿಕಾರಿಗಳೊಟ್ಟಿಗೆ ಆಗಮಿಸಿ ಪರಿಶೀಲಿಸಿದ ಅವರು, ಸಂತ್ರಸ್ತ ರೈತರಿಗೆ ಸೂಕ್ತ ಪರಿಹಾರ ನೀಡುವ ಭರವಸೆ ನೀಡಿದರು. ತಮ್ಮ ಸಮಸ್ಯೆ ಹೇಳಿಕೊಂಡ ರೈತರು, ಕಳೆದ ಹಲವಾರು ವರ್ಷಗಳಿಂದ ಆನೆ ಹಾವಳಿ ನಿರಂತರವಾಗಿದೆ. ಎಷ್ಟೇ ಬಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಯಾರೂ ಸ್ಪಂದಿಸುತ್ತಿಲ್ಲ. ಅರಣ್ಯ ಇಲಾಖೆಯಿಂದ ಕೂಡ ಸೂಕ್ತ ರೀತಿಯಲ್ಲಿ ಪರಿಹಾರ ದೊರಕುತ್ತಿರಲಿಲ್ಲ ಎಂದು ದೂರಿದರು. ಕೂಡಲೇ ಬೆಳೆ ನಷ್ಟಕ್ಕೆ ಅಗತ್ಯ ಪರಿಹಾರವನ್ನು ವಿತರಿಸಬೇಕು. ಆನೆ ದಾಳಿ ತಡೆಗೆ ಬೇಕಾದಂತಹ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ರೈತರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಡಿಸಿಎಫ್ ಸೀಮಾ, ಎಸಿಎಫ್ ಲಕ್ಷ್ಮಿಕಾಂತ್, ವಲಯಾರಣ್ಯಾಧಿಕಾರಿ ಅಭಿಷೇಕ್, ದೊಡ್ಡಹೆಜ್ಜೂರು ಗ್ರಾಮ ಪಂಚಾಯತ್ ಉಪಾಧ್ಯಕ್ಷ ಭರತವಾಡಿ ವೆಂಕಟೇಶ್, ಉದ್ಯಮಿ ರವಿಚಂದನ್ ಮತ್ತಿತರರು ಇದ್ದರು.

ಹುಣಸೂರಲ್ಲಿ ಡಿ.12ರಿಂದ

ಹನುಮಂತೋತ್ಸವ ಆಚರಣೆ

ಡಿ.15ರಂದು ಬೃಹತ್ ಹನುಮ ಶೋಭಾಯಾತ್ರೆ



ಹನುಮಂತೋತ್ಸವ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷ ವೆಂಕಟನಾರಾಯಣ ದಾಸ್ ಮಾತನಾಡಿದರು.

ಹುಣಸೂರು, ಅ.23– ಈ ಬಾರಿಯ ಹನುಮಂತೋತ್ಸವ ಮೆರವಣಿಗೆಯನ್ನು ಡಿ.15ರಂದು ಪಟ್ಟಣದಲ್ಲಿ ಅದ್ಧೂರಿಯಾಗಿ ಆಚರಿಸಲು ತೀರ್ಮಾನಿಸಲಾಯಿತು.

ನಗರದ ಕರೀಗೌಡರ ಬೀದಿಯ ಶ್ರೀ ರಾಮಮಂದಿರದಲ್ಲಿ ಹನುಮಂತೋತ್ಸವ ಸಮಿತಿ ಹಾಗೂ ಅಂಜನಾದ್ರಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷ ವೆಂಕಟನಾರಾಯಣ ದಾಸ್ ಮಾತನಾಡಿ, ಹನುಮಂತೋತ್ಸವಕ್ಕೆ ಕಳೆದ 29 ವರ್ಷಗಳಿಂದ ನಗರ ಸೇರಿದಂತೆ ತಾಲೂಕಿನ ಜನಪ್ರತಿನಿಧಿಗಳು ಹಾಗೂ ಎಲ್ಲಾ ಸಂಘ–ಸಂಸ್ಥೆಗಳವರ ಸಹಕಾರ ಕೋರುತ್ತಿರುವುದನ್ನು ಸ್ಮರಿಸಿ ಈ ಬಾರಿ 30ನೇ ವರ್ಷದ ಹನುಮಂತೋತ್ಸವವು ಡಿ.12 ರಿಂದ 15ರವರೆಗೆ ಮೂರು ದಿನಗಳ ಕಾಲ ಅದ್ಧೂರಿ ಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದರು.

ಈಗಾಗಲೇ ತಾಲೂಕು ಆಡಳಿತಕ್ಕೆ ಉತ್ಸವ ನಡೆಸುವ ಬಗ್ಗೆ ಹಾಗೂ ಡಿ.15ರಂದು ಹನುಮ ಶೋಭಾಯಾತ್ರೆ ಮಾರ್ಗದ ಕುರಿತು ಮನವಿ ಮಾಡಿಕೊಳ್ಳಲಾಗಿದ್ದು, ಸುಮಾರು ಐವತ್ತು ಸಾವಿರ ಹನುಮ ಭಕ್ತರು ಸೇರುವ ನಿರೀಕ್ಷೆ ಇದೆ ಎಂದಿನಂತೆ ಈ ಬಾರಿಯೂ ಸಾರ್ವಜನಿಕರು ಸಹಕಾರ ನೀಡಬೇಕು. ನಗರದ ಎಲ್ಲಾ ಗರಡಿ ಮತ್ತು ಶ್ರೀ ರಾಮಮಂದಿರಗಳವರು ಮಂದಿರದ ಮುಂದೆ ಶೃಂಗರಿಸುವ ಜೊತೆಗೆ ಉತ್ಸವಮೂರ್ತಿಯನ್ನು ಮೆರವಣಿಗೆಯಲ್ಲಿ ತರುವಂತೆ ಮನವಿ ಮಾಡಿದರು.

ಸುತ್ತೂರು ಶ್ರೀಗಳು, ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಸೋಮನಾಥೇಶ್ವರ ಸ್ವಾಮೀಜಿ, ಕನಕಗುರು ಪೀಠದ ಸ್ವಾಮೀಜಿ, ತಾಲೂಕಿನ ಗಾವಡಗೆರೆ, ಮಾದಹಳ್ಳಿ ಮಠದ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಮೆರವಣಿಗೆ ನಡೆಸಲು ತೀರ್ಮಾನಿಸಲಾಯಿತು. ಶಾಸಕರು, ಮಾಜಿ ಶಾಸಕರು, ಎಂಎಲ್‌ಸಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಂಸದ ಪ್ರತಾಪಸಿಂಹ ಮತ್ತಿತರ ಜನಪ್ರತಿನಿಧಿಗಳು ಭಾಗವಹಿಸಲಿದ್ದು, ಎಂದಿನಂತೆ ಕಲ್ಕುಣಿಕೆಯ ರಂಗನಾಥ ಬಡಾವಣೆಯಿಂದ ಕಲಾತಂಡಗಳೊಂದಿಗೆ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ನಡೆಸಲು ಸಭೆ ತೀರ್ಮಾನಿಸಿತು. ಕಾರ್ಯದರ್ಶಿ ಅನಿಲ್ ಕಳೆದ ಸಾಲಿನ ಲೆಕ್ಕಪತ್ರ ಮಂಡಿಸಿದರು.

ಈ ವೇಳೆ ಸಮಿತಿ ಉಪಾಧ್ಯಕ್ಷ ಎಚ್.ವೈ. ಮಹದೇವ್, ಎಚ್.ಎನ್.ಚಂದ್ರಶೇಖರ್, ಸಮಿತಿಯ ಸಂಚಾಲಕ ಚಂದ್ರಮೌಳಿ, ಸದಸ್ಯರಾದ ಸಚ್ಚಿನ್ ಬಾಗಲ್, ಗಿರಿ, ನರಸಿಂಹ ಮೂರ್ತಿ, ನಂದಿಮಹೇಶ್, ಮೈಲಾರಿ, ಪೂರ್ಣಪ್ರಕಾಶ್ ಸಿಂಗ್ವಿ, ವರದರಾಜಪಿಳ್ಳೆ, ಯೋಗೀಶ್, ಕೃಷ್ಣ, ರಾಮಣ್ಣ ಮತ್ತಿತರರಿದ್ದರು.

ಮುಖಕ್ಕೆ ಮಾಸ್ಕ್ ಧರಿಸಿದ್ದ ಅಪರಿಚಿತನಿಂದ ಯುವಕನಿಗೆ ಚಾಕುವಿನಿಂದ ಇರಿದು ಪರಾರಿ



ತಿ.ನರಸೀಪುರ, ಅ.23– ಮುಖಕ್ಕೆ ಮಾಸ್ಕ್ ಧರಿಸಿದ್ದ ಅಪರಿಚಿತನೋರ್ವ ಜನನಿಬಿಡ ಪ್ರದೇಶದಲ್ಲೇ ಯುವಕನೊಬ್ಬನಿಗೆ ಚಾಕುವಿನಿಂದ ಇರಿದು ಪರಾರಿಯಾಗಿರುವ ಘಟನೆ ಬುಧವಾರ ಸಂಜೆ ಪಟ್ಟಣದ ವಿಜಯ ಭಗವಾನ್ ವೃತ್ತದಲ್ಲಿ ಸಂಭವಿಸಿದೆ. ಪಟ್ಟಣದ ಮುರುಗನ್ ಚಿತ್ರಮಂದಿರದ ಬಳಿ ಇರುವ ಶಿವ ಶಕ್ತಿ ವೈನ್ಸ್ ಮಾಲೀಕ ಆಲಗೂಡು ಸಿದ್ದಪ್ಪ ಎಂಬುವರ ಪುತ್ರ ದಿನಕರ್ ನಾಯಕ್ ಎಂಬುವರೇ ಅಪರಿಚಿತ ವ್ಯಕ್ತಿಯ ಚಾಕು ಇರಿತದಿಂದ ತೀವ್ರ ಸ್ವರೂಪದ ಗಾಯಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಯುವಕ. ಸದಾ ಜನಸಂದಣಿಯಿಂದ ಕೂಡಿರುವ ವಿಜಯ ಭಗವಾನ್ ವೃತ್ತದಲ್ಲಿ ದಿನಕರ್ ನಾಯಕ್ ತನ್ನ ಸ್ಕೂಟರ್ ಮೇಲೆ ಕುಳಿತಿದ್ದ ವೇಳೆ ಮುಖಕ್ಕೆ ಮಾಸ್ಕ್ ಧರಿಸಿ ಬಂದ ಅಪರಿಚಿತ ವ್ಯಕ್ತಿಯೋರ್ವ ಏಕಾಏಕಿ ದಿನಕರ್ ಮೇಲೆ ದಾಳಿ ನಡೆಸಿ ಚಾಕುವಿನಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದಾನೆ. ಚಾಕು ಇರಿತದಿಂದ ತೀವ್ರಸ್ವರೂಪದ ಗಾಯಗಳಾಗಿ ಅಸ್ವಸ್ಥನಾದ ದಿನಕರ್‌ನನ್ನು ಕೂಡಲೇ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಅಪೋಲೊ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಜನನಿಬಿಡ ರಸ್ತೆಯಲ್ಲಿಯೇ ಇಂತಹ ದುರಂತ ಘಟನೆ ನಡೆದಿರುವುದರಿಂದ ಸಾರ್ವಜನಿಕರು ಆತಂಕಗೊಂಡಿದ್ದಾರೆ. ಪಟ್ಟಣ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ, ಆರೋಪಿಯ ಪತ್ತೆ ಕಾರ್ಯದಲ್ಲಿ ನಿರತರಾಗಿದ್ದಾರೆ.

ಆರ್.ಧ್ರುವನಾರಾಯಣ ಮೆಮೋರಿಯಲ್ ಕಪ್

ರಾಜ್ಯ ಮಟ್ಟದ ಫುಟ್‌ಬಾಲ್ ಪಂದ್ಯಾವಳಿ



ನಂಜನಗೂಡಿನ ಜೂನಿಯರ್ ಕಾಲೇಜ್ ಮೈದಾನದಲ್ಲಿ ಬುಧವಾರ ಶಾಸಕ ದರ್ಶನ್ ಧ್ರುವನಾರಾಯಣ, ಫುಟ್‌ಬಾಲ್ ಪಂದ್ಯಾವಳಿಯ ಸಿದ್ಧತೆಯನ್ನು ಪರಿಶೀಲಿಸಿದರು.

ನಂಜನಗೂಡು, ಅ.23– ನಗರದ ಜೂನಿಯರ್ ಕಾಲೇಜ್ ಮೈದಾನದಲ್ಲಿ ಧ್ರುವನಾರಾಯಣ ಅಭಿಮಾನಿ ಬಳಗದ ವತಿಯಿಂದ ಅ.25 ರಿಂದ 27 ರವರೆಗೆ 3 ದಿನಗಳ ಕಾಲ ಆರ್.ಧ್ರುವನಾರಾಯಣ ಮೆಮೋರಿಯಲ್ ಕಪ್ ರಾಜ್ಯ ಮಟ್ಟದ ಫುಟ್‌ಬಾಲ್ ಪಂದ್ಯಾವಳಿ ನಡೆಯಲಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಜೂನಿಯರ್ ಕಾಲೇಜ್ ಮೈದಾನದಲ್ಲಿ ಪಂದ್ಯಾವಳಿಗಾಗಿ ನಡೆಯುತ್ತಿರುವ ಸಿದ್ಧತೆಯನ್ನು ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಜೂನಿಯರ್ ಕಾಲೇಜ್ ಮೈದಾನದಲ್ಲಿ ಅ.25 ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಮಂತರ್ ಗೌಡ ಪಂದ್ಯಾವಳಿಯನ್ನು ಉದ್ಘಾಟಿಸಲಿದ್ದು, ಸಂಸದ ಸುನೀಲ್ ಬೋಸ್, ಶಾಸಕ ಅನಿಲ್ ಚಿಕ್ಕಮಾದು ಉಪಸ್ಥಿತರಿರುವರು. ಅ.27 ರ ಸಂಜೆ 5 ಗಂಟೆಗೆ ನಡೆಯುವ ಸಮಾರೋಪ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಶಾಸಕರಾದ ಡಾ.ಯತೀಂದ್ರ, ಗಣೇಶ್ ಪ್ರಸಾದ್, ಡಿ.ರವಿಶಂಕರ್, ಕೆ.ಹರೀಶ್‌ಗೌಡ ಭಾಗವಹಿಸಲಿದ್ದಾರೆ. ಮೊದಲನೇ ಬಹುಮಾನ 1 ಲಕ್ಷ, ಎರಡನೇ ಬಹುಮಾನ 50 ಸಾವಿರ, ಮೂರನೇ ಬಹುಮಾನ 25 ರೂಗಳನ್ನು ನಿಗದಿಪಡಿಸಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಫುಟ್ಬಾಲ್ ತಂಡಗಳು ಭಾಗಿಯಾಗಲಿವೆ. ನಂಜನಗೂಡು ತಾಲೂಕಿನಲ್ಲಿ ಮೊದಲ ಬಾರಿಗೆ ಇಂತಹ ರಾಜ್ಯಮಟ್ಟದ ಫುಟ್ಬಾಲ್ ಪಂದ್ಯಾವಳಿ ನಡೆಯುತ್ತಿರುವುದು ಹೆಮ್ಮೆ ತಂದಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಮುಖಂಡರಾದ ಗಣೇಶ್, ಮಹೇಶ್, ಮುದ್ದಹಳ್ಳಿ ಚಂದ್ರು ಉಪಸ್ಥಿತರಿದ್ದರು.

ಬಿಜೆಪಿ ಪಕ್ಷದ ಸದಸ್ಯತ್ವದಿಂದ ದೇಶದ ಅಭಿವೃದ್ಧಿ ಸಾಧ್ಯ



ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಶಾಸಕ ಹರ್ಷವರ್ಧನ್ ಚಾಲನೆ ನೀಡಿದರು.

ಮಲ್ಕುಂಡಿ, ಅ.23– ಬಿಜೆಪಿ ಹೆಚ್ಚಿನ ಸದಸ್ಯರನ್ನು ಹೊಂದಿರುವ ದೇಶದ ಒಂದು ದೊಡ್ಡ ರಾಷ್ಟ್ರೀಯ ಪಕ್ಷವಾಗಿದೆ ಎಂದು ತಿಳಿಸಿದ ಮಾಜಿ ಶಾಸಕ ಬಿ. ಹರ್ಷವರ್ಧನ್, ಬಿಜೆಪಿ ಸದಸ್ಯತ್ವದಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದರು.

ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಮಹಾಶಕ್ತಿ ಕೇಂದ್ರದ ವ್ಯಾಪ್ತಿಯ ಕುರಿಹುಂಡಿ, ತರಗನಹಳ್ಳಿ, ಕಪ್ಪಸೋಗೆ ಗ್ರಾಮಗಳಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿ ಆಡಳಿತದಿಂದ ದೇಶದಲ್ಲಿ ಉತ್ತಮ ರಸ್ತೆ, ಮೆಟ್ರೋ ವ್ಯವಸ್ಥೆ ಹೊಂದಿದೆ. ಯುವಕರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಮುದ್ರಾ ಯೋಜನೆಯಲ್ಲಿ ಸಾಲ ದೊರೆಯುತ್ತಿದೆ. ಕ್ಷೇತ್ರದ ಪ್ರತಿ ಗ್ರಾಮದಲ್ಲೂ ಪ್ರತಿಯೊಬ್ಬರು ಬಿಜೆಪಿ ಸದಸ್ಯತ್ವ ಹೊಂದುವ ಮೂಲಕ ಅಭಿವೃದ್ಧಿಗೆ ಕೈಜೋಡಿಸಿ 10 ವರ್ಷದಿಂದ ಮೋದಿಯವರ ಆಡಳಿತದಲ್ಲಿ ದೇಶವನ್ನು ಅಭಿವೃದ್ಧಿಪಥದತ್ತ ಕೊಂಡೊಯ್ಯುತ್ತಿದೆ ಎಂದು ತಿಳಿಸಿದರು.

ಹುಲ್ಲಹಳ್ಳಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಗುರುಪ್ರಸಾದ್, ತಾಲೂಕು ಪ್ರಧಾನ ಕಾರ್ಯದರ್ಶಿ ವಳಗೆರೆ ಪುಟ್ಟಸ್ವಾಮಿ, ಸಿದ್ದರಾಜು, ಮಂಜುನಾಥ್, ಬಸವರಾಜಪ್ಪ, ಕಣೆನೂರು ಪರಶಿವಮೂರ್ತಿ, ಗ್ರಾಪಂ ಸದಸ್ಯ ಕುಳ್ಳಯ್ಯ ಸೇರಿದಂತೆ ಪ್ರಮುಖರು ಹಾಜರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಹೆಚ್.ಡಿ.ಕೋಟೆ ಹೌಸಿಂಗ್ ಬೋರ್ಡ್ ಬಳಿ ಬೋನಿಗೆ ಬಿದ್ದ ಚಿರತೆ

ಒಂದೇ ತಿಂಗಳಲ್ಲಿ ಒಂದೇ ಪ್ರದೇಶದಲ್ಲಿ 4 ಚಿರತೆಗಳು ಸೆರೆ



ಹೆಚ್.ಡಿ.ಕೋಟೆ, ಅ.23– ಜನ–ಜಾನುವಾರುಗಳಿಗೆ ಉಪಟಳ ನೀಡುತ್ತಿದ್ದ ಚಿರತೆಯೊಂದು ಮಾಜಿ ಶಾಸಕ ನಾಗರಾಜು ಅವರ ಜಮೀನಿನಲ್ಲಿ ಅರಣ್ಯ ಇಲಾಖೆಯು ಇರಿಸಿದ್ದ ಬೋನಿಗೆ ಬಿದ್ದಿದೆ.

ಇಂದು ಬೋನಿಗೆ ಬಿದ್ದಿರುವ ಚಿರತೆ 6 ವರ್ಷದ ಗಂಡು ಚಿರತೆಯಾಗಿದ್ದು, ಪಟ್ಟಣದ ಹೌಸಿಂಗ್ ಬೋರ್ಡ್ ಸಮೀಪವಿರುವ ಜಮೀನಿನಲ್ಲಿ ಅರಣ್ಯ ಇಲಾಖೆಯವರು ಇರಿಸಿದ್ದ ಬೋನಿನಲ್ಲಿ ಒಂದೇ ತಿಂಗಳಲ್ಲಿ ನಾಲ್ಕು ಚಿರತೆಗಳು ಸೆರೆ ಸಿಕ್ಕಿದ್ದು, ಸುತ್ತಮುತ್ತಲಿನ ನಿವಾಸಿಗಳನ್ನು ಆತಂಕಕ್ಕೆ ದೂಡಿದೆ.

ಕಳೆದ ಒಂದು ವರ್ಷದಿಂದ ಈ ಭಾಗದಲ್ಲಿ ಚಿರತೆ ಹಾವಳಿ ಹೆಚ್ಚಾಗಿದ್ದು, ಮೇಕೆ, ಹಸು ಸೇರಿದಂತೆ ಸಾಕುಪ್ರಾಣಿಗಳ ಮೇಲೆ ದಾಳಿ ಮಾಡಿ ತಿಂದು ಹಾಕುತ್ತಿದ್ದವು. ಜೊತೆಗೆ ಸಾರ್ವಜನಿಕರಿಗೂ ಕಾಣಿಸಿಕೊಂಡು ಆತಂಕ ಸೃಷ್ಟಿಸಿದ್ದವು. ಇದರಿಂದ ಭಯಗೊಂಡ ನಿವಾಸಿಗಳು ಅರಣ್ಯ ಇಲಾಖೆಗೆ ಮನವಿ ಮಾಡಿ ಚಿರತೆ ಸೆರೆ ಹಿಡಿಯುವಂತೆ ಆಗ್ರಹಿಸಿದ್ದರು.

ಅದರಂತೆ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಇದುವರೆವಿಗೂ ನಾಲ್ಕು ಚಿರತೆಗಳು ಸೆರೆ ಸಿಕ್ಕಿವೆ. ಇಂದು ಬೋನಿಗೆ ಬಿದ್ದ ಚಿರತೆ ನೋಡಲು ಸಾರ್ವಜನಿಕರು ಮುಗಿಬಿದ್ದರು. ಈ ವೇಳೆ ಬೋನಿನಲ್ಲಿಯೇ ಚಿರತೆ ಸಾರ್ವಜನಿಕರ ಮೇಲೆ ದಾಳಿ ಮಾಡಲು ಮುನ್ನುಗ್ಗಿ ಆರ್ಭಟಿಸುತ್ತಿತ್ತು. ಈ ಪ್ರದೇಶದಲ್ಲಿ ಮತ್ತಷ್ಟು ಚಿರತೆಗಳಿರುವ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಸಾರ್ವಜನಿಕರು ಮತ್ತೆ ಬೋನ್ ಇಡುವಂತೆ ಆಗ್ರಹಿಸಿದ್ದಾರೆ.

ವಿಭಾಗೀಯ ಮಟ್ಟಕ್ಕೆ ಆಯ್ಕೆ



ಹೆಚ್.ಡಿ.ಕೋಟೆ ಶ್ರೀ ಆದಿಚುಂಚನಗಿರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿನಿಯರು ಹಾಗೂ ಲಯನ್ಸ್ ಅಕಾಡೆಮಿ ಶಾಲೆ ಸರಗೂರಿನ ವಿದ್ಯಾರ್ಥಿನಿಯರು 2024–25 ನೇ ಸಾಲಿನ ಜಿಲ್ಲಾಮಟ್ಟದ ಬಾಲ್ ಬ್ಯಾಡ್ಮಿಂಟನ್ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಪಡೆದು ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ತಂಡದ ನಾಯಕಿ ಕಾವ್ಯ, ಕೀರ್ತನ, ತನುಶ್ರೀ, ಅಮೃತ ಎಂ, ಅನ್ನಾ ತಸ್ಕೀನ್, ವಿದ್ಯಾಶ್ರೀ ಗೌಡ ಮತ್ತು ಸೈಯದ್ ರುಕಯ ಅವರನ್ನು ಮುಖ್ಯ ಶಿಕ್ಷಕಿ ನಂದಿನಿ, ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ

ಹುಣಸೂರು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಗೆ ಅಧ್ಯಕ್ಷರು, ಸದಸ್ಯರ ನೇಮಕ

ಇಂದು ಗ್ಯಾರಂಟಿ ಅನುಷ್ಠಾನ ಸಮಿತಿ ಕಚೇರಿ ಉದ್ಘಾಟನೆ

ಹುಣಸೂರು, ಅ.23– ರಾಜ್ಯ ಸರ್ಕಾರದ 'ಗ್ಯಾರಂಟಿ ಅನುಷ್ಠಾನ ಸಮಿತಿಗೆ ಹುಣಸೂರು ತಾಲೂಕಿನಿಂದ ಅಧ್ಯಕ್ಷರು ಹಾಗೂ ಸದಸ್ಯರನ್ನು ಸಮಾಜ ಕಲ್ಯಾಣ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ಆದೇಶದ ಮೇರೆಗೆ ನೇಮಕ ಮಾಡಲಾಗಿದೆ.

"ಹುಣಸೂರು ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗೆ ಕಲ್ಕುಣಿಕೆ ರಾಘು ಅವರನ್ನು ಅಧ್ಯಕ್ಷರಾಗಿ, ಪ್ರಸನ್ನ ಬಿಳಿಕೆರೆ, ಸುರೇಶ ಎನ್. ಹಂಚ್ಯ ಗ್ರಾಮ, ಚೌಡನಾಯ್ಕ ಬಿಳಿಕೆರೆ, ಪ್ರಶಾಂತ್ ಹೊಸೂರು ಗೇಟ್, ರುಹಿಬಾನು ಮರೂರು, ಸಂತೋಷ ಸದಾಶಿವನ ಕೊಪ್ಪಲು, ಗೋವಿಂದರಾಜು ಎಂ.ಪಿ ಕೆಬ್ಬೆಕೊಪ್ಪಲು, ಸುದರ್ಶನ್ ಸಿಂಗ್ ರತ್ನಪುರಿ ಕಾಲೋನಿ, ಶಿವಣ್ಣ ಅಯ್ಯನಕೆರೆ ಗಿರಿಜನ ಹಾಡಿ, ಮುಜೀಬ್, ಲಾಲ್‌ಬಾನ್ ಬೀದಿ, ಹುಣಸೂರು ಮಹೇಶ್ ಎಸ್. ಬೀರತಮ್ಮನಹಳ್ಳಿ, ಕೌಶಿಕ್ ಕೆ.ಎಸ್ ಅರಸು ಕಲ್ಲಹಳ್ಳಿ, ಮಮತಬಾಯಿ ಬೀಜಗನಹಳ್ಳಿ, ಮೋಹನ್ ಕುಮಾರ್ ಹುಣಸೂರು ಇವರುಗಳನ್ನು ಸದಸ್ಯರಾಗಿ ಹಾಗೂ ತಾಪಂ ಇಓ ಅಧಿಕಾರಿಯನ್ನು ಕಾರ್ಯದರ್ಶಿಯಾಗಿ ನೇಮಿಸಿ ಆದೇಶಿಸಿದೆ.

ಗುರುವಾರ ಕಚೇರಿ ಉದ್ಘಾಟನೆ: ಹುಣಸೂರು ತಾಲೂಕಿನ ಗ್ಯಾರಂಟಿ ಅನುಷ್ಠಾನ ಸಮಿತಿಯ ಕಚೇರಿಯನ್ನು ತಾಪಂ ಆವರಣದ ಕಟ್ಟಡದಲ್ಲಿ ತೆರಯಲಾಗಿದ್ದು, ಕಚೇರಿಯನ್ನು ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್ ಗುರುವಾರ ಬೆಳಗ್ಗೆ 10.30 ಗಂಟೆಗೆ ಉದ್ಘಾಟಿಸಲಿದ್ದಾರೆ ಎಂದು ತಾ ಸಮಿತಿಯ ಅಧ್ಯಕ್ಷ ಕಲ್ಕುಣಿಕೆ ರಾಘು ತಿಳಿಸಿದ್ದಾರೆ.

ನ.1, ನರಸೀಪುರದಲ್ಲಿ ಅದ್ದೂರಿ ಕನ್ನಡ ರಾಜ್ಯೋತ್ಸವ

ತಾಲೂಕು ಪಂಚಾಯಿತಿಯಿಂದ ನಿರ್ಧಾರ





ತಿ.ನರಸೀಪುರ ತಾಪಂ ಸಭಾಂಗಣದಲ್ಲಿ ಬುಧವಾರ ಕನ್ನಡ ರಾಜ್ಯೋತ್ಸವ ಆಚರಣೆ ಸಲುವಾಗಿ ಪೂರ್ವಭಾವಿಯಾಗಿ ಕರೆಯಲಾಗಿದ್ದ ಸಭೆಯಲ್ಲಿ ತಹಶೀಲ್ದಾರ್ ಟಿ.ಜಿ.ಸುರೇಶಾಚಾರ್ ಮಾತನಾಡಿದರು. ಅನಂತರಾಜು, ಕನ್ನಡ ಪುಟ್ಟಸ್ವಾಮಿ, ವಸಂತಕುಮಾರಿ. ಹಾಗೂ ವಿವಿಧ ಪಕ್ಷದ ಮುಖಂಡರು ಭಾಗವಹಿಸಿದ್ದರು

ತಿ.ನರಸೀಪುರ, ಅ.23– ನಾಡು ನುಡಿ ಏಕೀಕರಣಗೊಂಡು ಐವತ್ತು ವರ್ಷಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ತಾಲೂಕು ಕೇಂದ್ರವಾದ ಪಟ್ಟಣದಲ್ಲಿ ನ.1 ರಂದು ಸುವರ್ಣ ಕನ್ನಡ ರಾಜ್ಯೋತ್ಸವವನ್ನು ಅದ್ದೂರಿಯಾಗಿ ವಿಜೃಂಭಣೆಯಿಂದ ಆಚರಿಸಲು ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ನಡೆದ ಪೂರ್ವ ಸಿದ್ಧತಾ ಸಭೆಯಲ್ಲಿ ನಿರ್ಧರಿಸಲಾಯಿತು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಣೆಯ ಪೂರ್ವಭಾವಿಯಾಗಿ ಕರೆಯಲಾಗಿದ್ದ ಸಭೆಯಲ್ಲಿ ಸಾಂಪ್ರದಾಯಿಕವಾಗಿ ರಾಜ್ಯೋತ್ಸವ ಕಾರ್ಯಕ್ರಮವನ್ನು ಆಯೋಜಿಸಿ ಮಾತೃಭಾಷೆ ಕನ್ನಡದಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿ ತೇರ್ಗಡೆಯಾಗಿರುವ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸುವುದು. ನಾಡಿಗಾಗಿ ದುಡಿದ ಸಾಧಕರನ್ನು ಸನ್ಮಾನಿಸುವುದು ಹಾಗೂ ವಿಶೇಷವಾಗಿ ಕವಿಗೋಷ್ಠಿಯನ್ನು ಆಯೋಜಿಸಲು ತೀರ್ಮಾನಿಸಲಾಯಿತು.

ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಮಾತನಾಡಿ, ವಿಜೃಂಭಣೆಯ ಕನ್ನಡ ರಾಜ್ಯೋತ್ಸವದ ಆಚರಣೆಗೆ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಿದೆ. ಸಭೆಯಲ್ಲಿ ಚರ್ಚೆ ನಡೆಸಿದಂತೆ ನಾಡಿನ ಹಿರಿಮೆಯ ಇತಿಹಾಸವನ್ನು ಪ್ರಸ್ತುತಪಡಿಸುವ ಭಾಷಣಕಾರರನ್ನು ಆಯ್ಕೆ ಮಾಡಿ, ಆಹ್ವಾನಿಸಲಾಗುವುದು. ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸಿ, ಸಾಧಕರನ್ನ ಗುರುತಿಸಿ ಸನ್ಮಾನಿಸಲಾಗುವುದು. ಶಿಕ್ಷಣ ಇಲಾಖೆಯ ಜೊತೆ ಸಮಾಲೋಚನೆ ನಡೆಸಿ ಶ್ರೀ ಭುವನೇಶ್ವರಿ ಮೆರವಣಿಗೆಯ ಬಗ್ಗೆ ತೀರ್ಮಾನಿಸಿ, ಸಮಾರಂಭಕ್ಕೆ ಮುಖ್ಯಮಂತ್ರಿಗಳು ಸೇರಿದಂತೆ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ವಿಧಾನಪರಿಷತ್ ಸದಸ್ಯರು ಸೇರಿದಂತೆ ಎಲ್ಲಾ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ ಮಾತನಾಡಿ, ರಾಜ್ಯದಾದ್ಯಂತ ಸುವರ್ಣ ಕನ್ನಡ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಣೆ ಮಾಡುವಂತೆ ಸರ್ಕಾರವೇ ನಿರ್ಧರಿಸುವುದರಿಂದ ತಾಲೂಕಿನಲ್ಲಿಯೂ ಕನ್ನಡ ರಾಜ್ಯೋತ್ಸವ ಅದ್ದೂರಿಯಾಗಿ ಆಯೋಜನೆಯಾಗಬೇಕು. ಸಿಎಂ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಂಸದರನ್ನು ಕಾರ್ಯಕ್ರಮಕ್ಕೆ ಖುದ್ದಾಗಿ ಭೇಟಿ ಮಾಡಿ ಆಹ್ವಾನಿಸಬೇಕು. ಸಾಂಪ್ರದಾಯಿಕ ಆಚರಣೆಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಡಬೇಕು ಎಂದು ತಿಳಿಸಿದರು.

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿ, ಸುವರ್ಣ ಕನ್ನಡ ರಾಜ್ಯೋತ್ಸವ ಆಚರಣೆಯಾಗುತ್ತಿರುವುದರಿಂದ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸುವ ಬಗ್ಗೆ ತಹಸಿಲ್ದಾರರು ಕಟ್ಟುನಿಟ್ಟಿನ ಸೂಚನೆಯನ್ನು ನೀಡಬೇಕು. ನಾಡು ನುಡಿ ಮತ್ತು ಏಕೀಕರಣದ ಬಗ್ಗೆ ತಿಳಿದಿರುವಂತಹ ಸ್ಥಳೀಯವಾಗಿರುವ ವ್ಯಕ್ತಿಗಳನ್ನೇ ಮುಖ್ಯ ಭಾಷಣಕಾರರನ್ನಾಗಿ ಆಹ್ವಾನಿಸಬೇಕು. ಸಾಧ್ಯವಾದರೆ ಶ್ರೀ ಗುಂಜ ನರಸಿಂಹ ಸ್ವಾಮಿ ದೇವಾಲಯದಿಂದ ತಾಲೂಕು ಕಚೇರಿವರೆಗೆ ರಾಜ್ಯೋತ್ಸವದ ಮೆರವಣಿಗೆ ಯನ್ನು ಆಯೋಜಿಸಬೇಕು ಎಂದು ಸಲಹೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾ ಘಟಕದ ಅಧ್ಯಕ್ಷ ಎಂ. ಸಿ.ಮಂಜುಳ ಸೇರಿದಂತೆ ಮುಖಂಡ ಎ ಶಿವಕುಮಾರ್ (ಬಡ್ಡು), ಸಿ.ಪುಟ್ಟಮಲ್ಲಯ್ಯ ಮಾತನಾಡಿದರು. ಸಭೆಗೆ ಗೈರು ಹಾಜರಾದ ಅಧಿಕಾರಿಗಳಿಗೆ ನೋಟಿಸ್ ನೀಡಿ, ಶಿಸ್ತು ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವ ನಿರ್ಣಯವನ್ನು ಸಭೆಯಲ್ಲಿ ತೆಗೆದುಕೊಳ್ಳಲಾಯಿತು.

ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಪಿ.ಎಂ. ಅನಂತರಾಜು, ಪುರಸಭೆ ಮುಖ್ಯಾಧಿಕಾರಿಗಳಾದ ವಸಂತಕುಮಾರಿ, ಹೇಮಂತ್ ರಾಜು, ಎ ಇ ಇ ವೀರೇಶ್, ಸಹಾಯಕ ಕೃಷಿ ನಿರ್ದೇಶಕಿ ಸುಹಾಸಿನಿ, ಸಹಾಯಕ ತೋಟಗಾರಿಕೆ ನಿರ್ದೇಶಕಿ ಶಾಂತ, ಸಹಾಯಕ ಅರಣ್ಯಾಧಿಕಾರಿ, ಉಮೇಶ್, ಬಾಬೂಜಿ ಸಂಘದ ಅಧ್ಯಕ್ಷ ಸಿ.ಪುಟ್ಟಯ್ಯ, ಕೆಪಿಸಿಸಿ ಅಲ್ಪಸಂಖ್ಯಾತರ ಸಂಚಾಲಕ ಬಿ.ಮನ್ಸೂರ್ ಆಲಿ, ಕನ್ನಡ ಸಾಹಿತ್ಯ ಪರಿಷತ್ನ ಹೋಬಳಿ ಅಧ್ಯಕ್ಷ ಸಿದ್ದಪ್ಪ, ಯುವಕವಿ ನಂದೀಶ್, ಮುಖಂಡರಾದ ಕೃಷ್ಣಮೂರ್ತಿ, ಮೇಗಡಹಳ್ಳಿ ಪ್ರಭಾಕರ್, ಡಿ.ಮಾದೇಶ್, ಕರುಣೇಶ್, ವಾಟಾಳು ಸಾಗರ್, ಚಿನ್ನಸ್ವಾಮಿ, ಬೈಕ್ ಜಾಫರ್, ಯೋಗಾನಂದ ಹಾಗೂ ಇತರರು ಇದ್ದರು.

ಅ.27ರಂದು ದಸರಾ ವಸ್ತುಪ್ರದರ್ಶನದಲ್ಲಿ 'ಗಂಧದ ಗುಡಿ' ಚಿತ್ರಕಲಾ ಸ್ಪರ್ಧೆ



'ಗಂಧದ ಗುಡಿ' ಚಿತ್ರಕಲಾ ಸ್ಪರ್ಧೆ ಪೋಸ್ಟರ್ ಅನ್ನು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಬುಧವಾರ ಬಿಡುಗಡೆ ಮಾಡಿದರು.

ಮೈಸೂರು, ಅ.23(ಎಂಕೆ)– ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಕರ್ನಾಟಕ ರತ್ನ ಅಪ್ಪು ಅಭಿಮಾನಿಗಳ ಬಳಗದ ಸಹಯೋಗದೊಂದಿಗೆ ಅ.27 ರಂದು ಆಯೋಜಿಸಿರುವ 'ಗಂಧದ ಗುಡಿ' ಚಿತ್ರಕಲಾ ಸ್ಪರ್ಧೆಯ ಪೋಸ್ಟರ್ ಹಾಗೂ ಪ್ರಚಾರ ಸಾಮಾಗ್ರಿಗಳನ್ನು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಬುಧವಾರ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಕನ್ನಡ ಚಿತ್ರರಂಗದ ವರನಟ ಡಾ.ರಾಜಕುಮಾರ್ ರವರ ಪ್ರತಿಯೊಂದು ಚಿತ್ರವೂ ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತಿದ್ದವು. ಅವರಂತೆಯೇ ಅವರ ಪುತ್ರ ದಿವಂಗತ ಡಾ.ಪುನೀತ್ ರಾಜಕುಮಾರ್ ಅವರ ನಟನೆಯ ಚಿತ್ರಗಳು ಸಹ ಸಮಾಜದಲ್ಲಿ ಜಾಗೃತಿ ಮೂಡಿಸುತ್ತಿದ್ದವು. ಡಾ.ಪುನೀತ್ ರಾಜ್‌ಕುಮಾರ್ ಅವರ ನೆನಪಿನಲ್ಲಿ ಆಯೋಜಿಸಿರುವ 'ಗಂಧದ ಗುಡಿ' ಚಿತ್ರಕಲಾ ಸ್ಪರ್ಧೆಯಲ್ಲಿ ನಗರದ ಪ್ರತಿ ಶಾಲೆಯ ಮಕ್ಕಳು ಭಾಗವಹಿಸಬೇಕು. ಪೋಷಕರು ತಮ್ಮ ಮಕ್ಕಳನ್ನು ಕರೆದುಕೊಂಡು ಬಂದು ಭಾಗವಹಿಸಿ ಎಂದು ತಿಳಿಸಿದರು.

ಅಪ್ಪು ಸ್ಮರಣೆಯಲ್ಲಿ ಸ್ಪರ್ಧೆ...

ಮಕ್ಕಳಲ್ಲಿ ಪರಿಸರ, ವನ್ಯಜೀವಿಗಳು ಹಾಗೂ ಅರಣ್ಯ ಪ್ರದೇಶಗಳ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ 'ಗಂಧದ ಗುಡಿ' ಚಿತ್ರಕಲಾ ಸ್ಪರ್ಧೆ ಇದಾಗಿದ್ದು, ಅ.27ರಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 1 ಗಂಟೆಯವರೆಗೆ ವಸ್ತುಪ್ರದರ್ಶನದ ಪಿ. ಕಾಳಿಂಗರಾವ್ ಗಾನಮಂಟಪದಲ್ಲಿ ನಡೆಯಲಿದೆ. 8 ರಿಂದ 12 ವರ್ಷ, 12 ರಿಂದ 18 ಹಾಗೂ 18 ವರ್ಷ ಮೇಲ್ಪಟ್ಟವರು ಸೇರಿದಂತೆ ಮೂರು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದ್ದು, ಪರಿಸರ ಬೆಟ್ಟ–ಗುಡ್ಡಗಳು, ನದಿ–ಕೆರೆ, ವನ್ಯಜೀವಿಗಳು ಅಭಯಾರಣ್ಯ, ಜಲಪಾತ ಹಾಗೂ ನಿಸರ್ಗಕ್ಕೆ ಸಂಬಂಧಪಟ್ಟ ಚಿತ್ರಗಳನ್ನು ಬಿಡಿಸಬೇಕಿದೆ. ವಿಜೇತರಿಗೆ ಬಹುಮಾನದ ಜೊತೆಗೆ ಭಾಗವಹಿಸುವ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಗುವುದು. ಪ್ರವೇಶ ಉಚಿತವಾಗಿದ್ದು, ಚಿತ್ರ ರಚನೆಗೆ ಅಗತ್ಯವಿರುವ ಕಾರ್ಡ್‌ಬೋರ್ಡ್ ಮಾತ್ರ ನೀಡಲಾಗುವುದು. ಕಲರ್ಸ್, ವಾಟರ್ ಪೇಂಟಿಂಗ್ ಸೇರಿದಂತೆ ಇನ್ನಿತರೆ ಅವಶ್ಯಕ ಪದಾರ್ಥಗಳನ್ನು ಸ್ಪರ್ಧಿಗಳೇ ತರಬೇಕು. ಹೆಚ್ಚಿನ ಮಾಹಿತಿಗಾಗಿ 9880358761/9880752727 ಸಂಪರ್ಕಿಸಬಹುದಾಗಿದೆ.

ದಸರಾ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಮಹಿಳಾ ಮತ್ತು ಮಕ್ಕಳ ಉಪಸಮಿತಿ ಅಧ್ಯಕ್ಷೆ ಶಾರದಾ ಸಂಪತ್, ಶೌಕತ್ ಅಲಿಖಾನ್, ಲತಾ ರಂಗನಾಥ್, ಜಗದೀಶ್, ಗಿರೀಶ್, ಜಫ್ರುಲ್ಲಾ, ಶಾಂತ, ಕಮಲಮ್ಮ, ಸರ್ದಾರ್ ಶರೀಫ್, ಸಯ್ಯದ್ ಫಾರುಕ್, ನಿರೂಪಕ ಅಜಯ್ ಶಾಸ್ತ್ರಿ ಮತ್ತಿತರರಿದ್ದರು.

ದಸರಾ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಮಹಿಳಾ ಮತ್ತು ಮಕ್ಕಳ ಉಪಸಮಿತಿ ಅಧ್ಯಕ್ಷೆ ಶಾರದಾ ಸಂಪತ್, ಶೌಕತ್ ಅಲಿಖಾನ್, ಲತಾ ರಂಗನಾಥ್, ಜಗದೀಶ್, ಗಿರೀಶ್, ಜಫ್ರುಲ್ಲಾ, ಶಾಂತ, ಕಮಲಮ್ಮ, ಸರ್ದಾರ್ ಶರೀಫ್, ಸಯ್ಯದ್ ಫಾರುಕ್, ನಿರೂಪಕ ಅಜಯ್ ಶಾಸ್ತ್ರಿ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವಿಶ್ವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೆಟ್ಟೈಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜಿಗ್ರಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾರ್ಟಿನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಟಿನ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭೈರಾದೇವಿ (ಕ)	4 ಪ್ರದರ್ಶನಗಳು
ಸಂಗಂ	
ಮಾರ್ಟಿನ್ (ಕ)	4 ಪ್ರದರ್ಶನಗಳು
ಲಿಡೋ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಿಂಹರೂಪಿಣಿ (ಕ)	4 ಪ್ರದರ್ಶನಗಳು
ಪ್ರಭಾ	
ಭೀಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವೆಟ್ಟೈಯನ್ (ತ): ಬೆ.9.55ಕ್ಕೆ, ಸಂ.4ಕ್ಕೆ, ರಾ.10.05ಕ್ಕೆ, ಮಾರ್ಟಿನ್ (ಕ): ಮ.1.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ಜಿಗ್ರಾ (ಹಿಂ): ಬೆ.10.15ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಮಾರ್ಟಿನ್ (ಕ): ಮ.1.15ಕ್ಕೆ, ಬ್ಲ್ಯಾಕ್ (ತ): ಸಂ.4.30ಕ್ಕೆ.
ಸ್ಕ್ರೀನ್ 3	ಮಾರ್ಟಿನ್ (ಕ): ಬೆ.10.10ಕ್ಕೆ, ರಾ.7ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ಅನ್ನ (ಕ): ಸಂ.4.30ಕ್ಕೆ, ವಿಕ್ಕಿ ವಿದ್ಯಾ ಕಾ ಹೂ ವಾಲ ವೀಡಿಯೋ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಬೆ.9ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ವೆಟ್ಟೈಯನ್ (ತ): ಮ.12.50ಕ್ಕೆ, ಸಂ.6.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ದೇವರ 1 (ತೆ): ಮ.12.20ಕ್ಕೆ, ವೆಟ್ಟೈಯನ್ (ತ): ಮ.3.35ಕ್ಕೆ, ಸಂ.6.40ಕ್ಕೆ, ಮಾರ್ಟಿನ್ (ಕ): ರಾ.9.45ಕ್ಕೆ.
ಸ್ಕ್ರೀನ್ 2	ವೆಟ್ಟೈಯನ್ (ತ): ಬೆ.10ಕ್ಕೆ, ಮಾರ್ಟಿನ್ (ಕ): ಮ.1ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಮಾರ್ಟಿನ್ (ಕ): ಬೆ.9ಕ್ಕೆ, ಬೆ.11.50ಕ್ಕೆ, ಮ.2.40ಕ್ಕೆ, ಸಂ.5.30ಕ್ಕೆ, ವೆಟ್ಟೈಯನ್ (ತ): ರಾ.8.20ಕ್ಕೆ.
ಸ್ಕ್ರೀನ್ 4	ವೆಟ್ಟೈಯನ್ (ಕ): ಮ.12.25ಕ್ಕೆ, ವೆಟ್ಟೈಯನ್ (ತ): ಮ.3.30ಕ್ಕೆ, ಸಂ.6.35ಕ್ಕೆ, ರಾ.9.40ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕಟ್ಟೆಮಳಲವಾಡಿ ಅಣೆಕಟ್ಟು ನಾಲೆಯನ್ನು ಕಾಂಕ್ರಿಟ್ ಲೈನಿಂಗ್ ಮಾಡಿ

ಸತ್ಯ ಎಂಎಸ್ ಫೌಂಡೇಷನ್‌ನಿಂದ ಮನವಿ ಸಲ್ಲಿಕೆ



ಕಟ್ಟೆಮಳಲವಾಡಿ ಅಣೆಕಟ್ಟು ನಾಲೆಯನ್ನು ಕಾಂಕ್ರಿಟ್ ಲೈನಿಂಗ್ ಮಾಡುವಂತೆ ಮನವಿ ಸಲ್ಲಿಸಲಾಯಿತು.

ಮೈಸೂರು,ಅ.23(ಪಿಎಂ)– ಮೈಸೂರು ಮಹಾರಾಜರ ಕಾಲದಲ್ಲಿ ನಿರ್ಮಿಸಿರುವ ಕಟ್ಟೆಮಳಲವಾಡಿ ಅಣೆಕಟ್ಟು ನಾಲಾ ವ್ಯಾಪ್ತಿಯಲ್ಲಿ ತುಂಬಿರುವ ಹೂಳು ತೆರವುಗೊಳಿಸಿ, ನಾಲೆ ಕಾಂಕ್ರಿಟ್ ಲೈನಿಂಗ್ ಮಾಡುವ ಮೂಲಕ ರೈತರಿಗೆ ಅನುಕೂಲ ಕಲ್ಪಿಸುವಂತೆ ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಅಭಿಯಂತರ ಬಿ.ಮಂಜುನಾಥ್ ಅವರಿಗೆ ಸತ್ಯ ಎಂಎಸ್ ಫೌಂಡೇಷನ್ ಅಧ್ಯಕ್ಷ ಸತ್ಯಪ್ಪ ಸೋಮವಾರ ಮನವಿ ಸಲ್ಲಿಸಿದರು.

ಕಾರ್ಯಪಾಲಕ ಅಭಿಯಂತರರ ಕಚೇರಿಯಲ್ಲಿ ಮನವಿ ಸಲ್ಲಿಸಿ ಮಾತನಾಡಿದ ಅವರು, ಮೈಸೂರು ಮಹಾರಾಜರ ಕಾಲದಲ್ಲಿ ಕಟ್ಟೆಮಳಲವಾಡಿ ಅಣೆಕಟ್ಟು ನಿರ್ಮಾಣಗೊಂಡಿದ್ದು, ಇದರ ನಾಲೆಯಿಂದ 1,500 ಎಕರೆ ಪ್ರದೇಶಗಳಿಗೆ ನೀರು ಹರಿಯುವ ಮೂಲಕ ರೈತರಿಗೆ ಅನುಕೂಲವಾಗುತ್ತಿತ್ತು. ಆದರೆ ಈಗ ನಾಲಾ ವ್ಯಾಪ್ತಿಯಲ್ಲಿ ಹೂಳು ತುಂಬಿಕೊಂಡಿದ್ದು, ಗಿಡಗಂಟಿಗಳು ಬೆಳೆದು ಜಮೀನಿಗಳಿಗೆ ಸರಿಯಾಗಿ ನೀರು ಹರಿದು ಬರಲು ಕಷ್ಟ ಸಾಧ್ಯವಾಗಿದೆ ಎಂದರು.

ನಾಲೆಯಿಂದ ನೀರು ಹರಿದು ಮುಂದೆ ಸಾಗಿ ಹೊಡಕೆಕಟ್ಟೆ ಹಾಗೂ ಅಕ್ಕಪಕ್ಕದ ಕೆರೆಗಳಿಗೆ ಹೋಗುತ್ತದೆ. ಈ ಬಾರಿಯ ಉತ್ತಮ ಮಳೆಯಿಂದ ಲಕ್ಷ್ಮಣತೀರ್ಥ ನದಿ ತುಂಬಿ ಹರಿದು ಅಣೆಕಟ್ಟುಗಳಲ್ಲಿ ಅಗತ್ಯವಿರುವಷ್ಟು ನೀರು ಶೇಖರಣೆಯಾಗಿದೆ. ಕಿರಿಸೊಡ್ಲು, ರಾಮ ಪಟ್ಟಣ, ಅಗ್ರಹಾರ, ಸೋಮನಹಳ್ಳಿ, ತೊಂಡಾಳು, ಉಂಡವಾಡಿ, ಹುಲ್ಯಾಳು, ಗಾವಡಗೆರೆ, ಬಿಳಿಗೆರೆ ಮಾರಗೌಡನಹಳ್ಳಿ, ಕಟ್ಟೆಮಳಲವಾಡಿ ಮತ್ತು ಕಟ್ಟೆಮಳಲ ವಾಡಿ ಕೊಪ್ಪಲು, ಉಯಿಗೌಡನಹಳ್ಳಿ ಗ್ರಾಮಗಳ ರೈತರ ಜಮೀನುಗಳಿಗೆ ಈ ನಾಲೆಯಿಂದ ನೀರು ಹರಿದು ಬರುತ್ತಿದೆ. ಆದರೆ ಕಳೆದ 20 ವರ್ಷಗಳಿಂದಲೂ ನಾಲೆಯಲ್ಲಿ ಹೂಳು ತುಂಬಿಕೊಂಡು ಹಾಗೂ ಗಿಡಗಂಟಿಗಳು ಬೆಳೆದಿರುವ ಕಾರಣ ನೀರು ನಾಲೆಯಲ್ಲಿ ಸರಾಗವಾಗಿ ಹರಿದು ಹೋಗುವ ಪರಿಸ್ಥಿತಿ ಇಲ್ಲವಾಗಿದೆ. ಇದರಿಂದ ರೈತರು ಬೆಳೆದ ಭತ್ತದ ಬೆಳೆಗೆ ಸರಿಯಾಗಿ ನೀರು ಪೂರೈಕೆ ಆಗದೇ ಭತ್ತದ ಫಸಲಿನಲ್ಲಿ ನಷ್ಟ ಉಂಟಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಹಾರಂಗಿ ವ್ಯಾಪ್ತಿಯ ಅಧಿಕಾರಿಗಳು, ತಾಲೂಕಿನ ಶಾಸಕರು, ಸಂಸದರು, ಜಿಲ್ಲಾ ಉಸ್ತುವಾರಿ ಸಚಿವರು ಈ ಬಗ್ಗೆ ಕೂಡಲೆ ಕ್ರಮ ಕೈಗೊಂಡು 2–3ದಿನಗಳಲ್ಲಿ ಹೂಳನ್ನು ತೆಗದು ನೀರು ಸರಾಗವಾಗಿ ಹರಿದು ಹೋಗಲು ಅನುಕೂಲ ಮಾಡಿಕೊಡಬೇಕು. ಕಳೆದ 3 ವರ್ಷಗಳ ಹಿಂದೆ 3 ಕೋಟಿ ವೆಚ್ಚದಲ್ಲಿ ಅಣೆಕಟ್ಟು ಅಭಿವೃದ್ಧಿ ಮಾಡಲಾಗಿದ್ದು, ಆದರೆ ಸಮಗ್ರ ದುರಸ್ತಿ ಸಾಧ್ಯವಾಗಿಲ್ಲ. ಹಾಗಾಗಿ ಕೂಡಲೇ ನಾಲೆಯ ಕಾಂಕ್ರಿಟ್ ಲೈನಿಂಗ್ ಕಾಮಗಾರಿ ಕೈಗೊಳ್ಳಬೇಕು ಎಂದು ಕೋರಿದರು.

ಮನವಿ ಸ್ವೀಕರಿಸಿದ ಹಾರಂಗಿ ಬಲದಂಡೆ ನಾಲಾ ವಿಭಾಗದ ಕಾರ್ಯಪಾಲಕ ಅಭಿಯಂತರ ಬಿ.ಮಂಜುನಾಥ್ ಮಾತನಾಡಿ, ಈಗಾಗಲೇ ಕಾಂಕ್ರಿಟ್ ಲೈನಿಂಗ್ ಕಾಮಗಾರಿ ಮೂಲಕ ನಾಲೆ ಶಾಶ್ವತ ಅಭಿವೃದ್ಧಿಗಾಗಿ 49 ಕೋಟಿ 85 ಲಕ್ಷ ರೂ.ಗಳ ಅಂದಾಜು ಮೊತ್ತದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಶೀಘ್ರದಲ್ಲಿ ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡುವುದಾಗಿ ಅವರು ತಿಳಿಸಿದರು.

ನಿಗಮದ ಸಹಾಯಕ ಕಾರ್ಯಪಾಲಕ ಅಭಿಯಂತರ ಸಂತೋಷ್, ಇಂಜಿನಿಯರ್ ಜಗನ್ನಾಥ್, ಕರ್ನಾಟಕ ರಾಜ್ಯ ಅನ್ನದಾತ ರೈತ ವಿದ್ಯುತ್ ಪಂಪ್‌ಸೆಟ್ ಬಳಕೆದಾರರ ಸಂಘದ ರಾಜ್ಯಾಧ್ಯಕ್ಷ ಹಾಗೂ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾಧ್ಯಕ್ಷ ಕೃಷ್ಣೇಗೌಡ, ರೈತ ಮುಖಂಡ ಪುರುಷೋತ್ತಮ್, ತಾಲೂಕು ಮಡಿವಾಳ ಸಂಘದ ಕಾರ್ಯದರ್ಶಿ ನಾಗಪ್ಪ ಮತ್ತಿತರರು ಹಾಜರಿದ್ದರು.

ನಕಲಿ ಆಧಾರ್ ಕಾರ್ಡ್ ಹೊಂದಿದ್ದ ಮೂವರು ಬಾಂಗ್ಲಾ ಪ್ರಜೆಗಳ ಬಂಧನ

ಹಾಸನ: ಪಶ್ಚಿಮ ಬಂಗಾಳದಲ್ಲಿ ನಕಲಿ ಆಧಾರ್ ಕಾರ್ಡ್ ಪಡೆದು ಅಕ್ರಮವಾಗಿ ಹಾಸನದಲ್ಲಿ ವಾಸಿಸುತ್ತಿದ್ದ ಮೂವರು ಬಾಂಗ್ಲಾ ಪ್ರಜೆಗಳನ್ನು ಹಾಸನ ನಗರ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದಾರೆ. ಬಾಂಗ್ಲಾದೇಶದಿಂದ ಪಶ್ಚಿಮ ಬಂಗಾಳಕ್ಕೆ ನುಸುಳಿದ್ದ ಜಮಾಲ್ ಅಲಿ, ಫಾರೂಕ್ ಅಲಿ ಮತ್ತು ಅಕ್ಮಲ್ ಹಬ್ಬು ಅವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಕಟ್ಟಡ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದ ಮೂವರು, ಹಾಸನದ ಗದ್ದೆಹಳ್ಳ ಬಡಾವಣೆಯಲ್ಲಿರುವ ಜುಬೇರ್ ಎಂಬುವರಿಗೆ ಸೇರಿದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಇವರು ಇತ್ತೀಚೆಗೆ ಬೆಂಗಳೂರು ಮೂಲಕ ಹಾಸನಕ್ಕೆ ಬಂದಿದ್ದರು ಎನ್ನಲಾಗಿದೆ.

ಈಶಾನ್ಯ ರಾಜ್ಯಗಳಿಂದ ವಲಸೆ ಬಂದು ಜಿಲ್ಲೆಯ ಕಾಫಿ ಎಸ್ಟೇಟ್ ಮತ್ತು ಕಟ್ಟಡ ನಿರ್ಮಾಣ ಕೆಲಸ ಮಾಡುತ್ತಿರುವವರ ಆಧಾರ್ ವಿವರಗಳನ್ನು ಜಿಲ್ಲಾಡಳಿತ ಪರಿಶೀಲಿಸಬೇಕು ಎಂದು ಹಲವು ಸ್ಥಳೀಯ ಸಂಸ್ಥೆಗಳ ಸದಸ್ಯರು ಇತ್ತೀಚಿಗೆ ಆಗ್ರಹಿಸಿದ್ದರು.

ಅಗ್ನಿವೀರರಾಗಿ ಆಯ್ಕೆಯಾದ ದರ್ಶನ್‌ಗೆ ಅಭಿನಂದನೆ



ಭಾರತೀಯ ಸೇನೆಗೆ ಅಗ್ನಿವೀರರಾಗಿ ಆಯ್ಕೆ ಯಾಗಿರುವ ಬೆಳವಾಡಿ ಸಿಲಿಕಾನ್ ವ್ಯಾಲಿ ಬಡಾವಣೆಯಲ್ಲಿರುವ ಸೈನಿಕ ಅಕಾಡೆಮಿ ಶಾಲೆಯ ಅಭ್ಯರ್ಥಿ ಹಾಗೂ ಮಡಿಕೇರಿ ನಿವಾಸಿ ವಿ.ಆರ್.ದರ್ಶನ್ ಅವರನ್ನು ಸೈನಿಕ ಅಕಾಡೆಮಿ ಸಂಸ್ಥಾಪಕ ಸಿ.ಎಂ.ಶ್ರೀಧರ್ ಅಭಿನಂದಿಸಿದರು.

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಹ್ಯಾಕಥಾನ್

ಮೈಸೂರು, ಅ. 23– ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್ (ವಿವಿಸಿಇ) ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗವು ಅ. 25 ಮತ್ತು 26 ರಂದು ವಿವಿಸಿಇ ಕ್ಯಾಂಪಸ್ ನಲ್ಲಿರುವ ಎಚ್.ಕೆಂಪೇಗೌಡ ಒಳಾಂಗಣ ಕ್ರೀಡಾ ಸಂಕೀರ್ಣದಲ್ಲಿ 24 ಗಂಟೆಗಳ ಹ್ಯಾಕಥಾನ್ 'ಹ್ಯಾಕ್‌ಕ್ಷೇತ್ರ' ಅನ್ನು ಬೆಳಿಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ.

ರಾಜ್ಯದ ವಿವಿಧ ಇಂಜಿನಿಯರಿಂಗ್ ಕಾಲೇಜುಗಳಿಂದ 260ಕ್ಕೂ ಹೆಚ್ಚು ತಂಡಗಳು ಹ್ಯಾಕಥಾನ್‌ಗೆ ನೋಂದಾಯಿಸಿಕೊಂಡಿವೆ. ಮತ್ತು ಒಟ್ಟು 60 ತಂಡಗಳನ್ನು ಈವೆಂಟ್‌ನಲ್ಲಿ ಭಾಗವಹಿಸಲು ಶಾರ್ಟ್‌ಲಿಸ್ಟ್ ಮಾಡಲಾಗಿದೆ. ಎಐ ಮತ್ತು ಡೊಮೇನ್‌ಗಳಲ್ಲಿ ಕೈಗಾರಿಕೆಗಳು ಒದಗಿಸುವ ವಿವಿಧ ಸಮಸ್ಯೆಗಳಿಗೆ ಈ ತಂಡಗಳು ನವೀನ ಪರಿಹಾರಗಳ ಮೇಲೆ ಕಾರ್ಯನಿರ್ವಹಿಸಲಿವೆ. ML, IOT ಮತ್ತು ಸೈಬರ್ ಸೆಕ್ಯುರಿಟಿ ಮತ್ತು ಕೈಗಾರಿಕೆಗಳ ತೀರ್ಪುಗಾರರ ಸಮಿತಿಯಿಂದ ನಿರ್ಣಯಿಸಲಾಗುತ್ತದೆ ಮತ್ತು ವಿಜೇತ ತಂಡಗಳಿಗೆ ನಗದು ಬಹುಮಾನಗಳನ್ನು ನೀಡಲಾಗುತ್ತದೆ. ಕಾರ್ಯಕ್ರಮವನ್ನು ವೆಸ್ಟರ್ನ್ ಡಿಜಿಟಲ್ ಕಾರ್ಪೊರೇಶನ್ ಇಂಜಿನಿಯರಿಂಗ್ ನಿರ್ದೇಶಕ ನವೀನ್ ಮುದ್ದು ಕೃಷ್ಣ ಉದ್ಘಾಟಿಸುವರು. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ, ಉಪ ಪ್ರಾಂಶುಪಾಲರಾದ ಡಾ.ಶೋಭಾ ಶಂಕರ್ ಗೌರವ ಅತಿಥಿಗಳಾಗಿ ಭಾಗವಹಿಸುವರು. ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕಿ ಮತ್ತು ಮುಖ್ಯಸ್ಥರಾದ ಡಾ.ಪೂಜಾ ಎಂ ಆರ್, ಡಾ.ಪರಮೇಶ, ಡಾ.ಜಾನ್ಹವಿ ಮತ್ತು ಡಾ.ನಿತಿನ್‌ಕುಮಾರ್ ಹ್ಯಾಕಥಾನ್ ಸಂಯೋಜಕರು ಮತ್ತು ಸಿಎಸ್‌ಇ ವಿಭಾಗದ ಅಧ್ಯಾಪಕರು ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿರುವರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ




ಜಯಪ್ರಕಾಶ್‌ಗೌಡ ಡಾ.ಲತಾ ಟಿ.ಸತೀಶ್

ಮೈಸೂರು, ಅ. 23– ಮೈಸೂರಿನ ಕುವೆಂಪು ಕಲಾನಿಕೇತನ ಸಂಸ್ಥೆಯ ವತಿಯಿಂದ ಕನ್ನಡ ನಾಡು–ನುಡಿ, ನೆಲ–ಜಲ, ಸಾಹಿತ್ಯ ಮತ್ತು ಸಂಘಟನಾ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸಮಾಜ ಸೇವಾ ಮುಖಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಸಾಧಕರಿಗೆ ನೀಡಲಾಗುವ 'ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್' ಪ್ರಶಸ್ತಿಗೆ ನಾಡಿನ ಮೂವರು ಆಯ್ಕೆಯಾಗಿದ್ದಾರೆ.

ಮಂಡ್ಯದ ಕರ್ನಾಟಕ ಸಂಘದ ಅಧ್ಯಕ್ಷ, ಕ್ರಿಯಾಶೀಲ ಸಂಘಟಕ ಹಾಗೂ ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ.ಬಿ. ಜಯಪ್ರಕಾಶ್‌ಗೌಡ ಅವರನ್ನು 'ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದ್ದು, ಈ ಪ್ರಶಸ್ತಿಯ ಹತ್ತು ಸಾವಿರ ನಗದು, ಬೆಳ್ಳಿ ಪದಕ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

ಅದೇ ರೀತಿ ಏಳು ಮಹಾಕಾವ್ಯಗಳನ್ನು ರಚಿಸಿರುವ ಮೈಸೂರಿನ ಕವಯಿತ್ರಿ ಹಾಗೂ ಕಾದಂಬರಿಗಾರ್ತಿ ಡಾ.ಲತಾ ರಾಜಶೇಖರ ಅವರನ್ನು 'ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಹಿತ್ಯ ರತ್ನ ಪ್ರಶಸ್ತಿ'ಗೂ ಮತ್ತು ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಹಾಗೂ ಯುವ ಸಾಹಿತಿ ಟಿ.ಸತೀಶ್ ಜವರೇಗೌಡ ಅವರನ್ನು 'ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಂಸ್ಕೃತಿಕ ಪ್ರಶಸ್ತಿ'ಗೂ ಆಯ್ಕೆ ಮಾಡಲಾಗಿದೆ. ಅ.27ರಂದು ಸಂಜೆ 4 ಗಂಟೆಗೆ ಮೈಸೂರು ನಗರದ ಜಗನ್ಮೋಹನ ಅರಮನೆಯಲ್ಲಿ ನಡೆಯಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 141ನೇ ಜಯಂತಿ ಮತ್ತು ಸಾಂಸ್ಕೃತಿಕ ಉತ್ಸವದಲ್ಲಿ ಈ ಮೂರು ಮಂದಿ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಲೆಮನೆ ಕಲಾಶ್ರೀ ವಾರ್ಷಿಕ ಪ್ರಶಸ್ತಿ ಪ್ರದಾನ



ಮೈಸೂರು, ಅ.23–ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಸೇರಿದಂತೆ ಏಳು ಮಂದಿಯನ್ನು ರಾಜ್ಯ ಮಟ್ಟದ ಕಲೆಮನೆ ಕಲಾಶ್ರೀ ವಾರ್ಷಿಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ರಾಯಚೂರಿನ ಸಾಂಸ್ಕೃತಿಕ ಸಂಘಟಕ ಮಾರುತಿ ಬಡಿಗೇರ್, ಸಾಗರದ ಪರಿಣಿತಿ ಕಲಾಕೇಂದ್ರದ ನಿರ್ದೇಶಕ ಎಂ. ಗೋಪಾಲ್, ಮೈಸೂರು ರಾಮಾಮೃತ ಕಲಾಮಂಟಪದ ನಿರ್ದೇಶಕ ಆನಂದ ರಾಜೇಅರಸ್, ಭರತನಾಟ್ಯ ಕಲಾವಿದ ಎಸ್.ಎಂ.ಶರತ್, ಮೈಸೂರಿನ ಕಲಾನಿಧಿ ನೃತ್ಯಶಾಲೆಯ ನಿರ್ದೇಶಕಿ ಪದ್ಮಶ್ರೀ, ಮಂಡ್ಯದ ಶ್ರೀ ನಂದಿಕೇಶ್ವರ ಭರತನಾಟ್ಯ ಕಲಾಶಾಲೆಯ ನಿರ್ದೇಶಕಿ ಕೆ.ಎಸ್. ಶೈಲಾ ಅವರು ಪ್ರಶಸ್ತಿಗೆ ಭಾಜನಾಗಿರುವ ಇತರರು ಎಂದು ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ಸಂಸ್ಥಾಪಕ ಡಾ.ಕೆ.ಕುಮಾರ್ ತಿಳಿಸಿದ್ದಾರೆ. ಮಂಚೇಗೌಡನಕೊಪ್ಪಲಿನ ಕಲೆಮನೆ ಸಭಾಂಗಣದಲ್ಲಿ ಅ.25 ರಂದು ಸಂಜೆ 4.30ಕ್ಕೆ ನಡೆಯುವ 45ನೇ ನಿರಂತರ ಕಲೆಮನೆ ಉತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಅಂದು ಕೇಂದ್ರದ ಶಿಷ್ಯರಿಂದ ಭರತನಾಟ್ಯ ಪ್ರದರ್ಶನ ಇರುತ್ತದೆ ಎಂದು ಅವರು ಹೇಳಿದ್ದಾರೆ.

ನಾದ ವಿದ್ಯಾಲಯದಿಂದ ನಾದ ನೃತ್ಯೋಪಾಸನ



ಮೈಸೂರಿನ ಗಾನಭಾರತಿಯ ರಮಾಗೋವಿಂದ ರಂಗವೇದಿಕೆಯಲ್ಲಿ ನಡೆದ ನಾದ ನೃತ್ಯೋಪಾಸನ.

ಮೈಸೂರು, ಅ. 23– ಮೈಸೂರಿನ ನಾದ ವಿದ್ಯಾಲಯ ಸಂಗೀತ ಮತ್ತು ನೃತ್ಯ ಅಕಾಡೆಮಿ ವತಿಯಿಂದ ಕುವೆಂಪು ನಗರದ ಗಾನಭಾರತಿಯ ರಮಾಗೋವಿಂದ ರಂಗ ವೇದಿಕೆಯಲ್ಲಿ ನಾದ ನೃತ್ಯೋಪಾಸನ ಆಚರಿಸಲಾಯಿತು.

ಗುರು ವಿದುಷಿ ಶ್ರೀಮತಿ ಮಿತ್ರ ನವೀನ್ ಮಾರ್ಗದರ್ಶನ ಮತ್ತು ನಿರ್ದೇಶನದಲ್ಲಿ 30 ಹಿರಿಯ ಮತ್ತು ವಿದ್ವತ್ ದರ್ಜೆಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ವೇಳೆ ಆದರ್ಶ ಸೇವಾ ಸಂಘದ ಅಧ್ಯಕ್ಷ ಜಿ.ಆರ್.ನಾಗರಾಜ್ ಮಾತನಾಡಿ, 18 ವರ್ಷ ಎಂಬುದು ಯಾವುದೇ ಮಾನವ ಅಥವಾ ಸಂಸ್ಥೆಗೆ ಹದಿಹರೆಯ ಎಂದರು. ಈ ಅವಧಿಯಲ್ಲಿ ಯುವಕರು ಶಿಕ್ಷಣ ಮತ್ತು ಉತ್ಸಾಹವನ್ನು ಸಮತೋಲನದಲ್ಲಿಟ್ಟುಕೊಂಡು ತಮ್ಮ ಭವಿಷ್ಯವನ್ನು ಸದೃಢಗೊಳಿಸಲು ಶ್ರಮಿಸಬೇಕೆಂದು ಸಲಹೆ ನೀಡಿದರು.

ಕೃಷ್ಣಧಾಮದ ಉಪಾಧ್ಯಕ್ಷ ರವಿಶಾಸ್ತ್ರಿ ಮಾತನಾಡಿ, ಮಕ್ಕಳಿಗೆ ಉತ್ತಮ ಸಂಸ್ಕಾರವನ್ನು ನೀಡುವುದು ಪೋಷಕರ ಕರ್ತವ್ಯ ಎಂದು ಭಾವಿಸಿ, ಹಾಗೆ ಮಾಡಿದ ಪೋಷಕರನ್ನು ಅಭಿನಂದಿಸಿದರು. ನಮ್ಮ ಶ್ರೀಮಂತ ಭಾರತೀಯ ಕಲೆಯನ್ನು ಕಾಪಾಡಲು ಮುಂದಿನ ಪೀಳಿಗೆಯನ್ನು ಪ್ರೋತ್ಸಾಹಿಸುವಲ್ಲಿ ಪೋಷಕರ ಪಾತ್ರ ಮುಖ್ಯ ಎಂದರು. ಈ ವೇಳೆ ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ಉಪಸ್ಥಿತರಿದ್ದರು.

ಆರಂಭದಲ್ಲಿ ನಾದವಿದ್ಯಾಲಯದ ವಿದ್ವತ್ ವಿದ್ಯಾರ್ಥಿಗಳು ಆದಿ ತಾಳ ಗೌಳ ರಾಗದಲ್ಲಿ ಭರತನಾಟ್ಯ ಮಾರ್ಗದ ಪುಷ್ಪಾಂಜಲಿಯನ್ನು ಪ್ರಸ್ತುತಪಡಿಸಿದರು. ನಂತರ ತ್ರಿಶ್ರ, ಖಂಡ ಮತ್ತು ಮಿಶ್ರ ಜಾತಿ ಅಲರಿಪು ನೃತ್ತ ಬಂಧವನ್ನು ಪ್ರದರ್ಶಿಸಿದರು. ಗುರು ವಿದುಷಿ ಮಿತ್ರ ನವೀನ್ ಅವರ ನಿರ್ದೇಶನ ಮತ್ತು ನಟುವಾಂಗ, ಎಂ. ಎಸ್. ನವೀನ್ ಅವರ ಸುಮಧುರ ಗಾಯನ, ವಿದ್ವಾನ್ ವಿವೇಕ್ ಕೃಷ್ಣ ಅವರ ಕೊಳಲು, ಜಿ. ಎಸ್ ನಾಗರಾಜ್ ಅವರ ಮೃದಂಗ ಅತ್ಯದ್ಭುತ ವಾಗಿ ಮೂಡಿಬಂತು. ಕುಂ.ಅರ್ಪಿತಾ ನಾಯಕ್ ಮತ್ತು ಕುಂ.ಶ್ರೇಯಾ ರಮೇಶ್ ಅವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ತದನಂತರ ಪ್ರತಿಭಾ ಪುರಸ್ಕಾರ, ಪ್ರಶಂಸನ ನೆನಪಿನ ಕಾಣಿಕೆ ವಿತರಿಸಲಾಯಿತು.

ನಾಳೆ ಸಂಸ್ಕೃತಿ ಸಿಂಚನ ಪ್ರಶಸ್ತಿ ಪ್ರದಾನ



ಇಂದ್ರಾಣಿ ಲಕ್ಷ್ಮಿ ಸರಸ್ವತಿ ಉಮಾ

ಮೈಸೂರು, ಅ. 23– ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ನೇಹ ಸಿಂಚನ ಟ್ರಸ್ಟ್ ಸಹಯೋಗದಲ್ಲಿ ಸ್ನೇಹ ಸಿಂಚನ ಟ್ರಸ್ಟ್ ಕೊಡಮಾಡುವ ಸಂಸ್ಕೃತಿ ಸಿಂಚನ ಪ್ರಶಸ್ತಿ ಪ್ರದಾನ, ನವರಾತ್ರಿ ಗೊಂಬೆ ಪ್ರದರ್ಶನ ಸ್ಪರ್ಧೆಯ ಬಹುಮಾನ ವಿತರಣೆ, ಭಾವಯಾನ ಗೀತಗಾಯನ ಸಮಾರಂಭವನ್ನು ಅ. 25 ರಂದು ಸಂಜೆ 4 ಗಂಟೆಗೆ ಸರಸ್ವತಿಪುರಂನಲ್ಲಿರುವ ವಿಜಯವಿಠಲ ವಿದ್ಯಾಸಂಸ್ಥೆಯಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್ ಹಾಗೂ ವಿಜಯವಿಠಲ ಕಾಲೇಜಿನ ಪ್ರಾಂಶುಪಾಲರಾದ ಎಸ್. ಸತ್ಯಪ್ರಸಾದ್ ಉದ್ಘಾಟಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದು, ಸಂಸ್ಕೃತಿ ಸಿಂಚನ ಪ್ರಶಸ್ತಿಯನ್ನು ಹಿರಿಯ ಸಮಾಜ ಸೇವಕರಾದ ಡಾ. ಕೆ.ರಘುರಾಂ ವಾಜಪೇಯಿ ಹಾಗೂ ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಡಿ.ಟಿ. ಪ್ರಕಾಶ್ ಪ್ರದಾನ ಮಾಡಲಿದ್ದಾರೆ. ಬಹುಮಾನ ವಿತರಣೆಯನ್ನು ಹಿರಿಯ ಸಮಾಜ ಸೇವಕರಾದ ಸುಶೀಲ ಶ್ಯಾಮ ಸುಂದರ್ ಹಾಗೂ ಹಿರಿಯ ನಾಗರಿಕರ ಹಗಲು ಯೋಗಕ್ಷೇಮದ ಅಧ್ಯಕ್ಷ ಮಲೆಯೂರು ಪ್ರಭುಸ್ವಾಮಿ ನೆರವೇರಿಸಿಕೊಡಲಿದ್ದಾರೆ. ಕಸಾಪ ಕಾರ್ಯದರ್ಶಿ ಹಾಗೂ ಸ್ನೇಹಸಿಂಚನ ಟ್ರಸ್ಟ್‌ನ ಅಧ್ಯಕ್ಷೆ ಮ.ನ.ಲತಾ ಮೋಹನ್ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ.

ನವರಾತ್ರಿ ಗೊಂಬೆ ಪ್ರದರ್ಶನ ಸ್ಪರ್ಧೆ ವಿಜೇತರು; ಚಾಮುಂಡೇಶ್ವರಿ ವಿಭಾಗ

ಪ್ರಥಮ ಬಹುಮಾನ: ರೇವತಿ ರಾಮಸ್ವಾಮಿ, ಶ್ರೀದೇವಿ ಶ್ರೀವತ್ಸ, ಗೀತಾ ರಘುರಾಂ, ಜಯಶ್ರೀ ಶೇಷಾದ್ರಿ, ಇಂದ್ರಾಣಿ ಶಂಕರ್, ಶ್ರೀದೇವಿ ಶ್ರೀವತ್ಸ, ಕೌಸಲ್ಯ, ಪದ್ಮಾ ರವಿಶಂಕರ್, ರೂಪಶ್ರೀ ಶೇಷಾದ್ರಿ, ತನುಜಾ ಅರವಿಂದ್, ಲತಾ ವೆಂಕಟೇಶ್, ಸರಸ್ವತಿ ಶ್ರೀಮಂತರಾವ್, ಸ್ವರೂಪಿಣಿ, ಉಮಾ ನಂಜುಂಡಯ್ಯ.

ದ್ವಿತೀಯ ಬಹುಮಾನ: ಜಿ. ಶಾಂತಲಾ, ರಮಾಮಣಿ ಶೆಲ್ವಪಿಳ್ಳೈ, ನಮಿತಾ ಜಯಂತ್, ಪ್ರಮೀಳಾ ರಾಧಾಕೃಷ್ಣ, ಕಲ್ಯಾಣಿ, ಚಂದ್ರಕಲಾ ರಮೇಶ್, ಶ್ಯಾಮಲಾ ಪ್ರಸನ್ನ, ವಿಜಯಲಕ್ಷ್ಮಿ ಸತ್ಯನಾರಾಯಣ.

ಅಂಬಾರಿ ವಿಭಾಗ

ಪ್ರಥಮ ಬಹುಮಾನ: ರಂಗಲಕ್ಷ್ಮಿ ಭಾರತೀಶಂಕರ್, ವಿಜಯ ಸುದರ್ಶನ್, ಗೀತಾ ಶ್ರೀಹರಿ, ಹೇಮಲತಾ ಕುಮಾರಸ್ವಾಮಿ, ಇಂದಿರಾ ಸುಂದರ್, ಭಾನುಮತಿ ಸುಂದರೇಶನ್, ಉಷಾ ನಾಗರಾಜರಾವ್, ಸವಿತಾ ದಿನೇಶ್, ಪ್ರಭಾ ಪುನೀತ್, ಸತ್ಯಭಾಮ ಗೋಪಿನಾಥ್, ರಾಜೇಶ್ವರಿ ಗಣೇಶನ್, ಅಕ್ಷಯ ಬಾಲಾಜಿ, ಲಕ್ಷ್ಮಿ ಶಿವರಾಂ, ಶ್ರೀಲತಾ ಹೆಗಡೆ.

ದ್ವಿತೀಯ ಬಹುಮಾನ: ಶ್ಯಾಮಂತಕಮಣಿ ನಾಗೇಂದ್ರ, ಮಾಯಾ ಪ್ರದೀಪ್, ಕಲ್ಪನಾ ಅರಸ್, ಜಯಶ್ರೀ ರಂಗನಾಥ್, ರೇಖಾ ಶ್ರೀನಾಥ್, ನಾಗಶ್ರೀ ಮುಕುಂದ, ನವ್ಯಶ್ರೀ ಯೋಗಾನಂದ, ಲಲಿತಾ.

ಮಾತುಕತೆ, ರಾಜತಾಂತ್ರಿಕತೆಗೆ ಬೆಂಬಲ, ಯುದ್ಧಕ್ಕಲ್ಲ: ಬ್ರಿಕ್ಸ್ ಶೃಂಗಸಭೆಯಲ್ಲಿ ಮೋದಿ



ಕಝಾನ್ (ರಷ್ಯಾ): ಭಾರತ ಮಾತುಕತೆ ಮತ್ತು ರಾಜತಾಂತ್ರಿಕತೆಯನ್ನು ಬೆಂಬಲಿಸುತ್ತದೆಯೇ ಹೊರತು ಯುದ್ಧವನ್ನಲ್ಲ ಎಂದು ಪ್ರಧಾನಿ ನರೇಂದ್ರ ಮೋದಿಯವರು ಬ್ರಿಕ್ಸ್ ಸಮಾವೇಶದಲ್ಲಿ ಬುಧವಾರ ಪ್ರತಿಪಾದಿಸಿದ್ದಾರೆ. ಆ ಮೂಲಕ ರಷ್ಯಾ-ಉಕ್ರೇನ್ ಸಂಘರ್ಷವನ್ನು ಶಾಂತಿ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು ಎಂದು ಕರೆ ನೀಡಿದ್ದಾರೆ. ತಮ್ಮ ಭಾಷಣದಲ್ಲಿ ಯುದ್ಧ, ಆರ್ಥಿಕ ಅನಿಶ್ಚಿತತೆ, ಹವಾಮಾನ ಬದಲಾವಣೆ ಹಾಗೂ ಉಗ್ರವಾದದ ಸವಾಲುಗಳ ಬಗ್ಗೆ ಮಾತನಾಡಿದ ಅವರು, ಜಗತ್ತನ್ನು ಸರಿಯಾದ ದಾರಿಯಲ್ಲಿ ಕೊಂಡೊಯ್ಯಲು ಬ್ರಿಕ್ಸ್ ಸಕಾರಾತ್ಮಕ ಪಾತ್ರವನ್ನು ವಹಿಸಬಹುದು ಎಂದು ಹೇಳಿದ್ದಾರೆ. ಕೋವಿಡ್ ಎನ್ನುವ ಸವಾಲನ್ನು ಒಟ್ಟುಗೂಡಿ ಎದುರಿಸಿ ಅದರಿಂದ ಮುಕ್ತಿ ಪಡೆದ ಹಾಗೆ, ಭವಿಷ್ಯದ ಪೀಳಿಗೆಗೆ ಸುರಕ್ಷಿತ, ಸದೃಢ ಮತ್ತು ಸಮೃದ್ಧ ಭವಿಷ್ಯವನ್ನು ಖಚಿತಪಡಿಸಿಕೊಳ್ಳಲು, ಹೊಸ ಅವಕಾಶಗಳನ್ನು ಸೃಷ್ಟಿಸಲು ನಾವು ಸಮರ್ಥರಾಗಿದ್ದೇವೆ. ಭಯೋತ್ಪಾದನೆಯನ್ನು ಎದುರಿಸಲು ಜಾಗತಿಕ ಸಂಘಟಿತ ಪ್ರಯತ್ನ ಬೇಕು ಎಂದು ಪ್ರತಿಪಾದಿಸಿದ ಅವರು, ಉಗ್ರವಾದದ ವಿರುದ್ಧ ಹೋರಾಡುವಲ್ಲಿ ಯಾವುದೇ ಇಬ್ಬಗೆ ನೀತಿ ಇರಬಾರದು ಎಂದು ಹೇಳಿದ್ದಾರೆ. ಭಯೋತ್ಪಾದನೆ ಹಾಗೂ ಭಯೋತ್ಪಾದಕ ಚಟುವಟಿಕೆಗಳಿಗೆ ಹಣಕಾಸು ನೆರವು ನೀಡುವುದನ್ನು ನಿಗ್ರಹಿಸಲು ನಾವೆಲ್ಲಾ ಸಮಾನ ಮನಸ್ಕರಾಗಬೇಕು. ಈ ಗಂಭೀರ ವಿಷಯದ ಬಗ್ಗೆ ಇಬ್ಬಗೆ ನೀತಿ ಇರಕೂಡದು ಎಂದು ಹೇಳಿದ್ದಾರೆ.

ಬ್ರಿಕ್ಸ್ ಒಕ್ಕೂಟಕ್ಕೆ ಹೊಸ ಸದಸ್ಯರನ್ನು ಸ್ವಾಗತಿಸಲು ಭಾರತ ಸಜ್ಜಾಗಿದೆ. ಈ ಬಗ್ಗೆ ಒಮ್ಮತದ ನಿರ್ಧಾರ ತೆಗೆದುಕೊಳ್ಳಬೇಕು. ಬ್ರಿಕ್ಸ್ ಸಂಸ್ಥಾಪಕ ದೇಶಗಳ ಅಭಿಪ್ರಾಯಗಳನ್ನು ಗೌರವಿಸಬೇಕೆಂದು ಪ್ರತಿಪಾದಿಸಿದ್ದಾರೆ.

50 ಪೈಸೆ ಹಿಂದಿರುಗಿಸದ ಅಂಚೆ ಇಲಾಖೆಗೆ 15 ಸಾವಿರ ದಂಡ

ಚೆನ್ನೈ: 50 ಪೈಸೆ ಹಿಂದಿರುಗಿಸದೇ ಇರುವ ಪ್ರಕರಣದಲ್ಲಿ ಗ್ರಾಹಕನಿಗೆ 10 ಸಾವಿರ ಮೊತ್ತವನ್ನು ಪರಿಹಾರವಾಗಿ ನೀಡುವಂತೆ ಭಾರತೀಯ ಅಂಚೆ ಇಲಾಖೆಗೆ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಸೂಚಿಸಿದೆ.

2023ರ ಡಿ.13ರಂದು ಚೆನ್ನೈನ ಪೊಜಿಚಲೂರ್ ಅಂಚೆ ಕಚೇರಿಯಲ್ಲಿ ರಿಜಿಸ್ಟರ್ ಲೆಟರ್ ಖರೀದಿಸಿದ್ದ ಮನಸ ಅವರು ಅದಕ್ಕಾಗಿ ರೂ. 30 ನಗದು ಪಾವತಿಸಿದ್ದರು. ಆದರೆ, ರಶೀದಿಯಲ್ಲಿ ಅದರ ಬೆಲೆ 29.50 ಎಂದು ನಮೂದಾಗಿತ್ತು. ಯುಪಿಐ ಮೂಲಕ ಪಾವತಿಸುವುದಾಗಿ ಮನಸ ಅವರು ಹೇಳಿದ್ದರೂ, ತಾಂತ್ರಿಕ ಕಾರಣ ಹೇಳಿ ಸಿಬ್ಬಂದಿ ಅದನ್ನು ನಿರಾಕರಿಸಿದ್ದರು. ಅಂಚೆ ಇಲಾಖೆಯಲ್ಲಿ ನಡೆಯುತ್ತಿರುವ ಈ ಅನ್ಯಾಯದ ವಿರುದ್ಧ ಮನಸ ಅವರು ಗ್ರಾಹಕರ ಆಯೋಗಕ್ಕೆ ದೂರು ನೀಡಿದ್ದರು.

ಪ್ರಕರಣವನ್ನು ಪರಿಶೀಲಿಸಿದ ಆಯೋಗ, ಮಾನಸ ಅವರಿಗೆ 50 ಪೈಸೆಯನ್ನು ಮರುಪಾವತಿಸುವಂತೆ ಇಲಾಖೆಗೆ ತಿಳಿಸಿದೆ. ಅಲ್ಲದೇ ಗ್ರಾಹಕನಿಗೆ ಮಾನಸಿಕ ಒತ್ತಡ ನೀಡಿದ್ದಕ್ಕಾಗಿ ಮತ್ತು ನ್ಯಾಯಸಮ್ಮತವಲ್ಲ ವ್ಯವಹಾರ ನಡೆಸಿದ್ದಕ್ಕಾಗಿ 10 ಸಾವಿರ ಪಾವತಿಸುವಂತೆಯೂ, ವ್ಯಾಜ್ಯ ಶುಲ್ಕವಾಗಿ 5 ಸಾವಿರ ಪಾವತಿಸುವಂತೆ ಸೂಚಿಸಿದೆ.

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರಾದ ಶ್ರೀ ಶ್ರೀಧರ, ಬಿನ್ ಭದ್ರಯ್ಯ, ವಾಸ: ಮನೆ ನಂ 33, ಹಳೇ ಮನೆ ನಂ 251, 4ನೇ ಮುಖ್ಯ ರಸ್ತೆ, 2ನೇ ಕ್ರಾಸ್ ರಸ್ತೆ, ಮುನೀಶ್ವರ ಬ್ಲಾಕ್, ಬಿ.ಎಸ್. ಕೆ. 3ನೇ ಹಂತ, ಬೆಂಗಳೂರು, ರವರ ಇರಾದೆಯ ಮೇರೆಗೆ, ಏನೆಂದರೆ, ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ದಿನಾಂಕ 29/8/2018 ರ ನೊಂದಾಯಿತ ಕ್ರಯ ಪತ್ರದ ಮೂಲಕ ಆನಂದ ಎಂಬುವವರಿಂದ ಖರಿಗಮನಕ್ಕಾಗಿದಿಸಿದ್ದು ಆದರೆ, ಗೋಲ್ಡನ್ ಸಿಟಿ ಗೃಹ ನಿರ್ಮಾಣ ಸಹಕಾರ ಸಂಘ ನಂ.282/1, 1ನೇ ಮಹಡಿ, ಲಕ್ಷ್ಮೀ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ ಮೈಸೂರು ರವರ ಜೊತೆ ದಿನಾಂಕ 21/7/2018 ರಂದು ಜಂಟಿ ಅಭಿವೃದ್ಧಿ ಕರಾರನ್ನು ಮಾಡಿಕೊಂಡಿದ್ದು ನಂತರ ಕಾರಣಾಂತರಗಳಿಂದ ಅವರು ದಿನಾಂಕ 22/11/2018 ರ ಸಾಮಾನ್ಯ ಅಧಿಕಾರ ಪತ್ರ ಹಾಗೂ ಆ ಮೂಲಕವಾಗಿ ದಿನಾಂಕ 23/1/2020 ರಂದು ಕ್ರಯ ಪತ್ರವನ್ನು ಪಡೆದುಕೊಂಡಿರುತ್ತಾರೆಂದು ನನ್ನ ಕಕ್ಷಿದಾರರು ಆ ಮೂರು ಪತ್ರಗಳನ್ನು ರದ್ದುಗೊಳಿಸುವಂತೆ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಸದರಿ ದಾವೆ ಚಾಲಿಯಲ್ಲಿರುವಾಗ ಗೋಲ್ಡ್ ಸಿಟಿ ಗೃಹ ನಿರ್ಮಾಣ ಸಹಕಾರ ಸಂಘದವರು ನಿವೇಶನಗಳನ್ನು ಬೇರೆಯವರಿಗೆ ಮಾರಾಟ ಮಾಡಲು ಪ್ರಯತ್ನಿಸಿದ್ದರಿಂದ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಯಡಹಳ್ಳಿ ಗ್ರಾಮಕ್ಕೆ ಸೇರಿದ 73/2 ರಲ್ಲಿ 2 ಎಕರೆ ವಿಸ್ತೀರ್ಣದ ಜಮೀನಲ್ಲಿ ಗೋಲ್ಡ್ ಸಿಟಿ ಗೃಹ ನಿರ್ಮಾಣ ಸಹಕಾರ ಸಂಘದವರು ನಿರ್ಮಿಸಿರುವ ನಿವೇಶನ ಸಂಖ್ಯೆ 1 ರಿಂದ 31 ರವರೆಗೆ ಇರುವ ನಿವೇಶನಗಳನ್ನು ಪರಭಾರೆ ಮಾಡದಂತೆ ಕೋರಿ ಕಮರ್ಷಿಯಲ್ ಅಸಲು ದಾವಾ ಸಂಖ್ಯೆ 44/2024 ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮೈಸೂರಿನಲ್ಲಿ ದಾವೆ ಹೂಡಿದ್ದು ಸದರಿ ದಾವೆಯಲ್ಲಿ ಷೆಡ್ಯೂಲ್ ಸ್ವತ್ತಿನ ಸಂಬಂಧ ದಾವೆ ಇತ್ಯರ್ಥವಾಗುವವರೆಗೂ ಯಾವುದೇ ಪರಭಾರೆ ಮಾಡದಂತೆ ದಿನಾಂಕ 26/9/2024 ರಂದು ಆದೇಶವಾಗಿರುತ್ತದೆ. ಸದರಿ ದಾವೆಯೂ ದಿನಾಂಕ 24/10/2024 ಕ್ಕೆ ಚಾಲ್ತಿಯಲ್ಲಿರುತ್ತದೆ. ಆದರೆ, ಸದರಿ ಆದೇಶ ಚಾಲ್ತಿಯಲ್ಲಿರುವಾಗ ಕೆಲವು ವ್ಯಕ್ತಿಗಳು ಷೆಡ್ಯೂಲ್ ಸ್ವತ್ತು ಮಾರಾಟಕ್ಕಿದೆ ಎಂದು ಪ್ರಚಾರ ಮಾಡುತ್ತಿದ್ದು ನನ್ನ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾರಾದರೂ ಯಾವುದೇ ಪತ್ರಗಳನ್ನು ಹಾಗೂ ವ್ಯವಹಾರವನ್ನು ಮಾಡಿದ್ದ ಪಕ್ಷದಲ್ಲಿ ಸದರಿ ವ್ಯವಹಾರವೂ ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ಹಾಗೂ ಅಂತಹ ಯಾವುದೇ ವ್ಯವಹಾರಕ್ಕೆ ನನ್ನ ಕಕ್ಷಿದಾರರು ಜವಾಬ್ದಾರಲ್ಲವೆಂದು ಮತ್ತು ಅಂತಹವರನ್ನು ಮೇಲ್ಕಂಡ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗುವುದೆಂದು ಈ ಮೂಲಕ ಸಾರ್ವಜನಿಕರು ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಯಡಹಳ್ಳಿ ಗ್ರಾಮಕ್ಕೆ ಸೇರಿದ 73/2 ರಲ್ಲಿ 2 ಎಕರೆ ವಿಸ್ತೀರ್ಣದ ಜಮೀನಲ್ಲಿ ಗೋಲ್ಡ್ ಸಿಟಿ ಗೃಹ ನಿರ್ಮಾಣ ಸಹಕಾರ ಸಂಘದವರು ನಿರ್ಮಿಸಿರುವ ನಿವೇಶನ ಸಂಖ್ಯೆ 1 ರಿಂದ 31 ರವರೆಗೆ ಇರುವ ನಿವೇಶನಗಳಿಗೆ ಚೆಕ್ ಬಂದಿ : ಪೂರ್ವಕ್ಕೆ : ಸರ್ವೆ ನಂ 74, ಪಶ್ಚಿಮಕ್ಕೆ : ಲಾ ಹಿ ನಂ 71 (ಐಶ್ವರ್ಯ ಡೆವೆಲಪರ್ಸ್ ಲೇಔಟ್) ಉತ್ತರಕ್ಕೆ : ಲಾ ಹಿ ನಂ 71, ದಕ್ಷಿಣಕ್ಕೆ : ಲಾ ಹಿ ನಂ 1.

ಸಹಿ/- ಕಕ್ಷಿದಾರರು

ಕಕ್ಷಿದಾರರ ಪರ ವಕೀಲರು,
ಸಹಿ/- ಶ್ರೀ ಪಾಲಾಕ್ಷ ವಕೀಲರು, ಕೆಎಆರ್ ಸಂಖ್ಯೆ-1146/48, ನಂ. 645, ಮೊದಲನೇ ಮಹಡಿ, ನಾರಾಯಣ ಶಾಸ್ತ್ರಿ ರಸ್ತೆ, ಮೊ: 9448075718

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮಲ್ಲರಾಜು.ಕೆ ಬಿನ್ ಲೇಟ್ ಕುನ್ನಮಲ್ಲಯ್ಯ ಇವರ ಇರಾದೆಯ ಮೇರೆಗೆ ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗಿದೆ. ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಮಲ್ಲರಾಜು.ಕೆ ಬಿನ್ ಲೇಟ್ ಕುನ್ನಮಲ್ಲಯ್ಯ ಇವರಿಗೆ ಕೊಪ್ಪಲೂರು ಆಶ್ರಯ ಯೋಜನೆಯಡಿಯಲ್ಲಿ 20X30 ಅಡಿ ಅಳತೆಯುಳ್ಳ ನಿವೇಶನ ಮಂಜೂರಾತಿಯಾಗಿದ್ದು ನಿವೇಶನ ಸಂಖ್ಯೆ 1019 ಆಗಿರುತ್ತದೆ. ಇವರು ಸದರಿ ಸ್ವತ್ತಿನಲ್ಲಿ ಮನೆ ಕಟ್ಟಲು ತೀರ್ಮಾನಿಸಿರುತ್ತಾರೆ. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಅಥವಾ ಆರ್ಥಿಕ ಸಂಸ್ಥೆಗಳು ಒಳಗೊಂಡಂತೆ ಯಾವುದೇ ರೀತಿಯಾದ ಹಕ್ಕು, ಅಧಿಕಾರ, ತಂಟೆ ತಕರಾರುಗಳು ಇದ್ದಲ್ಲಿ ಪ್ರಕಟಣೆಯಾದ 15 ದಿನಗಳ ಒಳಗೆ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿರುತ್ತದೆ. ಮೇಲ್ಕಂಡ ಅವಧಿ ಮುಗಿದ ನಂತರ ಬರುವ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ ಎಂಬುದಾಗಿ ಈ ಮೂಲಕ ತಿಳಿಯ ಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ, ಮೈಸೂರು ನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವ ಕೊಪ್ಪಲೂರು ಗ್ರಾಮದ ಆಶ್ರಯ ಯೋಜನೆಯಡಿ ಮಂಜೂರಾಗಿರುವ ನಿವೇಶನ ಸಂಖ್ಯೆ 1019ರ ವಿಸ್ತೀರ್ಣ 20X30 ಅಡಿಗಳುಳ್ಳ ನಿವೇಶನಕ್ಕೆ ಚಕ್ಕುಬಂಧಿ: ಪೂರ್ವಕ್ಕೆ : ನಿವೇಶನ ಸಂಖ್ಯೆ 1018, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 1020, ಉತ್ತರಕ್ಕೆ : ನಂಜನಗೂಡು-ಹೆಚ್.ಡಿ ಕೋಟೆ ರಸ್ತೆ, ದಕ್ಷಿಣಕ್ಕೆ : ರಸ್ತೆ

ಸಹಿ/- ಎಂ.ಪಿ.ತಮ್ಮಯ್ಯ.ಬಿ.ಎ, ಎಲ್.ಎಲ್.ಬಿ
ವಕೀಲರು ಮತ್ತು ಕಾನೂನು ಸಲಹೆಗಾರರು
ವಿಳಾಸ:- ಕಛೇರಿ ಸಂ.519, ಶ್ರೀನಿವಾಸ ಕಾಂಪ್ಲೆಕ್ಸ್, ತ್ಯಾಗರಾಜ ರಸ್ತೆ, ಅಗ್ರಹಾರ, ಕೆ.ಆರ್.ಮೊಹಲ್ಲಾ, ಮೈಸೂರು 15,
ಮೊ.: 9845304457

ದಿನಾಂಕ: 21/10/2024

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀಮತಿ ಗಾಯಿತ್ರಿ.ಎಂ ಕೇರಾಫ್ ಮಹೇಶ್.ಆರ್ ಇವರ ಇರಾದೆಯ ಮೇರೆಗೆ ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗಿದೆ.

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀಮತಿ ಗಾಯಿತ್ರಿ.ಎಂ ಕೇರಾಫ್ ಮಹೇಶ್.ಆರ್ ಇವರಿಗೆ ಗೊರೂರು ಆಶ್ರಯ ಯೋಜನೆಯಡಿಯಲ್ಲಿ 20X30 ಅಳತೆಯುಳ್ಳ ಮನೆ ಮಂಜೂರಾತಿಯಾಗಿದ್ದು ಮನೆ ಸಂಖ್ಯೆ 630 ಆಗಿರುತ್ತದೆ. ಇವರು ಸದರಿ ಸ್ವತ್ತಿನ ಮೇಲೆ ಸಾಲ ತೆಗೆದುಕೊಳ್ಳಲು ಹಾಗೂ ಮನೆ ನವೀಕರಣ ಮಾಡಲು ತೀರ್ಮಾನಿಸಿರುತ್ತಾರೆ. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಅಥವಾ ಆರ್ಥಿಕ ಸಂಸ್ಥೆಗಳು ಒಳಗೊಂಡಂತೆ ಯಾವುದೇ ರೀತಿಯಾದ ಹಕ್ಕು, ಅಧಿಕಾರ, ತಂಟೆ ತಕರಾರುಗಳು ಇದ್ದಲ್ಲಿ ಪ್ರಕಟಣೆಯಾದ 15 ದಿನಗಳ ಒಳಗೆ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿರುತ್ತದೆ.ಮೇಲ್ಕಂಡ ಅವಧಿ ಮುಗಿದ ನಂತರ ಬರುವ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ ಎಂಬುದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ, ಮೈಸೂರು ನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವ ಗೊರೂರು ಗ್ರಾಮದ ಆಶ್ರಯ ಯೋಜನೆಯಡಿ ಮಂಜೂರಾಗಿರುವ ಮನೆ ನಂ.630ರ ವಿಸ್ತೀರ್ಣ 20x30 ಅಡಿಗಳುಳ್ಳ ನಿವೇಶನಕ್ಕೆ ಚಕ್ಕುಬಂಧಿ: ಪೂರ್ವಕ್ಕೆ : ಮನೆ ನಂ.629 ಪಶ್ಚಿಮಕ್ಕೆ : ಮನೆ ನಂ.631, ಉತ್ತರಕ್ಕೆ : ಮನೆ ದಕ್ಷಿಣಕ್ಕೆ : ರಸ್ತೆ.

ಸಹಿ/- ಎಂ.ಪಿ.ತಮ್ಮಯ್ಯ.ಬಿ.ಎ, ಎಲ್.ಎಲ್.ಬಿ
ವಕೀಲರು ಮತ್ತು ಕಾನೂನು ಸಲಹೆಗಾರರು
ವಿಳಾಸ:- ಕಛೇರಿ ಸಂ.519, ಶ್ರೀನಿವಾಸ ಕಾಂಪ್ಲೆಕ್ಸ್, ತ್ಯಾಗರಾಜ ರಸ್ತೆ, ಅಗ್ರಹಾರ, ಕೆ.ಆರ್.ಮೊಹಲ್ಲಾ, ಮೈಸೂರು 15,
ಮೊ.: 9845304457

ದಿನಾಂಕ: 21/10/2024

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀಮತಿ ಪವಿತ್ರ ಬಿನ್ ಮಹದೇವಯ್ಯ ಇವರ ಇರಾದೆಯ ಮೇರೆಗೆ ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗಿದೆ.

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀಮತಿ ಪವಿತ್ರ ಬಿನ್ ಮಹದೇವಯ್ಯ ಇವರಿಗೆ ಗೊರೂರು ಆಶ್ರಯ ಯೋಜನೆಯಡಿಯಲ್ಲಿ 20X30 ಅಡಿ ಅಳತೆಯುಳ್ಳ ಮನೆ ಮಂಜೂರಾತಿಯಾಗಿದ್ದು ಮನೆ ಸಂಖ್ಯೆ 631 ಆಗಿರುತ್ತದೆ. ಇವರು ಸದರಿ ಸ್ವತ್ತಿನ ಮೇಲೆ ಸಾಲ ತೆಗೆದುಕೊಳ್ಳಲು ಹಾಗೂ ಮನೆ ನವೀಕರಣ ಮಾಡಲು ತೀರ್ಮಾನಿಸಿರುತ್ತಾರೆ. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಅಥವಾ ಆರ್ಥಿಕ ಸಂಸ್ಥೆಗಳು ಒಳಗೊಂಡಂತೆ ಯಾವುದೇ ರೀತಿಯಾದ ಹಕ್ಕು, ಅಧಿಕಾರ, ತಂಟೆ ತಕರಾರುಗಳು ಇದ್ದಲ್ಲಿ ಪ್ರಕಟಣೆಯಾದ 15 ದಿನಗಳ ಒಳಗೆ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿರುತ್ತದೆ. ಮೇಲ್ಕಂಡ ಅವಧಿ ಮುಗಿದ ನಂತರ ಬರುವ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ ಎಂಬುದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ, ಮೈಸೂರು ನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವ ಗೊರೂರು ಗ್ರಾಮದ ಆಶ್ರಯ ಯೋಜನೆಯಡಿ ಮಂಜೂರಾಗಿರುವ ಮನೆ ನಂ.631ರ ವಿಸ್ತೀರ್ಣ 20X30 ಅಡಿಗಳುಳ್ಳ ನಿವೇಶನಕ್ಕೆ ಚಕ್ಕುಬಂಧಿ:-
ಪೂರ್ವಕ್ಕೆ : ಮನೆ ನಂ.630, ಪಶ್ಚಿಮಕ್ಕೆ : ಮನೆ ನಂ.632, ಉತ್ತರಕ್ಕೆ : ಮನೆ, ದಕ್ಷಿಣಕ್ಕೆ : ರಸ್ತೆ

ಸಹಿ/- ಎಂ.ಪಿ.ತಮ್ಮಯ್ಯ.ಬಿ.ಎ, ಎಲ್.ಎಲ್.ಬಿ
ವಕೀಲರು ಮತ್ತು ಕಾನೂನು ಸಲಹೆಗಾರರು
ವಿಳಾಸ:- ಕಛೇರಿ ಸಂ.519, ಶ್ರೀನಿವಾಸ ಕಾಂಪ್ಲೆಕ್ಸ್, ತ್ಯಾಗರಾಜ ರಸ್ತೆ, ಅಗ್ರಹಾರ, ಕೆ.ಆರ್.ಮೊಹಲ್ಲಾ, ಮೈಸೂರು 15,
ಮೊ.: 9845304457

ದಿನಾಂಕ: 21/10/2024